ಸಾಹಿತ್ಯ ದಾಸೋಹ - 232

ಸಂಚಿಕೆ 56 – ಜನವರಿ 2025

14.12.2024ರ ದಾಸೋಹದ ಬರಹಗಳ ಸಂಕಲನ



"ಹೊಯ್ಸಳರ ಶಿಲ್ಪಕಲೆ"





ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

232ನೆಯ ಸಾಹಿತ್ಯ ದಾಸೋಹವು 14ನೆಯ ಡಿಸೆಂಬರ್ 2024ರಂದು ನಮ್ಮ ನೋಡಿಯೋ ಸಾಹಿತ್ಯ ವೇದಿಕೆಯಲ್ಲಿ ಶ್ರೀ ಕೆ.ಆರ್.ಎಸ್.ಮೂರ್ತಿಯವರ ಅಧ್ಯಕ್ಷತೆಯಲ್ಲಿ ಅಂತರಜಾಲ ಗೂಗಲ್ ಮೀಟ್ ಮುಖೇನ ನಡೆಯಿತು. ಈ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳು, ಅಧ್ಯಕ್ಷೀಯ ಅನಿಸಿಕೆಗಳು, ಕವಿಮನ ಅಂಕಣದ ಕವನಗಳು ಮತ್ತು ತಿಂಗಳ ಬೆಳಕು ಕಾರ್ಯಕ್ರಮದ ವರದಿಗಳು ಈ ಸಂಚಿಕೆಯಲ್ಲಿದೆ.

ಹಿಂದಿನ ಸಂಚಇಕೆಯಲ್ಲಿ ತಿಳಿಸಿದಂತೆ ನಾಡಿನ ಖ್ಯಾತ ಹಾಸ್ಯ ಬರಹಗಾರ ಶ್ರೀ ಎಂ.ಎಸ್. ನರಸಿಂಹ ಮೂರ್ತಿಯವರು ತಮ್ಮ 75 ವಸಂತಗಳನ್ನು ಪೂರೈಸಿದ ಸಂದರ್ಭದಲ್ಲಿ ನಮ್ಮ ವೇದಿಕೆಯ ಸದಸ್ಯರು ಬರೆದ ವಿವಿಧ ಬರಹಗಳನ್ನು ಒಳಗೊಂಡ 'ಎಂಎಸ್ಎನ್ ನಗೆಹಾರ' ಎಂಬ ವಿಶೇಷ ಸಂಚಿಕೆಯನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇದೊಂದು ನಮ್ಮ ವೇದಿಕೆಯ ವಿಶೇಷ ಪ್ರಯತ್ನ ಎನ್ನಬಹುದು.

ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಬರಹಗಳ ಬಗ್ಗೆಯೂ ತಮ್ಮ ಅನಿಸಿಕೆಗಳನ್ನು ನೀಡಿದ ಶ್ರೀ ಕೆ.ಆರ್.ಎಸ್. ಮೂರ್ತಿಯವರಿಗೂ, ಎಲ್ಲ ಬರಹಗಾರರಿಗೂ ಮತ್ತು ನಮ್ಮ ತಾಂತ್ರಿಕ ತಂಡದವರಿಗೂ ಧನ್ಯವಾದಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 22.02.2025

ದಾಸೋಹದ ಪುಟಗಳಲ್ಲಿ...

ಮುಖಚಿತ್ರ ; 'ಹೊಯ್ಸಳರ ಶಿಲ್ಪಕಲೆ" (ಚಿತ್ರ ಕೃಪೆ – ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 232


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೧೪.೧೨.೨೦೨೪ರಂದು ಇಳಿ ಮಧ್ಯಾಹ್ನ ೩.೩೦ಕ್ಕೆ ಸರಿಯಾಗಿ ಡಿಸೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಅಂತರಜಾಲ ಗೂಗಲ್ ಮೀಟ್ ಮುಖೇನ ಆರಂಭವಾಯಿತು. ಶ್ರೀ ಕೆ. ಎನ್. ಮಹಾಬಲ ಅವರು ಸಭೆಯ ಸಾರಥ್ಯ ವಹಿಸಿ ಔಪಚಾರಿಕವಾಗಿ ಎಲ್ಲರನ್ನೂ ಆಮಂತ್ರಿಸಿ, ದಾಸೋಹಕ್ಕೆ ಚಾಲನೆ ನೀಡಿದರು. .

ಮೊದಲಿಗೆ ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಕೆ.ಆರ್.ಎಸ್.ಮೂರ್ತಿಯವರನ್ನು ಪರಿಚಯಿಸಿ, ಎಲ್ಲರನ್ನೂ ಸ್ವಾಗತಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ವೇದಿಕೆಯ ಸದಸ್ಯರ ಹಲವು ವೈವಿಧ್ಯಮಯ ಚಟುವಟಿಕೆಗಳನ್ನು ಪ್ರಸ್ತಾಪಿಸುತ್ತಾ,

- ಪ್ರಪ್ರಥಮವಾಗಿ ಶ್ರೀಮತಿ ನಿರ್ಮಲ ಜಿ.ವಿ. ಮತ್ತು ಶ್ರೀಮತಿ ಸುಧಾ, ಮೈಸೂರು ಅವರು ಜಂಟಿಯಾಗಿ ಲೇಖಿಸಿರುವ "ವಿಜ್ಞಾನ ಲೋಕದ ಧೃವತಾರೆಗಳು", ೩೩ ವಿಜ್ಞಾನಿಗಳ ಪರಿಚಯ ಲೇಖನಗಳ ಸಂಕಲನದ ಕುರಿತು ವಿವರಿಸಿ; ಪುಸ್ತಕವು ಬಿಡುಗಡೆಯಾಗುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.
- ಶ್ರೀ ನೀಲಕಂಠ ಕೃಷ್ಣಾಜಿ ಕುಲಕರ್ಣಿ ಅವರ "ಚಿದಾನಂದ" ಲಲಿತ ಪ್ರಬಂಧ ಸಂಕಲನವು ಬಿಡುಗಡೆಯಾಗಿದ್ದು, ಅತ್ಯಂತ ಸಂವೇದನಾತ್ಮಕ ಲೇಖಕರೆನಿಸಿರುವ ಅವರ ಈ ಪುಸ್ತಕವನ್ನು ಎಲ್ಲರೂ ಕೊಂಡು ಪ್ರೋತ್ಸಾಹಿಸಲು ಕರೆ ನೀಡಿದರು.
- ಕು. ಶೀಲಾ ಅರಕಲಗೂಡು ಅವರ "ಕ–ಕಾರ ಕವನ ಹಾಗೂ ಕನ್ನಡಿಗರ ಹಾಡು'' ಪುಸ್ತಕವು ಡಿಸೆಂಬರ್ ೨೦, ೨೦೨೪ರಂದು ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿರುವುದು ವೇದಿಕೆಗೆ ಹೆಮ್ಮೆಯ ವಿಷಯ ವೆಂದು ತಿಳಿಸಿ, ಹರುಷದಿಂದ ಅಭಿನಂದಿಸಿದರು.
- ಶ್ರೀಮತಿ ಶಾಂತಾ ನಾಗಮಂಗಲ ಅವರ ಎರಡನೆಯ ಪುಸ್ತಕ, "ಪಟ ಗಾಳಿಯಲಿ ತೇಲಿ" ಪ್ರಬಂಧ ಸಂಕಲನವು ಬಿಡುಗಡೆಗೆ ಸಿದ್ಧವಿರುವ ಬಗ್ಗೆ ಮಾಹಿತಿ ನೀಡಿ ಅಭಿನಂದಿಸಿದರು.
- ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ "ಸ್ತ್ರೀ ಎಂದರೆ ಅಷ್ಟೇ ಸಾಕೇ – ವರ್ತಮಾನದ ತಲ್ಲಣಗಳು" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದ ಡಾ.ಶುಭಶ್ರೀ ಪ್ರಸಾದ್ ಅವರನ್ನು ಅಭಿನಂದಿಸಿದರು.
- ೨೮.೧೨.೨೦೨೪ ರಂದು ವೇದಿಕೆಯ ತಿಂಗಳ ಬೆಳಕು ಕಾರ್ಯಕ್ರಮದಲ್ಲಿ ಶ್ರೀ ಕೆಂಗೇರಿ ಚಕ್ರಪಾಣಿ ಅವರಿಂದ "ಹೊಯ್ಸಳರ ಶಿಲ್ಪಕಲೆ" ಕುರಿತ ಉಪನ್ಯಾಸ ಏರ್ಪಡಿಸಲಾಗಿದೆ ಎಂದು ತಿಳಿಸಿದರು.



- ಬರುವ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ವೇದಿಕೆಯ ಹಿರಿಯ ಸದಸ್ಯ ಹಾಗೂ ಬ್ಯಾಂಕನ್ನಡದ ರೂವಾರಿ ಶ್ರೀ ಪಾ.ರಾಜಗೋಪಾಲ ಅವರ ಸನ್ಮಾನ ಸಮಾರಂಭವನ್ನು ನಡೆಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ನಡೆಯುತ್ತಿರುವ ಸಿದ್ಧತೆಗಳ ಬಗ್ಗೆ ತಿಳಿಸಿದರು.
- ವೇದಿಕೆಯ ಸದಸ್ಯರಿಂದ ರಚಿತವಾದ "ತುಂತುರು", ಸಣ್ಣ ಕಥಾ ಸಂಕಲನದ ೭೦೦ ಪ್ರತಿಗಳು ಈಗಾಗಲೇ ಮಾರಾಟವಾಗಿರುವ ಮಾಹಿತಿ ನೀಡಿ, ಇದಕ್ಕೆ ಕಾರಣೀಭೂತರಾದ ಎಲ್ಲರನ್ನೂ ಅಭಿನಂದಿಸಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಹತ್ತೊಂಬತ್ತು ಸದಸ್ಯರು ಪ್ರಸ್ತುತಿಗಾಗಿ ನೋಂದಾಯಿಸಿದ್ದು, ಹದಿನೆಂಟು ಲೇಖಕರು ತಮ್ಮ ಸ್ವರಚಿತ ಬರಹಗಳನ್ನು ವಾಚಿಸಿದರು.

ವಿವಿಧ ಪ್ರಸ್ತುತಿಗಳ ವಾಚನವು ಮುಗಿದ ನಂತರ ಅಧ್ಯಕ್ಷರಾದ ಶ್ರೀ.ಕೆ.ಆರ್.ಎಸ್.ಮೂರ್ತಿ ಅವರು ಪ್ರತಿಯೊಂದು ಪ್ರಸ್ತುತಿಯ ಕುರಿತು ತಮ್ಮ ಅಧ್ಯಕ್ಷೀಯ ನುಡಿಗಳನ್ನು ದಾಖಲಿಸಿದರು. ಈ ಬಾರಿಯ ದಾಸೋಹದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಆಹ್ವಾನವಿತ್ತ ಸಂಚಾಲಕ ಮಂಡಳಿಗೆ ಆಭಾರ ವ್ಯಕ್ತಪಡಿಸುವ ಮೂಲಕ ತಮ್ಮ ಮಾತುಗಳನ್ನು ಆರಂಭಿಸಿದ ಅವರು, ಸಾಹಿತ್ಯಕ್ಕೆ ಸಮಯ ಮೀಸಲಿಡುವ ಕಾರ್ಯಕ್ರಮದ ಕರೆಗೆ ಸದಾ ಸಿದ್ಧ ಎಂದು ತಿಳಿಸಿ, ಸಲಿಲದಂತಹ ಸಾಹಿತ್ಯವು ಕಾಲಕಾಲಕ್ಕೆ ಬದಲಾಗುವುದಲ್ಲದೆ ಬದಲಾವಣೆಗೆ ಸದಾ ಒಗ್ಗಿಕೊಳ್ಳುತ್ತದೆ ಎಂದರು. ಹಳಗನ್ನಡ ಹಾಗೂ ಹೊಸ ಸಾಹಿತ್ಯ ಎರಡನ್ನೂ ಜೊತೆ ಜೊತೆಯಾಗಿ ಪೋಷಿಸುತ್ತಿರುವ ವೇದಿಕೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ, ದಾಸೋಹದ ಪ್ರತೀ ಪ್ರಸ್ತುತಿಗಳ ಜೀವಾಳವನ್ನು, ಅವುಗಳಲ್ಲಿ ಕಂಡ ಘನಾತ್ಮಕ ಅಂಶಗಳನ್ನು ಎತ್ತಿ ವಿಶ್ಲೇಷಿಸಿ ಅಧ್ಯಕ್ಷ ಸ್ಥಾನದ ಘನತೆಗೆ ಪೂರ್ಣ ನ್ಯಾಯ ಒದಗಿಸಿದರು.

ಕೊನೆಯದಾಗಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಡಿಸೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ.ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ.ರಾಧಿಕಾ.ವಿ.ಗುಜ್ಜರ್
ವಿಡಿಯೋ ಮುದ್ರಣ : ಶ್ರೀ.ರವಿ ಕುಸಬಿ
ಪಿಡಿಎಫ್ ಸಂಚಿಕೆ ರಚನೆ: ಶ್ರೀ ಎಸ್. ಶೃಂಗೇಶ್ವರ ಶರ್ಮ

ಸಂಪೂರ್ಣ ಸಾಹಿತ್ಯ ದಾಸೋಹ ಕಾರ್ಯಕ್ರಮವನ್ನು ಸಮನ್ವಯ ಸಮಿತಿಯ ಯುಟ್ಯೂಬ್ ವಾಹಿನಿಯಲ್ಲಿಯೂ ವೀಕ್ಷಿಸಬಹುದು.

***

ತಿಂಗಳ ಬೆಳಕು - 10

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಹೊಯ್ಸಳರ ಶಿಲ್ಪಕಲೆ"

ಉಪನ್ಯಾಸಕರು: ಶ್ರೀ ಕೆ. ಚಕ್ರಪಾಣಿ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

28.12.2024ರಂದು ಶನಿವಾರ ಸಂಜೆ ಐದು ಗಂಟೆಗೆ ನೋಡಿಯೋ ಸಾಹಿತ್ಯ ದಾಸೋಹ ಅಂತರಜಾಲ ವೇದಿಕೆಯಲ್ಲಿ ಶ್ರೀ ಕೆಂಗೇರಿ ಚಕ್ರಪಾಣಿಯವರಿಂದ ಹೊಯ್ಸಳರ ಶಿಲ್ಪಕಲೆಯ ಬಗ್ಗೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.



ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀ ರವಿ ಕುಸಬಿಯವರು ಅಗಲಿದ ಮಾಜಿ ಪ್ರಧಾನಮಂತ್ರಿಗಳಾದ ಮನಮೋಹನ ಸಿಂಗ್ ರವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ ಅವರಿಗೆ ನುಡಿನಮನ ಸಲ್ಲಿಸಿದರು.

ಶ್ರೀ ಕೆ. ಜನಾರ್ದನ ತುಂಗರವರು ಉಪನ್ಯಾಸಕಾರರಾದ ಶ್ರೀ ಕೆ ಚಕ್ರಪಾಣಿಯವರನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಚಕ್ರಪಾಣಿಯವರು ಮಾತು ಆರಂಭಿಸಿ, ಹಿಂದೆ ದೇವಾಲಯಗಳ ನಿರ್ಮಾಣದಲ್ಲಿ ಒಂದೊಂದು ರಾಜಮನೆತನದವರು ಒಂದೊಂದು ಶೈಲಿ ಅನುಸರಿಸುತ್ತಿದ್ದರು. ಬಾದಾಮಿ ಚಾಲುಕ್ಯರು ಗುಹಾಂತರ ದೇವಾಲಯಗಳನ್ನು ನಿರ್ಮಿಸಿದರು. ಹೊಯ್ಸಳರು ಕನ್ನಡ ನಾಡಿನ ಕೀರ್ತಿಯನ್ನು ವಿಶ್ವ ಮಟ್ಟಕ್ಕೆ ಏರಿಸಿದರು. ಹೊಯ್ಸಳ ಶೈಲಿ ವಿಭಿನ್ನವಾದುದು ಎಂದರು. ತಮ್ಮ ಉಪನ್ಯಾಸದುದ್ದಕ್ಕೂ ಅನೇಕ ಅಂಶಗಳನ್ನು ಚಿತ್ರಸಹಿತ ವಿವರಿಸಿದ ಅವರ ಉಪನ್ಯಾಸದ ಮುಖ್ಯಾಂಶಗಳು ಹೀಗಿವೆ:

ಸುಮಾರು ಹತ್ತನೇ ಶತಮಾನದ ಕೊನೆಯ ಭಾಗದಿಂದ 14ನೇ ಶತಮಾನದ ಅಂತ್ಯದವರೆಗೂ ಆಡಳಿತ ನಡೆಸಿದ ದ್ವಾರಸಮುದ್ರದ ಹೊಯ್ಸಳರು ಅದ್ಭುತ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಅಂಗಡಿ ಮೊದಲು ಇವರ ರಾಜಧಾನಿಯಾಗಿತ್ತು. ಅಲ್ಲಿ ಈಗಲೂ ಅವರ ಆರಾಧ್ಯ ದೇವತೆ ವಾಸಂತಿಕಾ ದೇವಾಲಯವಿದೆ. ನಂತರ ಇವರು ರಾಜಧಾನಿಯನ್ನು ಬೇಲೂರು ಹಳೇಬೀಡಿಗೆ ಬದಲಿಸಿದರು. ಹೊಯ್ಸಳರು ತಮ್ಮ ಶಾಸನಗಳಲ್ಲಿ ತಾವು ಯಾದವ ವಂಶದವರೆಂದೂ, ಇದರ ಸ್ಥಾಪಕನಾದ ಸಳನು ತನ್ನ ಗುರುಗಳು 'ಹೊಯ್ ಸಳ' ಎಂದು ಆದೇಶಿಸಿದಾಗ ಅಂಗಡಿಯ ವಾಸಂತಿಕಾ ದೇವಾಲಯದಲ್ಲಿ ಹುಲಿಯನ್ನು ಕೊಂದದ್ದರಿಂದ ಹೊಯ್ಸಳ ವಂಶವೆಂದು ಹೆಸರಾಯಿತೆಂದೂ ಹೇಳಲಾಗಿದೆ.

ಸಳನಿಂದ ಆರಂಭವಾದ ಹೊಯ್ಸಳರಲ್ಲಿ ಎರೆಯಂಗ, ಬಲ್ಲಾಳ, ವಿಷ್ಣುವರ್ಧನ, ಉದಯಾದಿತ್ಯ, ಸೋಮೇಶ್ವರ, ರಾಮನಾಥ, ನರಸಿಂಹ ಹೀಗೆ ಅನೇಕ ಅರಸರು ಆಳ್ವಿಕೆ ನಡೆಸಿದ್ದಾರೆ. ಕೊನೆಯ ದೊರೆಯಾದ ವಿರುಪಾಕ್ಷ ಬಲ್ಲಾಳನು ಮಧುರೆಯ



ಸುಲ್ತಾನನನ್ನು ಎದುರಿಸಿ ಸೋಲಿಸಿದನು. ಆದರೆ ಶತ್ರುಗಳ ಕುತಂತ್ರದಿಂದ ಕೊಲೆಯಾಗಿ ಹೊಯ್ಸಳ ವಂಶ ಅಸ್ತಂಗತವಾಗುತ್ತದೆ. ಮುಂದೆ ಹೊಯ್ಸಳರ ಪ್ರಭಾವದಿಂದಲೇ ವಿಜಯನಗರ ಸಾಮ್ರಾಜ್ಯ ಉದಯವಾಗುತ್ತದೆ.

ಹೊಯ್ಸಳರು ತಮ್ಮ ಆಡಳಿತಾವಧಿಯಲ್ಲಿ ಕಲೆ, ಸಾಹಿತ್ಯ, ಸಂಗೀತಕ್ಕೆ ಬಹಳ ಪ್ರೋತ್ಸಾಹ ನೀಡುತ್ತಿದ್ದರಲ್ಲದೆ ಸಾವಿರಾರು ದೇವಾಲಯಗಳನ್ನೂ ನಿರ್ಮಿಸಿದರು. ಕಾವೇರಿ ತುಂಗಭದ್ರಾ ಪ್ರದೇಶಗಳಲ್ಲಿ ಕಲ್ಯಾಣ ಚಾಲುಕ್ಯರ ಜೊತೆ ಜೊತೆಗೆ ಇವರು ನಿರ್ಮಿಸಿದ ದೇವಾಲಯಗಳು ವಿಪುಲ ಸಂಖ್ಯೆಯಲ್ಲಿವೆ.

ಜೇಮ್ಸ್ ಫರ್ಗುಸನ್ ತನ್ನ 'ಭಾರತೀಯ ದೇವಾಲಯಗಳು' ಎಂಬ ಪುಸ್ತಕದಲ್ಲಿ ಹೊಯ್ಸಳ ದೇವಾಲಯದ ಬಗ್ಗೆ ವಿಸ್ತೃತವಾಗಿ ಬರೆದಿದ್ದಾನೆ. ನಂತರವೂ ಹಲವು ವಿದ್ವಾಂಸರು ಹೊಯ್ಸಳ ಶೈಲಿ ಎಂಬ ಪ್ರತ್ಯೇಕ ಶೈಲಿಯನ್ನು ಗುರುತಿಸಿದ್ದಾರೆ. ಹೊಯ್ಸಳರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು. ಹಾಗಾಗಿ ಕಲ್ಯಾಣ ಚಾಲುಕ್ಯರ ಮಾದರಿಯನ್ನೇ ಅವರು ಅನುಸರಿಸಿದರು. ಇವರು ಹೆಚ್ಚಾಗಿ ಭೂಮಿಯಿಂದ ತೆಗೆಯುವಾಗ ಮೃದುವಾಗಿದ್ದು, ನಂತರ ಕಡುಶಿಲೆಯಾಗುವ ಬಳಪದ ಕಲ್ಲುಗಳನ್ನು ಸೂಕ್ಷ್ಮ ಕೆತ್ತನೆಗೆ ಉತ್ತಮವೆಂದು ಬಳಸುತ್ತಿದ್ದರು. ಹೊಯ್ಸಳರ ಕಲೆಯ ಬಗ್ಗೆ ವಿದ್ವಾಂಸರು ಇವರ ಶಿಲ್ಪಕಲೆ ಮೇಸ್ತ್ರಿಗಳು ಕಟ್ಟಿದ ಸಾಮಾನ್ಯ ಕಟ್ಟಡಗಳಂತೆ ಆಗದೆ, ಗಂಧದ ಗುಡಿಕಾರರ, ಲೋಹಕಾರಕರ, ಸ್ವರ್ಣಕಾರಕರ, ಕುಶಲ ಕಸುಬುಗಳ ಮೇಳೈಕೆಯಂತಿದೆ ಎಂದಿದ್ದಾರೆ.



ಇದುವರೆಗೂ ಸುಮಾರು 500ಕ್ಕೂ ಹೆಚ್ಚು ಹೊಯ್ಸಳ ದೇವಾಲಯಗಳನ್ನು ಗುರುತಿಸಲಾಗಿದೆ. ಇನ್ನೂ ಬಹಳಷ್ಟು ಇವೆ. ಅರಸೀಕೆರೆ ತಾಲೂಕಿನಲ್ಲಿಯೇ ಸುಮಾರು 200 ದೇವಾಲಯಗಳಿವೆ.



ನಕ್ಷತ್ರ ಆಕಾರದ ಸ್ಥಳವಿನ್ಯಾಸ ಶೈಲಿಯನ್ನು ಹೊಯ್ಸಳರು ಅನುಸರಿಸಿದರು. ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ, ಪಂಚಕೂಟ ಮತ್ತು ಜೋಡಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಏಕಕೂಟ ಎಂದರೆ ಒಂದು ಗರ್ಭಗೃಹ. ಹಾಗೆ ಐದು ಗರ್ಭಗೃಹಗಳವರೆಗೂ ದೇವಾಲಯಗಳಿವೆ. ಚತುಷ್ಕೂಟ ಅಂದರೆ ನಾಲ್ಕು ಗೋಪುರಗಳ ದೇವಾಲಯ, ಹಾಸನದ ಸಮೀಪ ದೊಡ್ಡಗದ್ದವಳ್ಳಿಯಲ್ಲಿ ಇದೆ. ಇಲ್ಲಿ ಕಾಳಿ, ಲಕ್ಷ್ಮಿ ಭುವನಾಥ ಮತ್ತು ವಿಷ್ಣುವಿನ ವಿಗ್ರಹಗಳಿವೆ. (ವಿಷ್ಣುವಿನ ವಿಗ್ರಹ ಕಳವಾಗಿದೆ) ಇಲ್ಲಿ ಕಾಳಿಯ ವಿಗ್ರಹ ಅದ್ಭುತವಾಗಿದ್ದು ದ್ವಾರಪಾಲಕರ ಶಿಲೆಯಲ್ಲಿ ಮೂಳೆಗಳನ್ನು ಕೆತ್ತಿರುವ ರೀತಿಯು ಮನೋಜ್ಞವಾಗಿದೆ 1108ರಲ್ಲಿ ಕೊಲ್ಹಣ ರಾವುತ ಎಂಬ ವ್ಯಾಪಾರಿ ಮತ್ತು ಆತನ ಪತ್ನಿ, ಅಭಿನವ ಕೊಲ್ಲಾಪುರ ಎನ್ನಲಾದ ಈ ದೇವಾಲಯವನ್ನು ಕಟ್ಟಿಸಿದರಂತೆ. (12ನೇ ಶತಮಾನದಲ್ಲಿಯೇ ಕೊಲ್ಲಾಪುರ ಖ್ಯಾತಿ ಹೊಂದಿತ್ತು).

ಪಂಚಕೂಟ ದೇವಾಲಯಕ್ಕೆ ಕೃಷ್ಣರಾಜಪೇಟೆ ತಾಲ್ಲೂಕಿನ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ ಉತ್ತಮ ಉದಾಹರಣೆ. ಜೋಡಿ ದೇವಾಲಯವನ್ನು


ಹೊಳೆನರಸೀಪುರ ತಾಲೂಕಿನ ಮೊಸಳೆ ಹೊಸಳ್ಳಿಯಲ್ಲಿ ನೋಡಬಹುದು. ಬೆಳವಾಡಿ ವೀರನಾರಾಯಣ ದೇವಾಲಯ ಅತ್ಯಂತ ಉದ್ದವಾದ ತ್ರಿಕೂಟ ದೇವಾಲಯ. ಇಲ್ಲಿ 1150ರಲ್ಲಿ ನಿರ್ಮಿಸಿದ ಅತ್ಯಂತ ಸುಂದರವಾದ ವೇಣುಗೋಪಾಲ ಸ್ವಾಮಿಯ ಮೂರ್ತಿ ಇದೆ. ಕದಂಬನಾಗರ ಶೈಲಿಯಲ್ಲಿ ಮೆಟ್ಟಿಲು ಮೆಟ್ಟಿಲುಗಳ ಆಕಾರ ಕಾಣಬಹುದು.

ಹೊಯ್ಸಳ ದೇವಾಲಯಗಳ ಪ್ರವೇಶದಲ್ಲಿ ಮುಖ ಮಂಟಪವನ್ನು ಬಹಳ ಸುಂದರವಾಗಿ ನಿರ್ಮಿಸಿರುತ್ತಾರೆ. ಆನೆ ಮತ್ತು ದ್ವಾರಪಾಲಕರು ಇಲ್ಲಿನ ವಿಶೇಷ ಆಕರ್ಷಣೆ. ವೈಷ್ಣವ ದೇವಾಲಯಗಳಲ್ಲಿ ಜಯ-ವಿಜಯ ಮತ್ತು ಶೈವ ದೇವಾಲಯಗಳಲ್ಲಿ ಶಂಕನಿಧಿ ಪದ್ಮನಿಧಿ ಎಂಬ ದ್ವಾರಪಾಲಕರನ್ನು ಕೆತ್ತಲಾಗಿದೆ. ಮುಖ ಮಂಟಪ ಅಥವಾ ನವರಂಗ ತೆರೆದುಕೊಳ್ಳುವ ಭಾಗದಲ್ಲಿ ಪರಮಾದ್ಭುತ ಶಿಲ್ಪಗಳಿರುತ್ತವೆ ಉದಾಹರಣೆಗೆ ಬೇಲೂರಿನ ದೇವಾಲಯದ ದ್ವಾರಪಾಲಕರ ಸೂಕ್ಷ್ಮ ಕೆತ್ತನೆಗಳು ದೇವತಾ ಮೂರ್ತಿಯಷ್ಟೇ ಸುಂದರವಾಗಿ ಕಾಣಿಸುತ್ತದೆ. ಕಬ್ಬಿಣದಲ್ಲಿ ಎರಕ ಹೋಯ್ದಂತೆ ಕಾಣುವ ಶಿಲಾಮೂರ್ತಿಗಳು ನೋಡುಗರನ್ನು ಬೆರಗಾಗಿಸುತ್ತವೆ.

ದೇವಾಲಯದ ಪ್ರದಕ್ಷಿಣೆ ಮಾಡುವಾಗ ದೇವಾಲಯದ ಸೌಂದರ್ಯವನ್ನು ಆಸ್ವಾದಿಸುವಂತೆ ಪ್ರದಕ್ಷಿಣಾ ಪಥವಿರುತ್ತದೆ. ಆನೆ, ಕುದುರೆ, ಒಂಟೆ ಸಾಲುಗಳು ಚಿತ್ರಪಟಿಕೆ, ಅಂದರೆ ರಾಮಾಯಣ ಮಹಾಭಾರತ ಭಾಗವತದ ಚಿತ್ರಗಳನ್ನು ನೋಡುತ್ತೇವೆ. ಕಣ್ಣಿನ ನೇರಕ್ಕೆ ಒಂದಾದ ನಂತರ ಒಂದು ಕಾಣುವಂತೆ ದೃಶ್ಯಾವಳಿಗಳು ತೆರೆದುಕೊಳ್ಳುತ್ತವೆ. ಪದ್ಮವ್ಯೂಹ ವಿನ್ಯಾಸಗಳನ್ನು ಕಾಣಬಹುದು. ಸೋಮನಾಥಪುರ ದೇವಾಲಯದಲ್ಲಿ 250 ಆನೆಗಳಿದ್ದು, ಒಂದು ಆನೆಯಂತೆ ಮತ್ತೊಂದು ಇಲ್ಲ ಎನ್ನುವುದು ವಿಶಿಷ್ಟ. ಕೆಲವು ಕಡೆಗಳಲ್ಲಿ ಹೊರಬಿತ್ತಿ ಅಥವಾ ಅಧಿಷ್ಠಾನ ಪಟ್ಟಿಯಲ್ಲಿ ಚಿತ್ರಗಳಿಲ್ಲದೆ ಕೇವಲ ಪಟ್ಟಿಗಳಿರುತ್ತವೆ.

ಜಿನ ದೇವಾಲಯಗಳಲ್ಲಿ (ಶಾಂತಿನಾಥ ಬಸದಿ) ಜಿನಮೂರ್ತಿಗೆ ಹೆಚ್ಚಿನ ಅಲಂಕಾರವಿಲ್ಲದ ಕಾರಣ ಪಕ್ಕದ ಚಾಮರಧಾರಿ ಗಳನ್ನು ಅದ್ಭುತವಾಗಿ ಚಿತ್ರಿಸುತ್ತಾರೆ.

ಜಲಾಂದ್ರ ಎಂದರೆ ಕಿಟಕಿಗಳು ಮತ್ತೊಂದು ಅಲಂಕಾರಿಕ ಭಾಗ. ವಜ್ರಾಕೃತಿ ಅಥವಾ ಚೌಕಾಕಾರದಲ್ಲಿ ಮಾಡಿರುತ್ತಾರೆ. ಇವುಗಳ ಮೂಲಕ ಬೆಳಕು ಸ್ತಂಭ ಅಥವಾ ಮೂರ್ತಿಗಳ ಮೇಲೆ ಬಿದ್ದಾಗ ಸೌಂದರ್ಯ ಇಮ್ಮಡಿಗೊಳ್ಳುತ್ತದೆ.



ಸೋಮನಾಥಪುರ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ



ದೇವಾಲಯದ ಶಿಖರ ಮತ್ತೊಂದು ಅಂದವಾದ ಭಾಗ. ಶಿಲ್ಪಿಗಳು ಶಿಖರವನ್ನು ಬಹಳಷ್ಟು ವೈಭವೀಕರಿಸಿರುತ್ತಾರೆ. ಅನೇಕ ದೇವಾಲಯಗಳಲ್ಲಿ ಶಿಖರದ ತುದಿಯಲ್ಲಿ ಕಲಶ ಇರುತ್ತದೆ. ಪ್ರಕೃತಿ ವಿಕೋಪ ಮತ್ತು ದಾಳಿಕೋರರಿಂದ ಹಲವು ಕಡೆ ಕಲಶಗಳು ನಾಶವಾಗಿವೆ. ಶಿಖರದ ಮೇಲೆ ಕಲಶದ ಅಲಂಕಾರ ಸುಸ್ಥಿತಿಯಲ್ಲಿರುವುದನ್ನು ಕೆಲವೇ ದೇವಾಲಯಗಳಲ್ಲಿ ಕಾಣಬಹುದು.

ಮದನಿಕೆಯರ ಶಿಲ್ಪಗಳು ದೇವಾಲಯಗಳ ಮತ್ತೊಂದು ವಿಶೇಷ ಆಕರ್ಷಣೆ. ಬೇಲೂರು ಚೆನ್ನಕೇಶವ ದೇವಾಲಯದಲ್ಲಿ 48 ಶಿಲಾಬಾಲಿಕೆಯರಿದ್ದು, ಡಿವಿಜಿಯವರು ತಮ್ಮ ಅಂತಃಪುರ ಗೀತೆಯಲ್ಲಿ ಎಲ್ಲ ಬಾಲಿಕೆಯರನ್ನೂ ಬಣ್ಣಿಸಿದ್ದಾರೆ. ದೇವಾಲಯದ ಬಿತ್ತಿಯ ನೀರು ಗೋಡೆಗೆ ಬೀಳದಂತೆ ತಡೆಯಲು ಈ ಮದನಿಕೆಯರ ಮೂರ್ತಿಗಳು ಸಹಕಾರಿ ಎನ್ನುವರು. ಸುಖಭಾಷಿಣೆ, ದರ್ಪಣ ಸುಂದರಿ ಮೊದಲಾದ ಶಿಲಾಬಾಲಿಕೆಯರು ಅಥವಾ ಸಾಲಭಂಜಿಕೆಯರು ಜಗದ್ವಿಖ್ಯಾತ. ಹಲವು ದೇವಾಲಯಗಳಲ್ಲಿ ಇದ್ದಂತಹ ಮದನಿಕೆಯ ವಿಗ್ರಹಗಳು ಮತ್ತು ಅಮೂಲ್ಯ ಮೂರ್ತಿಗಳು ಕಳುವಾಗಿವೆ .

ದೇವಾಲಯದ ಶಿಖರದ ಮುಂದಿನ ಭಾಗ ಸುಖನಾಸಿ. ಪ್ರಧಾನ ಗರ್ಭಗುಡಿಯ ಮೂರ್ತಿಯನ್ನು ಸುಖನಾಸಿಯಲ್ಲಿ ಅಳವಡಿಸುವುದು ವಾಡಿಕೆ. ದೇವಾಲಯದ ಮೇಲ್ಚಾವಣಿ ಮತ್ತೊಂದು ವಿಭಾಗ. ಷಡ್ಜದ ಕೆಳಗಿನ ಒಳಭಾಗ ವಿತಾನ. ತಲೆಯೆತ್ತಿ ನೋಡಿದರೆ ಅದರ ಸೌಂದರ್ಯ ಗೋಚರಿಸುತ್ತದೆ. ವೃತ್ತಾಕಾರದ ಬಹುಪದ್ಮ, ನಟರಾಜ ಅಥವಾ ಅಷ್ಟ ದಿಕ್ಪಾಲಕರನ್ನು ಕಾಣಬಹುದು. ಕೆಲವೆಡೆ ಭುವನೇಶ್ವರಿ, ಉಗ್ರನರಸಿಂಹ ಮುಂತಾದವರನ್ನು ಕಾಣಬಹುದು. ದೇವಾಲಯದ ಸ್ತಂಭಗಳಲ್ಲಿ ತಿರುಗಣೆಯಿಂದ ಮಾಡಿದ ವೃತ್ತಾಕಾರದ ಕಲೆಗಳನ್ನು, ಅಲಂಕಾರಿಕ ಕೆತ್ತನೆ, ರಾಮಾಯಣ ಮೊದಲಾದ ದೃಶ್ಯಗಳನ್ನು ದೇವತಾಮೂರ್ತಿಗಳನ್ನು ಕಾಣಬಹುದು. ಬಾಗಿಲವಾಡದ ಮೇಲೆ ಮಕರತೋರಣ, ಆಚೀಚೆ ದ್ವಾರಪಾಲಕರು, ಮೇಲೆ ಸುಂದರ ಕೆತ್ತನೆಗಳು ಮತ್ತು ಮೂರ್ತಿಗಳಿಂದ ಅಲಂಕರಿಸಿರುತ್ತಾರೆ. ಹೀಗೆ ದೇವಾಲಯದ ಪ್ರತಿಯೊಂದು ವಿಭಾಗಗಳನ್ನೂ ಶಾಸ್ತ್ರ ಗ್ರಂಥಗಳನ್ನು ಅಭ್ಯಾಸಮಾಡಿ ಬಹಳ ಶ್ರದ್ಧೆಯಿಂದ ಸುಂದರವಾಗಿ ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

ಇಟಗಿಯ ಮಹಾದೇವ ದೇವಾಲಯವು ದೇವಾಲಯಗಳ ಚಕ್ರವರ್ತಿ ಎನಿಸಿದೆ. ಬೇಲೂರು, ಹಳೆಬೀಡಿನ ದೇವಾಲಯಗಳ ಬಗ್ಗೆ ಹೇಳಲು ಹಲವು ಗಂಟೆಗಳೇ ಬೇಕಾದೀತು. ಈ ಸುಂದರ ದೇವಾಲಯಗಳ ನಿರ್ಮಾಣದಲ್ಲಿ ಮಹಾಶಿಲ್ಪಿಗಳ ಪಾತ್ರ



ಇಟಗಿಯ ಮಹಾದೇವ ದೇವಾಲಯ

ಮಹತ್ತರವಾದುದು. ಬಳ್ಳಿಗಾವೆಯ ದಾಸೋಜ, ಮಲ್ಲತಮ್ಮ, ಪಿರಿಯಾಂಡ ಹೆಗ್ಗಡೆ, ನಂದಿಯ ಬೈಸೋಜಾ ಮೊದಲಾದ ಹಲವಾರು ಶಿಲ್ಪಿಗಳ ಹೆಸರು ದೊರೆಯುತ್ತವೆ. ಕೆಲವೆಡೆ ಶಿಲ್ಪಿಗಳು ತಮ್ಮ ಹೆಸರು ಕೆತ್ತಿರುವುದನ್ನು ಕಾಣಬಹುದು. ಹೊಯ್ಸಳರ ಶಾಸನಗಳಿಂದ ಆಗಿನ ದೇವಾಲಯಗಳ ನಿರ್ವಹಣೆಗಾಗಿ ದತ್ತಿಯನ್ನು ಬಿಡುತ್ತಿದ್ದರು ಎಂಬ ಅಂಶ ತಿಳಿಯುತ್ತದೆ. ಅಲ್ಲದೆ ಪೂಜಾರಿಗಳು, ನೀರು ಸರಬರಾಜು ಮಾಡುವವರು, ಬನದ ತೋಟಿಗಳು, ರಕ್ಷಕರು, ಮಾಲಕಾರರು ಹೀಗೆ ಹಲವು ವೃತ್ತಿಗಳವರೂ ಅಲ್ಲಿ ವಾಸಿಸುತ್ತಿದ್ದರು. ದೇವಾಲಯವು ಸಾಂಸ್ಕೃತಿಕ ಕೇಂದ್ರವಾಗಿರುತ್ತಿತ್ತು. ದೇವರ ಅಂಗಡಿಯಿಂದ ಬಂದ ಆದಾಯ ದೇವರ ಅಂಗ ಬೊಗಕ್ಕೆ ಸಲ್ಲುವುದು. ಅದನ್ನು ಪೂಜಾ ಕೈಂಕರ್ಯಗಳಿಗಾಗಿ ಬಳಸುತ್ತಿದ್ದರು. ಗದ್ಯಾಣ ಎಂಬುದು ಹೊಯ್ಸಳರ ಕಾಲದ ನಾಣ್ಯದ ಹೆಸರು. ಠೇವಣಿ ಇರಿಸಿ ಬಡ್ಡಿ ಹಣವನ್ನು ದೇವಾಲಯದ ಅಭಿವೃದ್ಧಿಗೆ ಬಳಸುತ್ತಿದ್ದರು. ಇಂತಹ ಹಲವು ಮಾಹಿತಿಗಳು ಶಾಸನಗಳಲ್ಲಿ ದೊರೆಯುತ್ತವೆ.

ಕಾಲಕ್ರಮೇಣ ಹಲವು ದೇವಾಲಯಗಳು ವಿನಾಶದ ಅಂಚಿನಲ್ಲಿದ್ದು, ಈಗ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್‌ನಿಂದ ಅನೇಕ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ನಡೆದಿದೆ.

ಚಕ್ರಪಾಣಿಯವರು ತಮ್ಮ ಉಪನ್ಯಾಸದ ಪ್ರತಿಯೊಂದು ಹಂತದಲ್ಲೂ ದೇವಾಲಯದ ಚಿತ್ರಗಳನ್ನು ಪ್ರದರ್ಶಿಸಿ ವಿವರಿಸಿದರು. ಕಾಳಗಿ, ಡಂಬಳ, ಬಳ್ಳಿಗಾವೆ, ಅರಳುಗುಪ್ಪೆ, ಬೆಳ್ಳೂರು, ಶೆಟ್ಟಿಗೆರೆ, ಕೊಂಡಜ್ಜಿ, ನರಸೀಪುರ, ಬೋರನೂರು, ಸಿಂಧಘಟ್ಟ, ಸೋಮನಾಥಪುರ, ಹಿರೇನಲ್ಲೂರು, ನುಗ್ಗೇಹಳ್ಳಿ ಮುಂತಾದ ಕಡೆಯ ಹಲವಾರು ದೇವಾಲಯಗಳನ್ನು ಪ್ರದರ್ಶಿಸಿ ವಿವರಣೆ ನೀಡಿದ ಶ್ರೀ ಚಕ್ರಪಾಣಿಯವರು. ಅಲ್ಲದೆ, ಕ್ರಿಸ್ತಶಕ 1310ರಲ್ಲಿ ಅಲ್ಲಾವುದ್ದೀನನ ಅಪ್ಪಣೆಯ ಮೇರೆಗೆ ಮಲ್ಲಿಕ್ ಕಾಫರನು ದಂಡೆತ್ತಿ ಬಂದು ಹಳೇಬೀಡಿನ ಹಲವು ದೇವಾಲಯಗಳನ್ನು ನಾಶಪಡಿಸಿ ಇಲ್ಲಿಯ ಸಂಪತ್ತನ್ನು ದೋಚಿದನು ಎಂಬ ಸಂಗತಿಯನ್ನೂ ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ರವಿಕುಸುಬಿಯವರು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

ಈ ಕಾರ್ಯಕ್ರಮದ ಸಂಪೂರ್ಣ ವಿವರಗಳನ್ನು ಸಮನ್ವಯ ಸಮಿತಿಯ ಯುಟ್ಯೂಬ್ ವಾಹಿನಿಯಲ್ಲಿಯೂ ನೋಡಬಹುದು.



ಶ್ರೀ ಲಕ್ಷ್ಮೀನಾರಾಯಣ ದೇವಾಲಯ, ನುಗ್ಗೇಹಳ್ಳಿ

***

ಕವಿಮನ

ಗಾಳಿಪಟ

ಜ್ಯೇಷ್ಠ ಕಳೆದು ಆಷಾಢಕ್ಕೆ ರವಿ ಬಂದಿದ್ದ
ತನ್ನ ಬೇಗೆಯನು ತುಸು ತಗ್ಗಿಸಿದ್ದ.
ತಿಳಿ ನೀಲಿ ವರ್ಣದ ಬಾನಲ್ಲಿ ಚದುರಿದ
ಬಿಳಿ ಮೋಡಗಳಲಿ ಹೊಳಪನು ಬೀರಿದ್ದ.

ನಿರ್ಮಲ ಆಗಸದಲ್ಲೊಂದು ಬಣ್ಣದ ಗಾಳಿಪಟ
ನಡೆಸಿತ್ತು ಸ್ವಚ್ಛಂದದ ಹಾರಾಟ.
ಪಟದ ಮನದಲಿ ಒಳಗೊಳಗೆ ತೊಳಲಾಟ
ಬಿಗಿದ ದಾರದ ವಿರುದ್ಧ ಅದರ ಹೋರಾಟ.

ತಿಳಿಯದದಕೆ ದಾರದ ಕಿಮ್ಮತ್ತು
ಜಂಭದಿ ತೋರಿತು ಗತ್ತು ಗಮ್ಮತ್ತು.
ಸ್ವೇಚ್ಛೆಯಿಂದಿರಬಹುದೇನೋ ಬಂಧನವ ಕಿತ್ತು
ದಾರ ಕಿತ್ತೊಡನೆ ಗೋತಹೊಡೆದು ಬಿತ್ತು.

ಬಂಧನವ ತೊರೆದೊಡೆ ಆಪತ್ತು
ಗ್ರಹಿಸಿತಾಗ ದಾರದ ತಾಕತ್ತು.
ಎಷ್ಟೋ ಬಾರಿ ಹೀಗೇ ಆಡುವುವೆವು
ಹಿಡಿದಿರುವ ಬಂಧನದಿಂ ಹೊರ ಓಡುವುವೆವು.

ಹೊರಗಿನಿಂದ ಕಂಡರೂ ಬಿಗಿದ ಹಾಗೆ
ಒಳಗಿನಿಂದ ಸ್ಥೈರ್ಯ ನೀಡುವುದೇ ಹೀಗೆ.
ಕಣ್ಣಿಗೆ ಕಾಣಿಸದೇ ಅಜ್ಞಾತವಾಗಿ
ಆಸರೆಯಾದ ದಾರಗಳಿಗೆ ಶರಣಾಗಿ.

– ಸ್ನೇಹಾ ಶಶಿಧರ್

04.12.2024

ರಚನೆ

ಒಂದಾತ್ಮವಿರುವುದೆಮ್ಮಲಿ
ಎರಡಾಗಿಹುದು ದೇಹದ ಜೊತೆಯಲಿ
ಮೂರು ನಾಡಿಗಳಿಂದ ಹರಿವ ಶಕ್ತಿ
ಇಡ ಪಿಂಗಳ ಸುಷುಮ್ನದ ಯುಕ್ತಿ

ನಾಲ್ಕರ ಇರವು ಇದು ಒಪ್ಪು
ಬಾಲ್ಯ ಯೌವನ ಪ್ರೌಢ ಮುಪ್ಪು
ಐದು ಪ್ರಾಣದ ಹರಿವು
ಪ್ರಾಣ ಅಪಾನ ವ್ಯಾನ ಉದಾನ ಸಮಾನದ ವರವು

ಆರು ಅರಿವರ್ಗಗಳ ಗತಿಯು
ಕಾಮ ಕ್ರೋಧ ಲೋಭ ಮೋಹ
ಮದಮತ್ಸರಗಳಿಗಿರಲಿ ಮಿತಿಯು

ಏಳು ಚಕ್ರಗಳ ಸುಳಿವು
ಅಳುತಿಹವೀ ದೇಹಕೆ ಉಳಿವು
ಮೂಲಾಧಾರ ಸ್ವಾಧಿಷ್ಠಾನ ಮಣಿಪುರ ಅನಾಹತ
ವಿಶುದ್ಧಿ ಆಜ್ಞಾ ಸಹಸ್ರಾರವು

ಎಂಟು ಎದೆಬೇಕು ಬಾಳ
ನಂಟು ಬೆಳೆಸಿ ಬಿಡಿಸಿಕೊಳ್ಳಲು
ಒಂಭತ್ತು ರಂಧ್ರಗಳ ದೇಹ
ಕಣ್ಣೆರಡು ಕಿವಿಗೆರಡು ಮೂಗಿಗೆರಡು
ಬಾಯ್ಲೊಂದು ಕೆಳಗೆ ಮತ್ತೆರಡು

ಹತ್ತು ಹಲವು ಪರಿಯಲ್ಲಿ ಸೃಷ್ಟಿಯಾಗಿಹ ದೇಹ
ಹೊತ್ತು ಮೆರೆಯುತಿದೆ ಬಿಡದೆ ಮೋಹ

– ರಂಗೋಪಂತ್ ನರಸಿಂಗರಾವ್

11.12.2024

ಕವಿಮನ

ನೆನಪುಗಳು

ನೆನಪುಗಳ ಕಾಳುಗಳು
ಬಿತ್ತನೆಯಾಗುತ್ತಲೇ ಇರುತ್ತವೆ
ಬದುಕಿನ ಹದ ನೆಲದಿ
ಪ್ರಜ್ಞೆಯ ಪಾತಿ ಸಾಲಿನಲ್ಲಿ
ತೋಡದೆಯೂ ಊರುವ
ಸೆರೆ ಹಿಡಿದ ವಿಶೇಷಗಳು
ಕಾಣಲು ತಲೆಯೆತ್ತವವು ನೆಲ ಬಿಟ್ಟು
ಅಂತೆಯೇ ಬೇರೂರದೆಯೂ ಇರವು

ಕಾಲವೇ ಅವುಗಳ ಪೋಷಕ
ಅಲ್ಲೇ ಕರಗಿ ಕಳೆದು ಹೋಗುವವು ಕೆಲವು
ದಶಕಗಳಾದರೂ ಹಸಿ ಉಸುರು

ಅದೊಂದು ಅಳ್ಳಕ ಕ್ಷಣದೆ ದ್ವೇಷಿಸಿದವರ
ಹಾಗೇ ಕ್ಷಮಿಸಿರುತ್ತದೆ ಒಳಗು
ರಿಕ್ತವಾಗಿ ಮೊದಲಿನಂತೆ
ಯುಕ್ತಾಯುಕ್ತಗಳ ಭೇದಕೆ ಅಂಟದೆ

ಕೆಲವೊಂದು ಮುಳ್ಳು
ಜೀವವಿರುವವರೆಗೂ ಘಾಸಿ
ಕಾಮನಬಿಲ್ಲು ಕೆಲವು
ಕರಿಬಂಡೆಯಂತೆ ಭಾರ ಕೆಲವು

ಎದೆಯ ಬೆಚ್ಚಗಾಗಿಸುವ ಹಲವಿದ್ದರೆ
ಹೊಲಸ ಮೂಸಿದಸಹ್ಯ ಹಲವು
ನೆನೆದು ಅಲರುವ ತುಟಿಗೆ ಮುತ್ತು ಕೆಲವು
ಅದೇ ತೆರೆದ ಬಾಯಿಗೊಮ್ಮೊಮ್ಮೆ ಶಾಪವು

ಹೇಗೆ ನಿರ್ಧರಿಸುವೆ ಬೇಕಾವುದೆಂದು
ಪ್ರಜ್ಞೆಯ ಆಯ್ಕೆಯದು ಮೂಲದಿ
ಬಿಟ್ಟುಬಿಡು ಅಳಿವು ಉಳಿವು
ಗಮನದೆಡೆಗೆ ನಿನ್ನ ಗಮನವಿರಲಿ

ನಿತ್ಯ ನೇಗಿಲ ಹೂಡದಿದ್ದರು
ಮನದ ನೆಲದ ಬಿತ್ತನೆ ಸಾಗುವುದು
ಏಗುವುದಷ್ಟೇ ಸಾಧ್ಯತೆಯಾಗಿರೆ
ನೆನಪುಗಳ ಸಾಗುವಳಿಯ ಚಿಂತೆ ಬಿಡು

– ರಾಧಿಕಾ ಗುಜ್ಜರ್
25.12.2024

***

ಯಾರಿಗೆ ಏನು?

ಸಲ್ಲಿಸಬೇಕು ನಮನ ಯಾರಿಗೆ
ಹರಿಸಬೇಕು ಗಮನ ಯಾರಿಗೆ
ಮಾಡಬೇಕು ದಮನ ಯಾರನು
ಅರಿತರಿದನು ಶಮನ ನೋಡಾ

ಹೆಗಲೊಡ್ಡಬೇಕು ಯಾರಿಗೆ
ದಿಗಿಲಾಗಬೇಕು ಯಾವುದಕೆ
ವಿರೋಧವನಾರಿಗೆ ತೋರಬೇಕು
ಅರಿತರೆ ಮನವು ಹಗುರ ಕಾಣಾ

ವಿವರಿಸಬೇಕು ಯಾರಿಗೋ
ಉತ್ತರಿಸಬೇಕು ಮತ್ತಾರಿಗೋ
ಮೌನವೇ ಉತ್ತರವು ಹಲವರಿಗೆ
ಅದನರಿತವನೆ ಪ್ರಾಜ್ಞ ಬಲ್ಲಿದನೇ

ನಡೆಯಬೇಕು ಯಾರ ಸಂಗ
ತಡೆಯಬೇಕು ಯಾರು ಯಾರನು
ಮಡಿಯಬೇಕು ಯಾವ ಕಜ್ಜಕೆ
ಅರಿತರಿದನು ಸುಖವು ನೋಡಾ

– ಎಸ್ ಮಂಜುನಾಥ್ (ಹಿಮನಾಥ)
18.04.2024

ಉದ್ದಂಡ ಷಟ್ಪದಿ

– ಗಣಪತಿ ಹೆಗಡೆ

ಆರು ಪಾದಗಳುಳ್ಳ ಪದ್ಯವನ್ನು 'ಷಟ್ಪದಿ' ಎಂದು ಕರೆಯುತ್ತಾರೆ ಎನ್ನುವದು ಎಲ್ಲರಿಗೂ ಗುತ್ತು. ಇದರ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಒಂದಕ್ಕೊಂದು ಸಮಾನವಾಗಿರುತ್ತವೆ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿರುತ್ತವೆ. ಒಂದನೆಯ ಪಾದದಲ್ಲಿರುವ ಮಾತ್ರೆಗಳ ಒಂದೂವರೆಯಷ್ಟು ಮತ್ತು ಒಂದು ಗುರು ಮೂರನೆಯ ಮತ್ತು ಆರನೆಯ ಪಾದಗಳಲ್ಲಿರುತ್ತವೆ. ದ್ವಿತೀಯಾಕ್ಷರವು ಪ್ರಾಸಾಕ್ಷರವಾಗಿರುತ್ತದೆ. ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ ಎಂಬ ಆರು ವಿಧಗಳಿರುತ್ತವೆ.

ವಾರ್ಧಕ ಷಟ್ಪದಿಯ ಉದಾಹರಣೆ.

ಬಲ್ಗಯ್ಯ ನೃಪರಂಜಿ ತಡೆಯದೆರಫೂದ್ವಹನ।
ಸೊಲ್ಗೇಳಿ ನಮಿಸಲಿಳೆಯೊಳ್ಚರಿಸುತದ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ।
ವಿನಿಯೋಗದುಪವನದೊಳು॥
ಪುಲ್ಗಳಪಸುರ್ಗೆಳಸಿ ಪೊಕ್ಕಡಾತೋಟ ಗಾ।
ವಲ್ಗೆ ತನ್ನೊಡನಾಡಿಗಳಕೂಡಿಲೀಲೆಮಿಗೆ।
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು॥

೫ ೫ ೫ ೫
ಬಲ್ಗಯ್ಯ । ನೃಪರಂಜಿ । ತಡೆಯದೆರ । ಘೂದ್ವಹನ ।
೫ ೫ ೫ ೫
ಸೊಲ್ಗೇಳಿ । ನಮಿಸಲಿಳೆ । ಯೊಳ್ಚರಿಸು । ತದ್ವರದ ।
೫ ೫ ೫ ೫
ನಲ್ಗುದುರೆ । ಬಂದು ವಾ । ಲ್ಮೀಕಿಯನಿ । ಜಾಶ್ರಮದ ।
೫ ೫ ೨
ವಿನಿಯೋಗ । ದು ಪವನದೊ। ಳು (ಳೂ)॥
೫ ೫ ೫ ೫
ಪುಲ್ಗಳಪ । ಸುರ್ಗೆಳಸಿ । ಪೊಕ್ಕಡಾ । ತೋಟಗಾ।
೫ ೫ ೫ ೫
ವಲ್ಗೆತ । ನ್ನೊಡನಾಡಿ । ಗಳಕೂಡಿ । ಲೀಲೆಮಿಗೆ
೫ ೫ ೫ ೫
ಬಿಲ್ಗೊಂಡು । ನಡೆತಂದ । ವಂಕಂಡ । ನರ್ಚಿತಸು ।
೫ ೫ ೫
ವಾಜಿಯಂ । ವೀರಲವ । ನು (ನೂ)॥

೫×೪ =೨೦

೫×೪ =೨೦

೫×೬ =೩೦+೨

೫×೪ =೨೦

೫×೪ =೨೦

೫×೬ =೩೦+೨

ಒಟ್ಟೂ ೧೪೪

ಉದ್ದಂಡದ ಉದಾಹರಣೆ.

"ಪರಿಕಿಪೊಡೀ ಕೃತಿಗಾವುದು ಮೊದಲೆನೆ ಹಳಚುವ। ತೆರೆಯೊಳು ತಿರುಗುವ ಕರಿಮಕರಂಗಳ ಪುಚ್ಛೋ।
ತ್ಕರಹತಿಯಿಂ ಚೆಲ್ಲಿದ ಮಣಿಗಳ ಬೆಳಗಿಂ ಶ್ವೇತದ್ವೀಪವನಣ ಕಿಸುತ ॥
ಶರನಿಧಿಯೊಪ್ಪುವುದಂತಾ ಶರನಿಧಿ ಪರಿವೃತ।
ಧರೆಯೊಪ್ಪುವುದಂತಾ ಧರೆಯ ಶಿರೋಮಣಿವೋಲ್।
ಸುರಗಿರಿಯೊಪ್ಪುವುದಂತಾ ಸುರಗಿರಿಯುತ್ತರಭಾಗವನೇಂ ಬಣ್ಣಿಪೆನು॥

ಳ ಳ ಳ ಳ ಳ
"ಪರಿಕಿಪೊ । ಡೀಕೃತಿ । ಗಾವುದು । ಮೊದಲೆನೆ ।ಹಳಚಂ।
ಳ ಳ ಳ ಳ ಳ
ತೆರೆಯೊಳು । ತಿರುಗುವ । ಕರಿಮಕ । ರಂಗಳ । ಪುಚ್ಛೋ ।
ಳ ಳ ಳ ಳ ಳ ಳ
ತ್ಕರಹತಿ । ಯಿಂ ಚೆ । ಲ್ಲಿದ ಮಣಿ । ಗಳ ಬೆಳ । ಗಿಂ ಶ್ವೇ। ತದ್ವೀ
ಳ ಳ
। ಪವನಣ । ಕಿಸುತಾ ॥"

ಳ ಳ ಳ ಳ ಳ
ಶರನಿಧಿ।ಯೊಪ್ಪುವು।ದಂತಾ। ಶರನಿಧಿ। ಪರಿವೃತ।
ಳ ಳ ಳ ಳ ಳ
ಧರೆಯೊ।ಪ್ಪುವುದಂ।ತಾ ಧರೆ।ಯ ಶಿರೋ।ಮಣಿವೋಲ್।
ಳ ಳ ಳ ಳ ಳ ಳ
ಸುರಗಿರಿ।ಯೊಪ್ಪುವು।ದಂತಾ। ಸುರಗಿರಿ।ಯುತ್ತರ।ಭಾಗವ।
ಳ ಳ
ನೇಂ ಬ।ಣ್ಣಿಪೆನೂ॥.

ಕಾಟವ ಕೊಡುತಿಹ ಕಾಣದ ಭೂತವು ಕಲಿಸಿದ।
ಪಾಠವ ಕಲಿಯಲು ಸುಸಮಯವಿದು ನಿಜ ಕೇಳಿರಿ।
ಚಾಟಿಯ ಬೀಸುತಲೇಟನು ಕೊಟ್ಟಿದೆ ದೇಹವು ಸೊರಗತಲಿದೆ ಸತ್ಯವಿದು॥

ಊಟವ ಮಾಡದೆ ನಿದಿರೆಯು ಬಾರದೆ ಮಲಗಲು।
ನೋಟವ ಬೀರುತ ನಗುವುದು ಭೀಕರ ರೂಪವು।
ಥಾಟಿನ ಜೀವನವೇತಕೆ ಬಡವರು ಧನಿಕರು ಭೇದವು ನಮ್ಮೊಳಗೇಕೆ.॥

೪ ೪ ೪ ೪ ೪
ಕಾಟವ। ಕೊಡುತಿಹ। ಕಾಣದ ।ಭೂತವು। ಕಲಿಸಿದ।
೪ ೪ ೪ ೪ ೪
ಪಾಠವ। ಕಲಿಯಲು। ಸುಸಮಯ।ವಿದು ನಿಜ ।ಕೇಳಿರಿ।
೪ ೪ ೪ ೪ ೪
ಚಾಟಿಯ। ಬೀಸುತ।ಲೇಟನು। ಕೊಟ್ಟಿದೆ ।ದೇಹವು ।
೪ ೪ ೪
ಸೊರಗತ।ಲಿದೆ ಸ।ತ್ಯವಿದೂ॥

೪ ೪ ೪ ೪ ೪
ಊಟವ ।ಮಾಡದೆ। ನಿದಿರೆಯು। ಬಾರದೆ। ಮಲಗಲು।
೪ ೪ ೪ ೪ ೪
ನೋಟವ ।ಬೀರುತ। ನಗುವುದು। ಭೀಕರ। ರೂಪವು।
೪ ೪ ೪ ೪ ೪ ೪
ಥಾಟಿನ। ಜೀವನ।ವೇತಕೆ।ಬಡವರು। ಧನಿಕರು। ಭೇದವು ।
೪ ೪
ನಮ್ಮೊಳ।ಗೇಕೇ.॥

೪×೫ =೨೦
೪×೫ =೨೦
೪×೮ =೩೨
೪×೫ =೨೦
೪×೫ =೨೦
೪×೮ =೩೨
ಒಟ್ಟು ೧೪೪

ಉದ್ದಂಡ ಷಟ್ಪದಿಯ ಇನ್ನೊಂದು ಉದಾಹರಣೆ,

ಕಾಟವ ಕೊಡುತಿಹ ಕಾಣದ ಭೂತವು ಕಲಿಸಿದ।
ಪಾಠವ ಕಲಿಯಲು ಸುಸಮಯವಿದು ನಿಜ ಕೇಳಿರಿ।
ಚಾಟಿಯ ಬೀಸುತಲೇಟನು ಕೊಟ್ಟಿದೆ ದೇಹವು ಸೊರಗತಲಿದೆ ಸತ್ಯವಿದು॥
ಊಟವ ಮಾಡದೆ ನಿದಿರೆಯು ಬಾರದೆ ಮಲಗಲು।
ನೋಟವ ಬೀರುತ ನಗುವುದು ಭೀಕರ ರೂಪವು।
ಥಾಟಿನ ಜೀವನವೇತಕೆ ಬಡವರು ಧನಿಕರು ಭೇದವು ನಮ್ಮೊಳಗೇಕೆ.॥

೪ ೪ ೪ ೪ ೪

ಕಾಟವ। ಕೊಡುತಿಹ। ಕಾಣದ ।ಭೂತವು। ಕಲಿಸಿದ।

೪ ೪ ೪ ೪ ೪

ಪಾತವ। ಕಲಿಯಲು। ಸುಸಮಯ।ವಿದು ನಿಜ ।ಕೇಳಿರಿ।

೪ ೪ ೪ ೪ ೪

ಚಾಟಿಯ। ಬೀಸುತ।ಲೇಟನು। ಕೊಟ್ಟಿದೆ ।ದೇಹವು ।

೪ ೪ ೪

ಸೊರಗತ।ಲಿದೆ ಸಾತ್ವವಿದೂ॥

೪ ೪ ೪ ೪ ೪

ಊಟವ ।ಮಾಡದೆ। ನಿದಿರೆಯು। ಬಾರದೆ। ಮಲಗಲು।

೪ ೪ ೪ ೪ ೪

ನೋಟವ ।ಬೀರುತ। ನಗುವುದು। ಭೀಕರ। ರೂಪವು।

೪ ೪ ೪ ೪ ೪ ೪

ಥಾಟಿನ। ಜೀವನ।ವೇತಕೆ।ಬಡವರು। ಧನಿಕರು। ಭೇದವು ।

೪ ೪

ನಮ್ಮೊಳ।ಗೇಕೇ.॥

೪×೫ =೨೦

೪×೫ =೨೦

೪×೮ =೩೨

೪×೫ =೨೦

೪×೫ =೨೦

೪×೮ =೩೨

ಒಟ್ಟೂ ೧೪೪

ವಾರ್ಧಕ ಷಟ್ಪದಿಯಲ್ಲಿ

ಶ್ರೀವಧುವಿ।ನಂಬಕಚ।ಕೋರಕಂ ।ಪೊರೆಯೆಭ।(ಕ್ತಾವಳಿ)

ನಾನನನ ನಾನನನ ನಾನನಾ ನನನನಾ

ಅಂತಿರುತ್ತದೆ.

ಉದ್ದಂಡ ಷಟ್ಪದಿಯಲ್ಲಿ

ಕಾಟವ। ಕೊಡುತಿಹ। ಕಾಣದ। ಭೂತವು ।ಕಲಿಸಿದ।

ನಾನನ ನನನನ ನಾನನ ನಾನನ ನನನನ

ಅಂತಿರುತ್ತದೆ.

"ವಾರ್ಧಕ ಹಾಗೂ ಉದ್ದಂಡ ಷಟ್ಪದಿಗಳ ಸಾಮ್ಯ ಹಾಗೂ ಭೇದ":

ವಾರ್ಧಕ ಷಟ್ಪದಿಯ ಗುಣಲಕ್ಷಣಗಳನ್ನು ಕೆಳಗಿನಂತೆ ವಿವರಿಸಬಹುದು.

೧. ವಾರ್ಧಕ ಷಟ್ಪದಿಗೆ ಹೆಸರೇ ಸೂಚಿಸುವಂತೆ ಆರು ಪಾದಗಳಿರುತ್ತವೆ.

೨. ಮೊದಲ ಮೂರು ಪಾದಗಳನ್ನು ಪೂರ್ವಾರ್ಧ ಅಂತಲೂ, ಕೊನೆಯ ಮೂರು ಪಾದಗಳನ್ನು ಉತ್ತರಾರ್ಧ ಎಂತಲೂ ಕರೆಯುತ್ತಾರೆ.

೩. ಒಂದು, ಎರಡು, ನಾಲ್ಕು ಹಾಗೂ ಐದನೇ ಪಾದಗಳು ಮತ್ತೂ ಮೂರನೇ ಹಾಗೂ ಆರನೇ ಪಾದಗಳು ಸಮಾನ ಮಾತ್ರಾ ಲಯಗಳನ್ನು ಹೊಂದಿರುತ್ತವೆ.

೪. ಒಂದು, ಎರಡು, ನಾಲ್ಕು ಹಾಗೂ ಐದನೇ ಪಾದಗಳು ೫ ಮಾತ್ರೆಗಳ ನಾಲ್ಕು ಗುಂಪಿನ ಆವರ್ತದಲ್ಲಿಯೂ (ಅಂದರೆ ೫ರ ೪ ಗುಂಪು– ಒಟ್ಟೂ ೨೦ ಮಾತ್ರೆಗಳು), ಮೂರು ಹಾಗೂ ಆರನೇ ಪಾದಗಳು ೫ ಮಾತ್ರೆಗಳ ೬ ಗುಂಪಿನ ಆವರ್ತದಲ್ಲಿಯೂ (ಅಂದರೆ ೫ ರ ಆರು ಗುಂಪು ಹಾಗೂ ಒಂದು ಗುರು–ಒಟ್ಟೂ ೩೨ ಮಾತ್ರೆಗಳು) ಇರುತ್ತವೆ.

೫. ಮೂರು ಹಾಗೂ ಆರನೇ ಪಾದಗಳ ಕೊನೆಯ ಅಕ್ಷರ ಹ್ರಸ್ವವಾಗಿದ್ದರೂ ದೀರ್ಘವಾಗಿಯೇ ಓದಬೇಕು.

೬. ಪ್ರತಿ ಪದ್ಯಾರ್ಧಕ್ಕೆ ಒಟ್ಟೂ ೭೨ ಮಾತ್ರೆಗಳಂತೆ ಒಂದು ಪದ್ಯದಲ್ಲಿ ಒಟ್ಟೂ ೧೪೪ ಮಾತ್ರೆಗಳಿರುತ್ತವೆ.

೬. ಆವರ್ತಗಳಲ್ಲಿಯ ಮೊದಲ ಶಬ್ದ (U – –) ಲಘುವಿನಿಂದ ಪ್ರಾರಂಭವಾಗಿ ಗುರುಮಾತ್ರೆ ಸೇರಿದ ಶಬ್ದ ಇರುವದಿಲ್ಲ.

ಉದ್ದಂಡ ಷಟ್ಪದಿಗಳಲ್ಲಿ, ಮೇಲಿನ ಲಕ್ಷಣಗಳಲ್ಲಿ ೪ನೇ ಲಕ್ಷಣವನ್ನು ಹೊರತುಪಡಿಸಿದರೆ, ಉಳಿದೆಲ್ಲಾ ಲಕ್ಷಣಗಳು ವಾರ್ಧಕ ಷಟ್ಪದಿಯ ಲಕ್ಷಣಗಳೇ ಆಗಿವೆ.

೪ನೇ ಲಕ್ಷಣದಲ್ಲಿ ಕೆಳಗಿನ ಬದಲಾವಣೆಯಾಗಿದೆ.

೪. ಒಂದು, ಎರಡು, ನಾಲ್ಕು ಹಾಗೂ ಐದನೇ ಪಾದಗಳು ೪ ಮಾತ್ರೆಗಳ ೫ ಗುಂಪಿನ ಆವರ್ತದಲ್ಲಿಯೂ (ಅಂದರೆ ೪ರ ೫ ಗುಂಪು– ಒಟ್ಟೂ ೨೦ ಮಾತ್ರೆಗಳು), ಮೂರು ಹಾಗೂ ಆರನೇ ಪಾದಗಳು ೪ ಮಾತ್ರೆಗಳ ೮ ಗುಂಪಿನ ಆವರ್ತದಲ್ಲಿಯೂ (ಒಟ್ಟೂ ೩೨ ಮಾತ್ರೆಗಳು) ಇರುತ್ತವೆ. ಮೂರನೆಯ ಹಾಗೂ ಆರನೆಯ ಪಾದಗಳ ಕೊನೆಯ ಅಕ್ಷರ ಉಳಿದ ಷಟ್ಪದಿಗಳ ಹಾಗೇ, ಲಘುವಿದ್ದರೂ ಗುರುವಾಗಿಯೇ ಗಮನಿಸಬೇಕು.

ರಾಘವಾಂಕನನ್ನು ಷಟ್ಪದಿಯ ಜನಕ ಎನ್ನುತ್ತಾರೆ.

ಉದ್ದಂಡ ಷಟ್ಪದಿಯ ಕುರಿತು ಒಂದು ಕತೆ ಇದೆ. ಓರುಗಲ್ಲಿನ ಪ್ರತಾಪರುದ್ರನ ಸಭೆಯಲ್ಲಿ ಏಕದಂಡಿ, ದ್ವಿದಂಡಿ, ಹಾಗೂ ತ್ರಿದಂಡಿಯೆಂಬ ಮೂವರು ಕವಿಗಳು ರಾಜಾಸ್ಥಾನದಲ್ಲಿರುವ ವಿದ್ವಾಂಸರನ್ನು ಕರೆಸಿ ಆ ಕವಿಗಳು ರಚಿಸಿದ ಕಾವ್ಯವನ್ನು ಮೂರು ಸಲ ಓದಿಸುತ್ತಿದ್ದರಂತೆ. ಆ ಸಮಯದಲ್ಲಿಯೇ ಪದ್ಯವನ್ನು ಪಾಠಮಾಡಿಕೊಂಡು ಕೂಡಲೇ ಹೇಳಿ, 'ಇದನ್ನು ನಾವು

ರಚಿಸಿದ್ದು. ನೀನೆಲ್ಲಿ ಕಲಿತೆ?. ಇದು ಅನ್ಯಾಯ' ಅಂತ ಹೇಳಿ ಎಲ್ಲಾ ಕವಿಗಳನ್ನು ಸೋಲಿಸುತ್ತಿದ್ದರಂತೆ. ಈ ವಿಷಯ ರಾಘವಾಂಕನಿಗೆ ತಿಳಿದಾಗ, ಓರುಗಲ್ಲಿನಲ್ಲಿರುವ ರಾಜಾಸ್ಥಾನಕ್ಕೆ ಬಂದು ಹೊಸ ಬಗೆಯ ಷಟ್ಪದಿಯಲ್ಲಿ (ಉದ್ದಂಡ ಷಟ್ಪದಿಯಲ್ಲಿ) ಕಾವ್ಯ ವಾಚನ ಮಾಡಿದನೆಂದೂ, (ವೀರೇಶಚರಿತ್ರೆ) ಇದನ್ನು ಅನುಸರಿಸಲು 'ಏಕದ್ವಿತ್ರಿದಂಡಿ' ಗಳಿಗೆ ಸಾಧ್ಯವಾಗದೇ ಸೋಲೊಪ್ಪಿಕೊಂಡರು ಅಂತಲೂ ಹೇಳುತ್ತಾರೆ. ಇದರಿಂದ ರಾಘವಾಂಕನಿಗೆ ರಾಜಮನ್ನಣೆ ದೊರೆಯಿತಂತೆ.

ಈ ರೀತಿಯ ಷಟ್ಪದಿಯಲ್ಲಿ, ಬಸವಾಂಕನೆಂಬ (1550) ಕವಿಯ ಉದ್ಭಟ ದೇವಚರಿತೆಯಲ್ಲಿ ಕೆಲವು ಪದ್ಯಗಳು ರಚಿತವಾಗಿವೆ ಎನ್ನುತ್ತಾರೆ.

ವೀರೇಶಚರಿತೆಯ ಕೃತಿವಸ್ತು ಉದ್ದಂಡವಾದದ್ದು (ಎಂದರೆ ಉಗ್ರ, ಪ್ರಚಂಡ, ಭಯೋತ್ಪಾದಕ ಎನ್ನುವಂಥದು) ಎಂದುಕೊಂಡು ಉದ್ದಂಡ ಷಟ್ಪದಿ ಎಂಬ ಹೆಸರನ್ನು ಅಲ್ಲಿಯ ಷಟ್ಪದಿಗೆ ಯಾರೋ ಸೇರಿಸಿದ್ದಿರಬಹುದು ಅಥವಾ ಇತರ ಎಷ್ಟೋ ಛಂದಸ್ಸುಗಳ ಹೆಸರುಗಳ ಹಾಗೆ ಇಲ್ಲೂ ಈ ಛಂದಸ್ಸಿನ ಹೆಸರಿನ ಔಚಿತ್ಯವನ್ನು ಗುರುತಿಸುವುದು ಕಷ್ಟವೆನ್ನಬಹುದು.

***

ಮೇಕಪ್ ಬಾಕ್ಸ್

– ಹು.ವಾ. ಶ್ರೀಪ್ರಕಾಶ್

ಬಳೇಪೇಟೆಯಲ್ಲಿ ಸಂಚರಿಸುತ್ತಾ ನಾಟಕದ ಮೇಕಪ್ ಬಾಕ್ಸ್ ಹುಡುಕುತ್ತಿದ್ದ ರಮೇಶನಿಗೆ ಯಾರೋ ಹೇಳಿದರು ರಾಜಾಪೇಟೆಯಲ್ಲಿ ಸಿಗುತ್ತದೆ ಅಂತ.

ಕೊನೆಗೊಂದು ಕಡೆ ಸಿಕ್ಕಿತು. "ಮೇಕಪ್ ಬಾಕ್ಸ್ ಅಂತ ಬರೋದಿಲ್ಲ. ಮೀಸೆ, ಗಡ್ಡ, ಬಣ್ಣಗಳು, ಚೌಲಿ ಹೀಗೆ ನಿಮಗೇನೇನು ಬೇಕು ಹೇಳಿ, ಹಾಕಿಕೊಡುತ್ತೇವೆ" ಅಂದ. ರಮೇಶನಿಗೆ ನಾಟಕದ ಮೇಕಪ್ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿದ್ದರಿಂದ ಮಿತ್ರ ವೆಂಕಟರಮಣನವರ ಮಾತುಗಳನ್ನು ನೆನಪು ಮಾಡಿಕೊಂಡು, ಅಂಗಡಿಯವರು ಹೇಳುತ್ತಿದ್ದಂತೆ ಕೆಲವನ್ನು ಹಾಕಿ ಎಂದು ಹೇಳಿ ಒಂದು ಮೇಕಪ್ ಬಾಕ್ಸ್ ತಯಾರಿ ಮಾಡಿಕೊಂಡು ಹೊರಟ.

ದಿನವೂ ಕಚೇರಿಗೆ ಹೋಗುತ್ತಿದ್ದ ವಾಹನದಲ್ಲಿ ವೆಂಕಟರಮಣರು ಯಾವಾಗಲೂ ರಮೇಶನ ಪಕ್ಕದಲ್ಲಿ ಕುಳಿತು ನಾಟಕದ ವಿಷಯವನ್ನೇ ಮಾತಾಡುತ್ತಿದ್ದರು. ತುಂಬಾ ಆಸಕ್ತಿಯಿಂದ ರಮೇಶ ಕೇಳುತ್ತಿದ್ದ. ಕೆಲವೊಮ್ಮೆ ದಿನವೂ ನನ್ನನ್ನು ಹೀಗೆ ಮಾತಲ್ಲಿ ಹಿಡಿದಿಟ್ಟುಕೊಳ್ಳುತ್ತಾರಲ್ಲಾ ಅನಿಸಿದ್ದೂ ಉಂಟು. ಅದೆಷ್ಟೋ ನಾಟಕದ ಡೈಲಾಗುಗಳು ಅವರಿಗೆ ಬಾಯಿಪಾಠ. ಹಲವು ಖ್ಯಾತ ನಿರ್ದೇಶಕರ ನಾಟಕದಲ್ಲಿ ಅಭಿನಯಿಸಿದ ವೆಂಕಟರಮಣರಿಗೆ ತಾವೇ ಒಂದು ನಾಟಕ ಬರೆಯುವ ಹಂಬಲವೂ ಇತ್ತು. ಬರೆದ ಸಂಭಾಷಣೆಗಳನ್ನು ರಮೇಶನಿಗೆ ಹೇಳುತ್ತ ಹೇಗಿದೆ ಅಂತ ಹೆಮ್ಮೆಯಿಂದ ಹುಬ್ಬೇರಿಸುತ್ತಿದ್ದರು.

ತಾವಿದ್ದ ಕಾಲೋನಿಯ ವಾರ್ಷಿಕೋತ್ಸವಗಳಲ್ಲಿ ವೆಂಕಟರಮಣರೊಂದಿಗೆ ಕೆಲವು ನಾಟಕಗಳಲ್ಲಿ ರಮೇಶನೂ ಅಭಿನಯಿಸಿದ್ದ. ಒಮ್ಮೆ ರಮೇಶ ಗದಾಯುದ್ಧ ಯಕ್ಷಗಾನ ಪ್ರಸಂಗದ ಅಂತಿಮ ದೃಶ್ಯವನ್ನು ಮಾಡೋಣವೆಂದಾಗ ಯಕ್ಷಗಾನ ಗೊತ್ತಿರದಿದ್ದರೂ ವೆಂಕಟರಮಣರು ಯೂಟ್ಯೂಬ್‌ನಲ್ಲಿ ಪ್ರಸಂಗದ ವೀಡಿಯೋ ನೋಡಿಕೊಂಡು ಯಶಸ್ವಿಯಾಗಿ ಭೀಮನ ಪಾತ್ರ ಮಾಡಿದ್ದರು. ಈ ವರ್ಷ ಯಾವ ನಾಟಕ ಆಡೋಣ ಅಂತ ಎರಡು ತಿಂಗಳಿರುವಾಗಲೇ ಅವರು ಯೋಚಿಸತೊಡಗಿ ಕೆಲವು ನಾಟಕ ಆರಿಸಿಕೊಂಡು ರಮೇಶನ ಮನೆಗೆ ಬಂದುಬಿಡುತ್ತಿದ್ದರು. ಗಂಟೆಗಟ್ಟಲೆ ಚರ್ಚೆ, ಮುಂದೆ ನಾಟಕದ ತಾಲೀಮೂ ರಮೇಶನ ಮನೆಯಲ್ಲೇ ನಡೆಯುತ್ತಿತ್ತು. ಹೀಗಾಗಿ ವೆಂಕಟರಮಣರಿಗೆ ರಮೇಶ ಬಹಳ ಹತ್ತಿರವಾಗಿದ್ದ.

ಇಂತಹ ಹಿರಿಯ ಉತ್ಸಾಹಿ ವೆಂಕಟರಮಣರು ಇದ್ದಕ್ಕಿದ್ದಂತೆ ಆಸ್ಪತ್ರೆ ಸೇರಿದ ವಿಚಾರ ತಿಳಿದು ರಮೇಶ ಆ ಸಂಜೆಯೇ ಆಸ್ಪತ್ರೆಗೆ ಧಾವಿಸಿದ. ಕುಡಿತದ ಅಭ್ಯಾಸವಿರದಿದ್ದರೂ ಅವರಿಗೆ ಲಿವರ್ ಸಮಸ್ಯೆ ಬಂದಿತ್ತು. ಬಳಿಯಲ್ಲಿ ನಿಂತ ರಮೇಶನ ಕೈ ಹಿಡಿದು ತಮ್ಮ ಹಣೆಯ ಮೇಲೆ ಇಟ್ಟುಕೊಂಡ ವೆಂಕಟರಮಣರು ಹೆಚ್ಚು ಮಾತನಾಡಲೂ ಅಶಕ್ತರಾಗಿದ್ದರು. ಅವರ ಕಣ್ಣುಗಳು ತುಂಬಿ ಬಂದಿದ್ದವು. ಸುಧಾರಿಸಿಕೊಳ್ಳಿ ಎಂದು ಹೇಳಿ ಅವರ ಪಕ್ಕದಲ್ಲಿ ಸ್ವಲ್ಪ ಹೊತ್ತು ಕುಳಿತು ಬಂದ ರಮೇಶ. ವೆಂಕಟರಮಣರು ಚೇತರಿಸಿಕೊಳ್ಳಬಹುದು ಎಂಬ ಆಸೆ ಎರಡೇ ದಿನದಲ್ಲಿ ಕಮರಿಹೋಯ್ತು.

ಒಂದು ಮೇಕಪ್ ಬಾಕ್ಸ್ ಮಾಡಿಕೊಳ್ಳಬೇಕು ಎಂದು ಅವರು ಹೇಳುತ್ತಿದ್ದ ಮಾತು ರಮೇಶನಿಗೆ ನೆನಪಾಗುತ್ತಿತ್ತು. ಅದಕ್ಕಾಗಿಯೇ ರಾಜಾಪೇಟೆಯಲ್ಲಿ ಬೇಕಾದ ಸಾಮಗ್ರಿ ಸೇರಿಸಿ ಸಿದ್ದಪಡಿಸಿ ವೆಂಕಟರಮಣರ ಮನೆಗೆ ಹೋದ. ಸಂಜೆ ಹೊತ್ತಲ್ಲಿ ಮನೆಯಲ್ಲಿ ಮೌನ ಆವರಿಸಿತ್ತು. ಮೇಕಪ್ ಬಾಕ್ಸನ್ನು ವೆಂಕಟರಮಣರ ಪತ್ನಿಯ ಕೈಗಿತ್ತು, "ವೆಂಕಟರಮಣರು ಯಾವಾಗಲೂ ಮೇಕಪ್ ಬಾಕ್ಸ್ ಮಾಡಿಕೊಳ್ಳಬೇಕು ಅನ್ನುತ್ತಿದ್ದರು. ಇದನ್ನು ನೀವು ಯಾರಾದರೂ ರಂಗಕರ್ಮಿಗಳಿಗೆ ಅವರ ಹೆಸರಲ್ಲಿ ಕೊಟ್ಟುಬಿಡಿ" ಎಂದು ಹೇಳಿ ರಮೇಶ ಹಿಂದಿರುಗಿದ.

ಹಿರಿಯ ಮಿತ್ರರ ನೆನಪು ಅವನ ಕಣ್ಣುಗಳನ್ನು ಹನಿಗೂಡಿಸಿತ್ತು.

***

ಇಡ್ಲಿ ವಡೆ –Vs– ಪಿಜ್ಜಾ

– ಸ್ನೇಹ ಶಶಿಧರ

"ಇಂತಹ ಎಷ್ಟು ತುಂಡುಗಳನ್ನು ನಾನು ಖಾಲಿ ಮಾಡಬೇಕು?", ಅಪ್ಪನ ಪ್ರಶ್ನೆಗೆ ನಾವು ಅಕ್ಕ ತಂಗಿಯರು ಹೊಟ್ಟೆ ತುಂಬಾ ನಕ್ಕುಬಿಟ್ವಿ. ಅಪ್ಪನನ್ನು ಪಿಜ್ಜಾ ತಿನ್ನಲು ಕರೆದುಕೊಂಡು ಹೋಗಿದ್ವಿ. ಊಟವನ್ನು ಯಾವುದೇ ಕಾರಣಕ್ಕೂ ಬಿಸಾಡಬಾರದು ಎಂಬ ಅವರ ನೀತಿ ಪಾಠ ಇನ್ನೇನು ಮುರಿದು ಹೋಗುವ ಲಕ್ಷಣ ಕಾಣುತ್ತಿತ್ತು. ಆದರೆ ನಾವಿಬ್ಬರು ಪಿಜ್ಜಾ ತುಂಡು ಕಸದ ಬುಟ್ಟಿ ಸೇರಲು ಬಿಡುತ್ತಿರಲಿಲ್ಲ ಬಿಡಿ. ನೀತಿ ಪಾಠದಿಂದಲ್ಲ, ಪಿಜ್ಜಾ ಮೇಲಿನ ಆಸೆ ಇಂದ. ಆದರೆ ನಮ್ಮ ದುರಾಸೆಯ ಮುಂದೆ ಅಪ್ಪನ ಹಠ ಗೆದ್ದಿತ್ತು. ಕಷ್ಟವಾದರೂ, ಹಾಗೂ ಹೀಗೂ, ಒಂಚೂರು ಬಿಡದೆ ಅವರ ಪಾಲಿನ ಪಿಜ್ಜಾ ಖಾಲಿ ಮಾಡಿದ್ದರು.

ಅಲ್ಲಿಂದ ಹೊರಡುವಾಗ ಪಿಜ್ಜಾ ಅಂಗಡಿಯವ ಬಿಲ್ ತಂದು ಅಪ್ಪನ ಎದುರು ಹುಸಿ ನಗುವಿನೊಂದಿಗೆ ಇಟ್ಟ. ಅಪ್ಪ ಲಕೋಟೆ ತೆರೆದು ಅವಾಕ್ಕಾದರು. "ಈ ಒಣಕಲು ರೊಟ್ಟಿ ಗಂಟಲಲ್ಲಿ ಇಳಿಸಲು ಕಷ್ಟ ಆಯಿತು. ಏನೋ ಕೆಚ್ಚಪ್ ಸಹಾಯದಿಂದ ನುಂಗಿ ಆಯಿತು. ಈ ಬಿಲ್ ಪ್ರಮಾಣ ನೋಡಿದರೆ ಖಂಡಿತ ನುಂಗೊಕ್ಕಾಗುತ್ತಿಲ್ಲ" ಎಂದುಕೊಂಡರು. ಬಿಸಿ ತುಪ್ಪವೇ ಬಾಯಿಗೆ ಬಿದ್ದ ಹಾಗೆ, ಉಗುಳೊಕ್ಕೂ ಆಗದೆ, ನುಂಗೊಕ್ಕೂ ಆಗದೆ ಕುಳಿತಿದ್ದರು. ತುಪ್ಪವನ್ನು ನುಂಗಿದ ಹಾಗೆ ಮಾಡಿ, ಅವನಿಗೆ ಹಣ ಕೊಟ್ಟು ಕಳಿಸಿದರು. ಅಪ್ಪ ಪಿಜ್ಜಾ (ಮತ್ತು ಅದರ ಮೊತ್ತ) ತಿಂದು ನುಂಗಿದರೂ, ಅವರಿಗೆ ಅದು ನುಂಗಲಾರದ ತುತ್ತು ಎನ್ನುವುದು ನನ್ನ ವಾದ.

"ಆದೇನ್ ಪಿಜ್ಜಾ, ಒಣಕಲು ರೊಟ್ಟಿ! ನಮ್ಮ ತಾಯಿ ಹಬ್ಬ ಹರಿದಿನಗಳಲ್ಲಿ ಪೂಜೆ ಪುನಸ್ಕಾರ ಅಂತ ಕೆಲಸದಲ್ಲಿ ನಿರತರಾದಾಗ, ನಮಗೆ ಬೆಳಗಿನ ತಿಂಡಿ ಮಾಡುತ್ತಿರಲಿಲ್ಲ. ನಾವು ಹಸಿವು ತಾಳಲಾರದೇ ಹಿಟ್ಟಿನ ಉಂಡೆ ಮಾಡಿ, ದಪ್ಪಗೆ ಕೈಯಲ್ಲೇ ತಟ್ಟಿ, ಒಲೆಯೊಳಗೆ ಬಿಸಾಡಿ ಬಿಡುತ್ತಿದ್ದೆವು. ಎಷ್ಟೋ ಹೊತ್ತಾದ ಮೇಲೆ ಸುಟ್ಟಿರುವ ಅರೆ ಬೆಂದ "ರೊಟ್ಟಿ"ಯನ್ನು ತಿನ್ನುತ್ತಿದ್ದೆವು. ಹಾಗಿದೆ ನಿಮ್ಮ ಪಿಜ್ಜಾ. ಒಂದು ಕಡೆ ಸುಟ್ಟು ಕಪ್ಪಗಾಗಿದೆ. ಮೇಲೆ ಇರುವ ತರಕಾರಿ ಬೆಂದೇ ಇಲ್ಲ. ಅದೇನೋ ಚೀಜ್ ಬೇರೆ. ಅಡಿಗೆ ಹಳಸಿದಾಗ ನಾರು ಬಿಡುತ್ತದಲ್ಲ ಹಾಗೆ ನಾರುತ್ತದೆ. ಇದನ್ನು ತಿನ್ನಲು ಇಷ್ಟುದ್ದ ಸಾಲು ಜನ. ಹೋಗಲಿ ನೆಂಚ್ಕೋಳ್ಳೋಕ್ಕು ಏನು ಚಟ್ನಿ ಇಲ್ಲ, ಸಾಂಬಾರಿಲ್ಲ. ಅದು ಪರ್ವಾಗಿಲ್ಲ ಅಂದರೆ ನೀರು ಕೊಡಲ್ಲ. ಅಲ್ಲಾ ಅತಿಥಿ ಸತ್ಕಾರ ಅಂದರೆ ಗೊತ್ತಾ? ಕೊನೇಪಕ್ಷ ನೀರನ್ನು ಉಚಿತವಾಗಿ ಕೊಡದ ಹೋಟೆಲ್ಲು. ಅರಗಬೇಕು ಅಂದ್ರೆ ಕೋಕೋ ಕೋಲಾ, ಪೆಪ್ಸಿ, ಮಿರಿಂಡಾ ಇರಲೇಬೇಕಂತೆ. ಇದ್ಯಾವ ಸೀಮೆ ಸಂಸ್ಕೃತಿ?"

ದಾರಿಯಲ್ಲಿ ಶುರುವಾಯಿತು ಸಹಸ್ರನಾಮ. ಹದಿನೆಂಟು ಪುರಾಣಗಳು ಒಟ್ಟಿಗೆ ಬೋಧನೆ ಮಾಡಿದಹಾಗೆ ಆಯಿತು ನಮಗೆ. ಎಂದೂ ಯಾವುದೇ ಕಾರಣಕ್ಕೂ ಶಾಕಾಹಾರಿ, ಮಾಂಸಾಹಾರಿ ಎರಡು ಇರುವ ಹೋಟೆಲಿಗೆ ಹೋಗಿರದ ನಮ್ಮ ತಂದೆಯ ವ್ರತ ಭಂಗ ಆಗಿದ್ದು ಈ ಪಿಜ್ಜಾ ತಿನ್ನುವ ಸಾಹಸಕ್ಕೆ ಕೈ ಹಾಕಿದ ಮೇಲೆಯೇ. 'ನೆನ್ನೆಯ ಅನ್ನದ ಮಕ್ಕಳು, ನಾಳೆ ಚಿನ್ನದ ಮಕ್ಕಳು' ಅಂತಾರೆ. ಈ ನುಡಿಗಟ್ಟಿನ ಅರ್ಥ ಸಂಪೂರ್ಣವಾಗಿ ನನಗೆ ತಿಳಿಯದಿದ್ದರೂ ಹೆಚ್ಚು ಬೆಲೆಯ ಬಗ್ಗೆ ಅವರಿಗೆ ಪ್ರಾಬ್ಲಮ್ ಅಂತ ನಂಬಿದೆ.

ನಮ್ಮ ತಂದೆ ಸದಾ 'ವ್ಯಾಲ್ಯು ಫಾರ್ ಮನೀ' ಅನ್ನೋ ಪಾಲಿಸಿ ನಂಬುವವರು. ಚಿಕ್ಕಂದಿನಲ್ಲಿ ಪಾನಿಪುರಿ ತಿನ್ನಲು ಹೋದರೆ, ಅವರು ಯಾವಾಗಲೂ ಮಸಾಲೆಪುರಿ ಕೊಡಿಸುತ್ತಿದ್ದರು. ಕಾರಣ– ಹೊಟ್ಟೆ ತುಂಬುತ್ತದೆ. ಪಾನಿಪುರಿ ಅಷ್ಟೇ ಬೆಲೆ ತೆತ್ತು ಎಷ್ಟೇ ತಿಂದರೂ ಹೊಟ್ಟೆ ತುಂಬುವುದಿಲ್ಲವಲ್ಲ ಎಂಬ ಅವರ ವಾದ. ಇನ್ನು ಹೋಟೆಲಿಗೆ ಹೋದರೆ ಸೆಟ್ ದೋಸೆ ಕೊಡಿಸೋರು. ಜಿಡ್ಡು ಕಡಿಮೆ, ಮೂರು ದೋಸೆ. ಹೊಟ್ಟೆ ಬಿರಿಯ ತಿಂದು ಸಾಕಪ್ಪ ಎನ್ನಬೇಕು. ಜೊತೆಗೆ ಬಕೆಟ್‌ಗಟ್ಟಲೆ ಚಟ್ನಿ ಅಪ್ಪನಿಗೆ ಬೇಕೇ ಬೇಕು. ಅಪ್ಪಿ ತಪ್ಪಿ ಉಪ್ಪಿಟ್ಟು ಬೇಕು ಅನ್ನಿ, ಅವರ ಪ್ರತಿಕ್ರಿಯೆ, "ಅಯ್ಯಾ, ಉಪ್ಪಿಟ್ಟು ತಿನ್ನೋಕೆ ಹೋಟೆಲ್ಗೆ ಬರಬೇಕಾ?"

ದೊಡ್ಡವರಾಗುತ್ತಾ ನಮಗೆ ತಿಳಿದಿದ್ದು, ಹೋಟೆಲ್ನಲ್ಲಿ ಉಪ್ಪಿಟ್ಟು ಒಂದು ಸೌಟಿನಷ್ಟೂ ಕೊಡೋದಿಲ್ಲ. ನಮಪ್ಪನಾಣೆ ಹೊಟ್ಟೆ ತುಂಬಲ್ಲ ಅಂತ.

ಇನ್ನು ದೋಸೆಯ ತಮ್ಮ ಇಡ್ಲಿಯ ವಿಚಾರಕ್ಕೆ ಬರೋಣ. ಇಡ್ಲಿ ಎರಡೇ ತೊಗೊಂಡರೂ ಡಿಪ್ ತೊಗೋಬೇಕು. ತೆಳ್ಳಗಿರುವ ಎರಡೇ ಎರಡು ಇಡ್ಲಿ, ಬಟ್ಟಲು ಭರ್ತಿ ಸಾಂಬಾರು. ಪಕ್ಕದಲ್ಲಿ ಚಿಕ್ಕ ಬಟ್ಟಲಲ್ಲಿ ಚಟ್ನಿ. ಎಷ್ಟೋ ಬಾರಿ "ಇಡ್ಲಿ ಗಾತ್ರ ಚಟ್ನಿ ನುಂಗಿ ನೆಗೆಧಾಂಗ್ ಇತ್ತು, ಇವ ನೆಗೆಧಾಂಗ್ ಇತ್ತು" ಎಂದು ಹಳೆಯ ಕನ್ನಡ ಚಲನಚಿತ್ರದ ಹಾಡಿನೊಂದಿಗೆ ಅಮ್ಮ ಅಪ್ಪನನ್ನೂ ಛೇಡಿಸಿದ್ದುಂಟು. ಅರ್ಧ ಇಡ್ಲಿಗೆ ಸಾಂಬಾರು ಖಾಲಿ ಮಾಡಿ ಇನ್ನೊಮ್ಮೆ, ಮಗದೊಮ್ಮೆ (ಬಿಟ್ಟಯಾಗಿ) ಸಾಂಬಾರು ಹಾಕಿಸಿಕೊಂಡು ತಿಂದರೆ ಹೊಟ್ಟೆ ತುಂಬದೇ ಇರುವ ಪ್ರಾಣಿ ಭೂಮಿಯ ಮೇಲೆ ಇರಲು ಸಾಧ್ಯವೇ ಇಲ್ಲ.

ಅದೇನೋ ಈ ವಿಚಾರದಲ್ಲೂ ನಮಗೂ ನಮ್ಮ ತಂದೆಯವರಿಗೂ ತದ್ವಿರುದ್ಧ. ನಮಗೆ ಬೆಳ್ಳಗಿರುವ ಇಡ್ಲಿ ಬೆಳ್ಳಗೆ ಕಾಣಬೇಕು. ಒಂದೇ ಒಂದು ಬಟ್ಟಲು ಸಾಂಬಾರು ಸಾಕು. ನಾಜೂಕಾಗಿ ಚಮಚದಿಂದ ಇಡ್ಲಿಯನ್ನು ಮುರಿದು, ಸಾಂಬಾರಿನಲ್ಲಿ ಅದ್ದಿದ್ದ್ನೋ ಬಿಟ್ನೋ ಎನ್ನೋ ರೀತಿ ಅದ್ದಿ, ಇನ್ನೊಂದು ಚಮಚದಿಂದ ಸ್ವಲ್ಪವೇ ಚಟ್ನಿ ಇಡ್ಲಿಯ ಮೇಲೆ ಹಾಕಿಕೊಂಡು ತಿಂದರೆ ಇಷ್ಟ. ಎಲ್ಲೂ ಒಂದಕ್ಕೊಂದು ಬೆರೆಯದೇ ಇರುವ ಹಾಗೆ ನಾಜೂಕಾಗಿ ಸಂಭಾಳಿಸುತ್ತಾ ಇಡ್ಲಿ ಖಾಲಿ ಮಾಡುವುದು. ಹೇಗೆ ತಿಂದರೂ ನೋಡೋಕ್ಕೆ ಚಂದವೆ, ಆದರೆ ಹೊಟ್ಟೆ ತುಂಬುವುದಿಲ್ಲ.

ಸರಿ, ಜೊತೆಗೆ ಇಡ್ಲಿಯ ಪರಮಾಪ್ತ ಗೆಳೆಯ ವಡೆ ಇದ್ದರೆ ತಕ್ಕಮಟ್ಟಿಗೆ ಹೊಟ್ಟೆ ತುಂಬುವುದು. ನೋಡಿ, ಹೀಗೆ ಬೇರೆ ಬೇರೆಯಾಗಿ ತಿಂದರೆ ಮಾತ್ರವೇ ಅದರ ರುಚಿ ನಮ್ಮ ಬಾಯಲ್ಲಿ ಪ್ರತ್ಯೇಕವಾಗಿ ಹಬ್ಬುವುದು ಎಂದು ನಾನು ನಂಬಿದ್ದೇನೆ. ಇಡ್ಲಿಯನ್ನು ಸಾಂಬಾರಿನಲ್ಲಿ ಮುಳುಗಿಸಿ, ಚುಚ್ಚಿ, ಕೊಂದು, ಹಿಂಸಿಸಿ, ಕಲಸಿ ತಿಂದರೂ ನನ್ನ ಪ್ರಕಾರ ಅದು ಇಡ್ಲಿ ರುಚಿಯ ಕೊಲೆ. ಇನ್ನು ವಡೆಯನ್ನು ಗರಿಗರಿಯಾಗಿ ಕರಿದು ಅದನ್ನು ಇಡ್ಲಿಯ ಹಾಗೆ ಪುಡಿಪುಡಿ ಮಾಡಿ ಸಾಂಬಾರಿನಲ್ಲಿ ಕಿವುಚಿ ತಿನ್ನೋಕ್ಕೆ ಗರಿ ಗರಿ ವಡೆ ಯಾಕೆ? ಅದು ವಡೆ ಆಗಲ್ಲ. ವಧೆ. ಇಡ್ಲಿ ವಡೆಯ ತೇಜೋವಧೆ!

ಇಡ್ಲಿ ನಮ್ಮ ದಕ್ಷಿಣ ಭಾರತದ ರಾಷ್ಟ್ರೀಯ ತಿಂಡಿಯೆಂದರೆ ತಪ್ಪಲ್ಲ. ನಾವು ಪಾಶ್ಚಾತ್ಯರು ಹೇಳಿದರೆ ಮಾತ್ರ ಕಣ್ಣಿಗೊತ್ತಿ ಸ್ವೀಕರಿಸುತ್ತೇವೆ. ಮೊನ್ನೆ ಯಾವುದೋ ದೇಶದಲ್ಲಿ ಹೇಳಿದರಂತೆ, 'ಬೆಳಗಿನ ತಿಂಡಿಗೆ ಅತ್ಯಂತ ಆರೋಗ್ಯಕರ ಕಾಂಬಿನೇಷನ್ ನಲ್ಲಿ ಒಂದುಪಟ್ಟು ಪ್ರೊಟೀನ್ ಹಾಗೂ ಮೂರುಪಟ್ಟು ಕಾರ್ಬೋಹೈಡ್ರೇಟ್ಸ್ ಇರಬೇಕು'. ನಮ್ಮ ಇಡ್ಲಿಯಲ್ಲೂ ಇದೇ ಕಾಂಬಿನೇಷನ್ ಇರುವುದು ನಮ್ಮ ಹೆಮ್ಮೆ. ಒಂದುಪಟ್ಟು ಪ್ರೊಟೀನ್ ಅಂದರೆ ಒಂದುಪಟ್ಟು ಉದ್ದಿನಬೇಳೆ, ಮೂರುಪಟ್ಟು ಕಾರ್ಬೋಹೈಡ್ರೇಟ್ಸ್ ಅಂದರೆ ಅಕ್ಕಿ (ಅಥವಾ ಇಡ್ಲಿ ರವೆ).

ಇದರಿಂದಲೇ ಇರಬೇಕು, ವೈದ್ಯರು ಹುಷಾರಿಲ್ಲ ಎಂದಾಗ ಇಡ್ಲಿ ತಿನ್ನಿ ಅನ್ನೋದು. ಅದೂ ಅಲ್ಲದೆ ಹೊಟ್ಟೆ ಕೆಟ್ಟಾಗಲೂ ನಾವು ಬಯಸೋದು ಬಿಸಿಬಿಸಿ ಇಡ್ಲಿಯನ್ನೇ. ಪ್ರಯಾಣದ ಸಮಯದಲ್ಲೂ ಇಡ್ಲಿ ಅತ್ಯಂತ ಸೂಕ್ತ. ಕಾರಣ ಇಡ್ಲಿ ಹಬೆಯಲ್ಲಿ ಬೇಯುವುದು, ಜಿಡ್ಡಿಲ್ಲ, ಅದರಿಂದ ಸೈಡ್ ಎಫೆಕ್ಟ್ಸ್ ಬಹಳ ಕಡಿಮೆ (ಅಥವಾ ಇಲ್ಲವೇ ಇಲ್ಲ). ಆದರೂ ಅಯ್ಯೋ ಇಡ್ಲಿನಾ ಅಂತ ಮೂಗು ಮುರಿಯುವವರಿಗೆ ಈಗ ತರಹಾವರಿ ಇಡ್ಲಿ ಬಂದಿದೆ. ತಟ್ಟೆಯಲ್ಲಿ ಹುಯ್ದರೆ ತಟ್ಟೆ ಇಡ್ಲಿ. ಮಕ್ಕಳಿಗಾಗಿ ಪುಟ್ಟ ಪುಟ್ಟ ಬಟನ್ ಇಡ್ಲಿ. ಬಿದಿರಿನ ಬಟ್ಟಳಲ್ಲಿ ಹುಯ್ದರೆ ಚಿಬ್ಲು ಇಡ್ಲಿ. ಹಿಟ್ಟು ಅದೇ. ಓಲ್ಡ್ ವೈನ್ ಇನ್ ಅ ನ್ಯೂ ಬಾಟೆಲ್ ಅನ್ನುವ ಹಾಗೆ. ಓಲ್ಡ್ ಇಡ್ಲಿ ಇನ್ ಅ ನ್ಯೂ ಚಿಬ್ಲು.

ಸರಿ ಅದೇ ಹಿಟ್ಟು ಅಂತ ಬೇಜಾರು ಮಾಡ್ಕೊಬೇಡಿ. ಸ್ವಲ್ಪ ಕಾಯಿಚೂರು, ಸ್ವಲ್ಪ ಕಡ್ಲೆಬೇಳೆ ನೆನೆಸಿ, ಕೊತ್ತಂಬರಿ ಸೊಪ್ಪು, ಮೆಣಸು ಬೆರೆಸಿ ತಟ್ಟೆಗೆ ಹುಯ್ದರೆ ಮಸಾಲೆ ಇಡ್ಲಿ ರೆಡಿ. ಇನ್ನು ಕೆಲವು ತರಕಾರಿ ಹಾಕಿ ಮಾಡಿದರೆ ಕಾಂಚಿಪುರಂ ಇಡ್ಲಿ. ಇನ್ನೆಲ್ಲೋ ಒಂದು ಕಡೆ ಅದೇನೋ ಸ್ಪಾಟ್ ಇಡ್ಲಿ ಅಂತ ಮಾಡ್ತಾರಂತೆ. ಅದೇನೇನೊ ತರಕಾರಿ, ಮಸಾಲೆ, ಅದು ಇದು ಎಲ್ಲ

ಕಾದ ಹೆಂಚಿನ ಮೇಲೆ ಹಾಕಿ, ಅದರ ಮೇಲೆ ಇಡ್ಲಿ ಹಿಟ್ಟು ಹೊಯ್ದು, ಅದನ್ನು ಮುಚ್ಚಿ ಬೇಯಿಸುವುದು. ಅದು ಅತ್ತಲಾಗೆ ಇಡ್ಲಿಯೂ ಅಲ್ಲದ, ಇತ್ತ ದೋಸೆಯೂ ಅಲ್ಲದ ಒಂದು ವಿಚಿತ್ರ ವ್ಯಂಜನ. ಇನ್ನೆಲ್ಲೋ ಇಡ್ಲಿಯನ್ನು ಚೌಕಾಕಾರವಾಗಿ ಕತ್ತರಿಸಿ ಹಿಟ್ಟಿನಲ್ಲಿ ಅದ್ದಿ, ಕರೆದು, ನಂತರ ಸೋಯ ಸಾಸ್, ಚಿಲ್ಲಿ ಸಾಸ್, ಟೊಮಾಟೊ ಸಾಸ್ ಇನ್ನಿತರೆ ಮಸಾಲೆ ಸೇರಿಸಿ ಇಡ್ಲಿ ಮಂಚೂರಿಯನ್ ತಯಾರಿಸುತ್ತಾರೆ. ಹೊರಗಿನಿಂದ ಚೀನಿ ಬಟ್ಟೆ ಧರಿಸಿರುವ ಅಪ್ಪಟ ದಕ್ಷಿಣ ಭಾರತದ ಭಟ್ಟ ಎನ್ನಬಹುದು. ಯಾಕೆಂದರೆ ಮಸಾಲೆ ರುಚಿ ಹೊರಗಿನಿಂದ ಚೀನಿಯ ರೀತಿ ರುಚಿಸಿದರೂ, ಒಂದೇ ಒಂದು ತುತ್ತು ಕಡಿದೊಡನೆ ಇಡ್ಲಿಯ ಉದ್ದಿನಬೇಳೆ, ಅಕ್ಕಿಯ ರುಚಿ ಎದ್ದು ಕಾಣುತ್ತದೆ. ಹಾಗಾಗಿ ಈ ಕಾಂಬಿನೇಷನ್ ನನ್ನ ಪ್ರಕಾರ ಅಟ್ಟರ್ ಫ್ಲಾಪ್. ಆದರೂ ನಮ್ಮ ಜನ ಏನ್ ಕೊಟ್ಟರೂ ತಿಂತಾರೆ ಬಿಡಿ!

ಪಾಶ್ಚಾತ್ಯ ಸಂಸ್ಕೃತಿಗಳ ಪ್ರೇರಣೆಯಿಂದ ದೋಸೆಯಂತೂ ನೂರ ಎಂಟು ಅವತಾರ ತಾಳಿಯಾಯಿತು. ನಮ್ಮ ಪಾಡಿಗೆ ಇಡ್ಲಿಯಾದರೂ ಉಳಿದರೆ ನಮ್ಮ ಪುಣ್ಯ. ಯಾವುದೇ ದೇಶದ/ಪ್ರಾಂತ್ಯದ ತಿಂಡಿ ತಿನಿಸು ಆಯಾ ಜಾಗದ ಸೊಗಡು ಹೊಂದಿರುತ್ತದೆ. ಅದರಲ್ಲಿ ಆಯಾ ಜಾಗದಲ್ಲಿ ಬೆಳೆಯುವ ಬೆಳೆ ಅಲ್ಲಿಯ ಪ್ರಮುಖ ಅಂಶವಾಗಿರುತ್ತದೆ. ಉದಾಹರಣೆಗೆ ಉತ್ತರ ಭಾರತದಲ್ಲಿ ಗೋಧಿ ಬೆಳೆಯುತ್ತಾರೆ. ಅವರು ಗೋಧಿ ಹೆಚ್ಚು ಬಳಸುತ್ತಾರೆ. ದಕ್ಷಿಣದಲ್ಲಿ ಅಕ್ಕಿ ಬೆಳೆಯುತ್ತೇವೆ, ಬಳಸುತ್ತೇವೆ.

ಬೆಳೆಯ ಜೊತೆಗೆ, ಆ ಜಾಗದ ಹವಾಮಾನ ಕೂಡ ಪ್ರಭಾವ ಬೀರುತ್ತದೆ. ಐರೋಪ್ಯ ರಾಷ್ಟ್ರಗಳಲ್ಲಿ/ ಅಮೆರಿಕದಲ್ಲಿ ತಂಡಿ ಹೆಚ್ಚು. ಅವರು ಪಿಜ್ಜಾ, ಬರ್ಗರ್ ತಿಂದರು ಅವರ ಶರೀರ ಅದನ್ನು ಅರಗಿಸಬಲ್ಲ ಶಕ್ತಿ ಹೊಂದಿರುತ್ತದೆ. ಮತ್ತು ಛಳಿಯಿಂದ ಅವರ ಮೆಟಬಾಲಿಸಮ್ ಕಡಿಮೆ ಮಾಡುವಲ್ಲಿ ಈ ತಿಂಡಿಗಳು ಸಹಕಾರಿಯಾಗುತ್ತದೆ. ನಮ್ಮಲ್ಲಿರುವ ಬಿಸಿಲ ಬೇಗೆಗೆ ಪಿಜ್ಜಾ ಹೊಂದುವುದಿಲ್ಲ. ಅರಗಿಸಲು ಕಷ್ಟಪಡಬೇಕು. ಆಗೊಮ್ಮೆ ಈಗೊಮ್ಮೆ ತಿಂದರೆ ತೊಂದರೆ ಇಲ್ಲ. ಹೆಚ್ಚಾದರೆ ಅಮೃತವೂ ವಿಷವಾಗುವುದು.


'ಕೇಳೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ – ಕನ್ನಡ!' ಅಂತ ನಮ್ಮ ಅಣ್ಣಾವರು ಹೇಳಿಲ್ವ. ಅದನ್ನೇ ಇಲ್ಲಿ ಹೇಳುವುದಾದರೆ, ಪ್ರಪಂಚವೆಲ್ಲ ಸುತ್ತಿ, ವಿವಿಧ ಖಾದ್ಯಗಳನ್ನು, ನೂರಾರು ಪಿಜ್ಜಾ ತಿಂದು ಬಂದರೂ, ಮಾರನೆಯ ದಿನ ನಮ್ಮ ಮನಸ್ಸು (ದೇಹ) ಬಯಸುವುದು ಬಿಸಿಬಿಸಿ ಇಡ್ಲಿ ವಡೆ, ಅದಕ್ಕೊಪ್ಪುವ ಸಾಂಬಾರು, ಚಟ್ನಿ. ಇಡ್ಲಿಯ ಮೇಲೆ ಕೊಂಚ ತುಪ್ಪ. ಪಕ್ಕದಲ್ಲೊಂದು ಬಿಸಿ ಫಿಲ್ಟರ್ ಕಾಫಿ ಇದ್ದರೆ... ಆಹಾ ಸ್ವರ್ಗಕ್ಕೆ ಮೂರೇ ಗೇಣು.

***

ನಟ ರತ್ನಾಕರ ಮಾಸ್ಟರ್ ಹಿರಣ್ಣಯ್ಯ

– ಪೂರ್ಣಿಮ ಭಗವಾನ್

ಮಾಸ್ಟರ್ ಹಿರಣ್ಣಯ್ಯ ಎಂಬ ಹೆಸರು ಕೇಳಿದೊಡನೆ ಕರ್ನಾಟಕದ ಕನ್ನಡ ನಾಟಕಪ್ರೇಮಿಗಳ ಕಣ್ಮುಂದೆ ಸುಳಿಯುವ ನಾಟಕ 'ಲಂಚಾವತಾರ'. ಲಂಚಾವತಾರ ನಾಟಕ ಹನ್ನೊಂದು ಸಾವಿರಕ್ಕೂ ಅಧಿಕ ಪ್ರದರ್ಶನಗಳನ್ನು ಕಂಡಿದೆ. ಬಹುಶಃ ನಾಟಕ ರಂಗದಲ್ಲಿ ಅತಿ ಹೆಚ್ಚಿನ ಪ್ರದರ್ಶನ ಕಂಡ ಏಕೈಕ ನಾಟಕ. ಎಷ್ಟು ಪ್ರದರ್ಶನಗಳನ್ನು ಕಂಡಿದೆಯೋ ಅಷ್ಟೂ ಪ್ರದರ್ಶನಗಳು ಜನರಿಂದ ತುಂಬಿ ತುಳುಕುತ್ತಿದ್ದವು. ಅತ್ಯಂತ ಜನಪ್ರಿಯ ನಾಟಕ. ಮಾಸ್ಟರ್ ಹಿರಣ್ಣಯ್ಯನವರ ನಾಟಕಗಳ ಸತ್ವ, ಅಭಿನಯ, ಪಾತ್ರಗಳು, ಉತ್ತಮ ವಾಗ್ವೈಖರಿ, ಸಮಾಜಕ್ಕೆ ನೀಡುವ ಸಂದೇಶಗಳು ಜನಮಾನಸದಲ್ಲಿ ಅಚ್ಚಳಿಯದೆ ನಿಂತಿವೆ. ಸಮಾಜದ ಆಗುಹೋಗುಗಳನ್ನು ಧೈರ್ಯವಾಗಿ ಬಿಂಬಿಸಿ ತಿದ್ದಿ ಸರಿಪಡಿಸುವ ನಿಟ್ಟಿನಲ್ಲಿ ಅವರ ಪ್ರಾಮಾಣಿಕ ಪ್ರಯತ್ನಕ್ಕೆ ನಮ್ಮದೊಂದು ದೊಡ್ಡ ಸಲಾಂ. ಮಾಸ್ಟರ್ ಹಿರಣ್ಣಯ್ಯ ಅಂಥಹವರ ನೇರ, ದಿಟ್ಟ ಅಭಿನಯ ಚತುರತೆಯನ್ನು ಬೇರೆ ಇನ್ಯಾವ ನಟರಲ್ಲೂ ಕಾಣಲು ಅಸಾಧ್ಯ.




ಮಾಸ್ಟರ್ ಹಿರಣ್ಣಯ್ಯರವರ ಮೂಲ ಹೆಸರು ಹೆಚ್. ನರಸಿಂಹ ಮೂರ್ತಿ. ನರಸಿಂಹ ಮೂರ್ತಿಯವರ ಹುಟ್ಟೂರು ಮೈಸೂರು. ತಾಯಿ ಶಾರದಮ್ಮ, ತಂದೆ ಹಿರಣ್ಣಯ್ಯ. ತಂದೆ ಹಿರಣ್ಣಯ್ಯನವರೇ ಹೆಚ್.ನರಸಿಂಹ ಮೂರ್ತಿಯವರ ರಂಗಶಿಕ್ಷಕರು. ಹೆಚ್.ನರಸಿಂಹ ಮೂರ್ತಿಯವರ ವಿದ್ಯಾಭ್ಯಾಸ ಮೈಸೂರಿನ ಶಾರದಾ ವಿಲಾಸ ಕಾಲೇಜು ಹಾಗೂ ಬನುಮಯ್ಯ ಕಾಲೇಜುಗಳಲ್ಲಿ. ಮೊದಲು ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಸೇರಿದ ಅವರು, ಸಿ.ಬಿ.ಝಡ್ ವಿಷಯದಿಂದ ಅವರಿಗೆ ಬೇಕಾದ ಪಿ.ಸಿ.ಎಂ. ಕೊಡಲಿಲ್ಲವೆಂದು ಶಾರದಾ ವಿಲಾಸ ಕಾಲೇಜನ್ನು ಸೇರಲು ಪ್ರಯತ್ನಪಟ್ಟರು. ಅಲ್ಲಿಯೂ ಸೀಟಿಲ್ಲ ಎಂದಾಗ ನನಗೆ ಅಡ್ಮಿಷನ್ ಕೊಡಿ, ನಾನೇ ಕುರ್ಚಿ ತರುತ್ತೇನೆ ಎಂದು ಹೇಳಿದೆ ಎಂದು ಸ್ವತಃ ಅವರೇ ಹೇಳಿಕೊಂಡಿದ್ದಾರೆ. ಶಾರದಾ ವಿಲಾಸ ಕಾಲೇಜಿನ ಎರಡನೇ ಬ್ಯಾಚ್‌ನಲ್ಲಿ ಓದಿದರು.

ನರಸಿಂಹ ಮೂರ್ತಿಯವರ ರಂಗಪ್ರವೇಶ ತಂದೆಯವರ ನಾಟಕ ಕಂಪನಿಯಲ್ಲಿ. ತಂದೆಯವರ ಆರೋಗ್ಯ ಹದಗೆಟ್ಟಾಗ ಒಂದೇ ಪಾತ್ರವನ್ನು ಹಂಚಿಕೊಂಡು ಮೊದಲರ್ಧ ಒಬ್ಬರು, ಉಳಿದರ್ಧ ಒಬ್ಬರು ಮಾಡುತ್ತಿದ್ದರು. ಹೆಜ್ಜೆಹೆಜ್ಜೆಗೂ ತಂದೆಯವರ ಮಾರ್ಗದರ್ಶನ ಇತ್ತು. 'ನೀನು ಎರಡು ಕಣ್ಣಿನಲ್ಲಿ ಜಗತ್ತನ್ನು ನೋಡಿದರೆ ಸಾವಿರ ಕಣ್ಣು ನಿನ್ನನ್ನು ನೋಡುತ್ತಾ ಇರುತ್ತವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಅಭಿನಯ ಮಾಡಬೇಕು' ಎಂದು ಹಿರಣ್ಣಯ್ಯನವರು ಮಗ ನರಸಿಂಹ ಮೂರ್ತಿಗೆ ಹೇಳುತ್ತಿದ್ದರು. ಪ್ರೇಕ್ಷಕರು ನರಸಿಂಹ ಮೂರ್ತಿಯವರ ಅಭಿನಯ ನೋಡಿ ಇಷ್ಟಪಟ್ಟರು. ಅದರಿಂದ ನಾಟಕ ಕಂಪನಿಯ ಆದಾಯ ಸ್ವಲ್ಪ ಹೆಚ್ಚಾಯಿತು. ತಂದೆಯವರ ನಿಧನಾನಂತರ ಹಿರಣ್ಣಯ್ಯ ಮಿತ್ರ ಮಂಡಳಿ ನಾಟಕ ಕಂಪನಿಯ ಪೂರ್ಣ ಜವಾಬ್ದಾರಿ ನರಸಿಂಹ ಮೂರ್ತಿಯವರ ಹೆಗಲೇರಿತು. ಹಿರಣ್ಣಯ್ಯನವರ ಏಕಮಾತ್ರ ಸಂತಾನ ಆಗಿದ್ದರಿಂದ ಮುಂದೆ ನರಸಿಂಹಮೂರ್ತಿಯವರು ಮಾಸ್ಟರ್ ಹಿರಣ್ಣಯ್ಯ ಎಂದೇ ಪ್ರಸಿದ್ಧಿ ಪಡೆದರು. ಅವರ ಪ್ರಸಿದ್ಧಿ ಎಷ್ಟರಮಟ್ಟಿಗೆ ಎಂದರೆ ಮೂಲ ಹೆಸರು ನರಸಿಂಹಮೂರ್ತಿಯನ್ನು ಕೇವಲ ಕೆಲವೇ ಬಾಲ್ಯದ ಗೆಳೆಯರು, ಶಿಕ್ಷಕರು ಉಪಯೋಗಿಸುತ್ತಿದ್ದರು.

ಹಿರಿಯ ರಂಗಕರ್ಮಿ, ನಟರತ್ನಾಕರ ಮಾಸ್ಟರ್ ಹಿರಣ್ಣಯ್ಯನವರು ತಮ್ಮ ನವಿರಾದ ಹಾಸ್ಯ, ವಿಡಂಬನೆಗಳಿಂದ ರಾಜಕಾರಣಿಗಳ ಜನ್ಮ ಜಾಲಾಡಿಬಿಡುತ್ತಿದ್ದರು. ಇದ್ದುದನ್ನು ಇದ್ದಂತೆ ಖಾದಿಧಾರಿಗಳ ಎದುರಿಗೇ ಹೇಳುವ ಕೆಚ್ಚೆದೆಯ ಕನ್ನಡಿಗರು. ಭ್ರಷ್ಟಾಚಾರಿಗಳಿಗೆ ಸಿಂಹಸ್ವಪ್ನರಾಗಿದ್ದರು. ಸಮಾಜದ ಓರೆಕೋರೆಗಳನ್ನು ತಿದ್ದುವ ಪ್ರಾಮಾಣಿಕ ಪ್ರಯತ್ನವನ್ನು

ಮಾಡುತ್ತಿದ್ದರು. 50 ವರ್ಷಗಳ ಹಿಂದೆಯೇ ಲಂಚ ನಿರ್ಮೂಲನಾ ಕಾರ್ಯಕ್ಕೆ ಕೈಹಾಕಿ ಜನಜಾಗೃತಿ ಉಂಟು ಮಾಡುತ್ತಿದ್ದ ಅವರ ಕಾರ್ಯ ಪ್ರಶಂಸನೀಯ. ಭಗವಂತ ಕೊಟ್ಟಿರುವ ಒಳ್ಳೆಯದನ್ನು ಮಾತ್ರ ಎಣಿಸು ಎನ್ನುವ ಹಿರಿದಾದ ಗುಣ. ಸಮಯಕ್ಕೆ ತಕ್ಕಂತೆ ನಾಟಕದ ಸಂಭಾಷಣೆಯನ್ನು ಬದಲಿಸಿ ನಾಟಕ ಪ್ರದರ್ಶನದಲ್ಲಿ ಕಿಂಚಿತ್ತೂ ಲೋಪವಾಗದಂತೆ ನೋಡಿಕೊಳ್ಳುವ ಚಾಕಚಕ್ಯತೆ ಮಾಸ್ಟರ್ ಹಿರಣ್ಣಯ್ಯನವರಿಗೆ ಕರತಲಾಮಲಕವಾಗಿತ್ತು. ಲೋಕದ ಡೊಂಕು ತಿದ್ದುವ ಪ್ರಯತ್ನ ಯಥೇಚ್ಛವಾಗಿ ನಡೆಸುತ್ತಿದ್ದರು. ಅಂದಿನ ದಿನಗಳಲ್ಲಿ ಸ್ತ್ರೀಯರು ನಾಟಕಗಳಲ್ಲಿ ಅಭಿನಯಿಸುತ್ತಿರಲಿಲ್ಲ. ಹೆಣ್ಣು ಪಾತ್ರಗಳನ್ನೂ ಸಹ ಗಂಡಸರೇ ಮಾಡುತ್ತಿದ್ದರು. ಮಾಸ್ಟರ್ ಹಿರಣ್ಣಯ್ಯನವರು ಬಾಲ್ಯದಲ್ಲಿ ಬಹಳ ಸುಂದರವಾಗಿದ್ದು ಹಲವು ಸ್ತ್ರೀ ಪಾತ್ರಗಳನ್ನೂ ಸಹ ನಿರ್ವಹಿಸುತ್ತಿದ್ದರು. ಬಾಲ್ಯದಲ್ಲಿ ಮದರಾಸಿನಲ್ಲಿ ಇದ್ದಾಗ ತಮಿಳು, ತೆಲುಗು ಭಾಷೆಗಳನ್ನು ಕಲಿತಿದ್ದರು.



ಮಕ್ಮಲ್ ಟೋಪಿ, ನಡುಬೀದಿ ನಾರಾಯಣ, ಸದಾರಮೆ, ದೇವದಾಸಿ, ಲಂಚಾವತಾರ, ಪಶ್ಚಾತ್ತಾಪ, ಭ್ರಷ್ಟಾಚಾರ, ಚಪಲಾವತಾರ, ಲಾಟರಿ ಸರ್ಕಾರ, ಸನ್ಯಾಸಿ ಸಂಸಾರ, ಡಬ್ಬಲ್ ತಾಳಿ ಇನ್ನೂ ಮುಂತಾದ ಹಲವಾರು ನಾಟಕಗಳಿಂದ ಜನಾನುರಾಗಿಯಾದರು.

ಮಾಸ್ಟರ್ ಹಿರಣ್ಣಯ್ಯನವರು ಕನ್ನಡ ರಂಗಭೂಮಿಯ ಶ್ರೇಷ್ಠ ಪ್ರತಿಭೆ. ತಮ್ಮ ಮಾತಿನ ಹರಿತವಾದ ಬಾಣಗಳ ಮೂಲಕವೇ ಭ್ರಷ್ಟಾಚಾರಿಗಳಿಗೆ, ಸಮಾಜದ್ರೋಹಿಗಳಿಗೆ ವಾಕ್ಚಾತುರ್ಯದ ಚಾಟಿ ಬೀಸುತ್ತಿದ್ದರು. ಇದ್ದುದನ್ನು ಇದ್ದಂತೆ ಎದುರಿಗೇ ಹೇಳುವ ಕೆಚ್ಚೆದೆಯ ಧೀಮಂತ ಕನ್ನಡಿಗರು. ಇಡೀ ಸಮಾಜವೇ ಒಂದು ಮನೆಯಿದ್ದಂತೆ. ಮನೆಯೆಂದ ಮೇಲೆ ಕಸಕಡ್ಡಿ, ಓರೆಕೋರೆ ಎಲ್ಲವೂ ಸಹಜ. ಮನೆಯನ್ನು ಶುಭ್ರವಾಗಿ ಇರಿಸಿಕೊಳ್ಳಲು, ಕೊಳೆ ತೊಳೆಯುವುದು ಎಲ್ಲರ ಕರ್ತವ್ಯ. ಎಲ್ಲ ಸಾಹಿತಿಗಳು, ಸಮಾಜ ಸೇವಕರು, ಕಲಾವಿದರು, ಸಾಧು ಸಂತರು, ಪ್ರತಿಯೊಬ್ಬ ನಾಗರೀಕರು ಕೈ ಜೋಡಿಸಬೇಕು. ಮಾಸ್ಟರ್ ಹಿರಣ್ಣಯ್ಯರವರು ಅಂತಹ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದರು. ರಂಗಕರ್ಮಿಯಾಗಿ, ನಟರಾಗಿ ಉತ್ತಮ ಸಂಘಟನಾತ್ಮಕ ಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ರಂಗಭೂಮಿಯ ವಿಶ್ವವಿದ್ಯಾಲಯ ಎಂದೂ ಪ್ರಖ್ಯಾತರಾಗಿದ್ದರು.

ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ದೇಶವಿದೇಶಗಳಲ್ಲಿ ಮಾಸ್ಟರ್ ಹಿರಣ್ಣಯ್ಯರವರ ನಾಟಕಗಳು ಜನಪ್ರಿಯವಾಗಿದ್ದವು. ಅಮೇರಿಕ, ಆಸ್ಟ್ರೇಲಿಯಾ, ಇಂಗ್ಲೆಂಡ್ ಸೇರಿದಂತೆ ಹಲವು ದೇಶಗಳಲ್ಲಿ ನಾಟಕ ಪ್ರದರ್ಶನ ನೀಡಿದ ಹೆಗ್ಗಳಿಕೆ ಮಾಸ್ಟರ್ ಹಿರಣ್ಣಯ್ಯರವರದ್ದು.



ವೇದಿಕೆಯ ಮೇಲೆ ರಾಜಕಾರಣಿಗಳನ್ನು ಮುಲಾಜಿಲ್ಲದೆ ಟೀಕಿಸಿ, ಕೇಸುಗಳನ್ನು ಮೈಮೇಲೆ ಎಳೆದುಕೊಂಡು, ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಎದುರಿಸಿದ್ದರು. 'ಋಣ ಮುಕ್ತಳು', 'ಆನಂದ ಸಾಗರ', 'ಕೇರ್ ಆಫ್ ಫುಟ್ ಪಾತ್' ಸೇರಿದಂತೆ ಅನೇಕ ಚಲನಚಿತ್ರಗಳಲ್ಲಿಯೂ ಅವರು ನಟಿಸಿದ್ದಾರೆ.

ಮಾಸ್ಟರ್ ಹಿರಣ್ಣಯ್ಯನವರ ಸಾಧನೆಯನ್ನು ಮೆಚ್ಚಿ ಹಲವಾರು ಸಂಘ ಸಂಸ್ಥೆಗಳು, ರಾಜ್ಯ ಸರ್ಕಾರ ಪ್ರಶಸ್ತಿಗಳನ್ನು ನೀಡಿದ್ದಾರೆ. ಅದರಲ್ಲಿ ಕೆಲವು ಪ್ರಶಸ್ತಿಗಳು: ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಂಗಭೂಮಿ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ, ನವರತ್ನರಾಂ ಪ್ರಶಸ್ತಿ, ನಟರತ್ನಾಕರ ಪ್ರಶಸ್ತಿಗಳು. ಅಷ್ಟೇ ಅಲ್ಲದೆ ಇನ್ನೂ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಮಾಸ್ಟರ್ ಹಿರಣ್ಣಯ್ಯರವರಂತಹ ಅನೇಕ ಜನರು ರಕ್ತ ಬೀಜಾಸುರರಂತೆ ಜನಿಸಿಬಂದಾಗ ಮಾತ್ರ ನಮ್ಮ ಸಮಾಜದಲ್ಲಿ ಅಂಟಿರುವ ಪಕ್ಷಪಾತ, ಜಾತೀಯತೆ, ಅರಾಜಕತೆ, ಭ್ರಷ್ಟಾಚಾರ, ವಂಶ ಪಾರಂಪರಿಕ ಆಡಳಿತ, ಇನ್ನೂ ಹಲವಾರು ಪಿಡುಗುಗಳನ್ನು ಕ್ರಮೇಣವಾಗಿ ಹಿಮ್ಮೆಟ್ಟಿಸಲು ಸಾಧ್ಯ. ಅಂತಹ ದಿನಗಳು ಬೇಗ ಬರಲೆಂಬುದು ಎಲ್ಲರ ಆಶಯ.

***

ಭಾಗ್ಯ

– ಶೀಲಾ ಅರಕಲಗೂಡು

(ತರಳ ವೃತ್ತದಲ್ಲಿದೆ)

ಬರೆದು ತಂದಿಹೆ ನೀವು ಹೇಳಿದ ಕಾವ್ಯವಿಲ್ಲಿಗೆ ಕೊಳ್ಳಿರೈ
ತೆರೆದು ನೋಡುತಲೋದಿ ಸೂಕ್ಷ್ಮದಿ ತಪ್ಪು ಕಾಣಲು ತಿದ್ದಿರೈ
ಧರಣಿ ಮೇಗಡೆ ಚಾಪೆ ಹಾಸಿರೆ ನಾನು ನೆಟ್ಟಗೆ ನಿಲ್ಲುತಾ
ಕರವ ಜೋಡಿಸಿ ಕಣ್ಣು ಮುಚ್ಚುತ ಧೇನಿಸುತ್ತಲಿ ಕೇಳುವೇ

ಸಹನೆಯಿಂದಲಿ ಕೇಳಿಕೊಳ್ಳುತ ಪಾಠವೆಲ್ಲವನಾಲಿಸೇ
ವಿಹಗ ದೃಷ್ಟಿಯೊಳಿಂದ ಮಂಥನ ಮಾಡುತಿದ್ದರೆ ಚಿತ್ತದೊಳ್
ಗಹನ ವಸ್ತುವು ವೇಗದಲ್ಲಿಯೆ ಜೀರ್ಣವಾಗುತ ಮಂಡೆಯೊಳ್
ದಹಿಸಿ ಮೌಢ್ಯವ ನೀಡೆ ತೇಜವ ನಮ್ಮ ಭಾಗ್ಯವು ಕಾಣಿರೈ

***

ಲಕುಮಿಯ ಕರೆ

– ಸಿಂಧು ಹರಿಥಸ್

ದಿವ್ಯಳದು ಚಿಕ್ಕ ಕುಟುಂಬ. ಗಂಡ ಪ್ರದೀಪ್, ಮಗ ದಿಯಾನ್, ಮಗಳು ದೃಶ್ಯ. ವರ್ಷದ ಹಿಂದೆಯಷ್ಟೇ ಅತ್ತೆ ಲಕ್ಷ್ಮಿದೇವಿಯವರು ದೈವಾಧೀನರಾಗಿದ್ದರು. ಅವರ ನೆನಪಿನಲ್ಲಿ ಸೊರಗಿ ಹಾಸಿಗೆ ಹಿಡಿದಿದ್ದರು, ಮಾವ ಶ್ರೀನಿವಾಸಯ್ಯನವರು. ಅತ್ತೆಯ ವರ್ಷಾಬ್ದಿಕದ ನಂತರ ಇದು ಅವರ ಮನೆಯ ಮೊದಲ ಹಬ್ಬ, ದೀಪಾವಳಿ.

ದೀಪಾವಳಿ ಎಂದರೆ ಮಕ್ಕಳಲ್ಲಿ ಸಂತೋಷ ಸಡಗರಗಳಿಗೆ ಮಿತಿಯಿಲ್ಲ. ದೀಪಾವಳಿಗೆ ಮರು ನಾಮಕಾರಣವನ್ನೇ ಮಾಡಿ, ಪಟಾಕಿ ಹಬ್ಬ ಎಂದು ಕರೆಯುತ್ತಿದ್ದರು. ಹಿಂದಿನ ವರ್ಷದ ಪಾಲಿನ ಪಟಾಕಿಯನ್ನೂ ಸೇರಿಸಿ, ಇಮ್ಮಡಿ ಪ್ರಮಾಣದಲ್ಲಿ ಪಟಾಕಿ ಹೊಡೆಯುವ ಸಂಭ್ರಮ ಅವರದ್ದು.

ನರಕಚತುರ್ದಶಿಯಂದು ಬೆಳಿಗ್ಗೆಯೇ ಗಂಡ ಮಕ್ಕಳಿಗೆ ಅಭ್ಯಂಗ ಮಾಡಿಸಿ, ದೇವರ ಪೂಜೆ ಮಾಡಿದಳು ದಿವ್ಯ. ಮಂಗಳಾರತಿ ಆಗುವುದೇ ಕಾಯುತ್ತಿದ್ದ ಮಕ್ಕಳು, ತೀರ್ಥ ಕುಡಿದು ಪಟಾಕಿ ಹೊಡೆಯಲು ಅಪ್ಪನನ್ನು ಕರಕೊಂಡು ಓಡಿದರು. ಇತ್ತ ದಿವ್ಯ ಪಾಯಸ, ಜಾಮೂನು, ಏಳು ಕಪ್ಪಿನ ಬರ್ಫಿ, ಪಲ್ಯಗಳು, ಕೋಸಂಬರಿಗಳು, ಗೊಜ್ಜು, ಚಿತ್ರಾನ್ನ, ತೊವ್ವೆ, ತರಕಾರಿ ಹುಳಿ, ತಿಳಿಸಾರು ಹಾಗು ಬಿಸಿಬಿಸಿ ಆಂಬೊಡೆ ಎಲ್ಲವನ್ನೂ ಮಾಡಿದಳು.

ಅಡುಗೆಯ ಘಮ ಬಾಗಿಲನ್ನು ದಾಟಿದೊದನೆಯೇ ಮಕ್ಕಳು ಒಳಗೆ ಓಡಿ ಬಂದರು. ಎಲ್ಲರಿಗೂ ಪಾಂಗಿತವಾಗಿ ಊಟವನ್ನು ಬಡಿಸಿ, ಮಾವನವರಿಗೂ ಅವರ ಪಥ್ಯಕ್ಕೆ ತಕ್ಕಂತೆ ಅಡುಗೆಮಾಡಿ ಬಡಿಸಿದಳು ದಿವ್ಯ. ತಾನೂ ತಿಂದು ಅಡುಗೆಮನೆ ಶುಚಿ ಮಾಡುವುದರೊಳಗೆ ಸಂಜೆಯಾಗಿತ್ತು. ಮನೆ ಸುತ್ತ ದೀಪಾಲಂಕಾರ ಮಾಡಿದಳು. ಅವಳು ಪಟಾಕಿ ಹೊಡೆದು ಸಂತಸ ಪಡೆದಳು. ರಾತ್ರಿ ಊಟ ಮಾಡಿ ಮಲಗಿದಳು.

ಗಾಢ ನಿದ್ರೆಯಲ್ಲಿದ್ದ ದಿವ್ಯಾಳ ಜಂಗಮವಾಣಿಗೆ ಒಂದು ಕರೆ ಬಂತು. ಕಣ್ಣು ಬಿಡದೆ, ಮಂಪರಿನಲ್ಲಿಯೇ ಕರೆ ಸ್ವೀಕರಿಸಿದ ದಿವ್ಯ, "ಹಲೋ" ಎಂದಳು. "ಏನಮ್ಮ ಇದು, ಇಷ್ಟು ಹೊತ್ತಲ್ಲಿ ಇಷ್ಟು ನಿದ್ದೆಯೇ?" ಎಂದು ಒಂದು ಹೆಣ್ಣಿನ ಧ್ವನಿ ಪ್ರಶ್ನಿಸಿತು.

ದಿವ್ಯ: ಯಾರ್ ಮಾತಾಡೋದು?

ಧ್ವನಿ: ನಾನು ಲಕ್ಷ್ಮಿ.

ದಿವ್ಯ: ಅತ್ತೆ, ನೆನ್ನೆಯಿಂದ ಹಬ್ಬದ ತಯಾರಿ ಒಬ್ಬೆ ಮಾಡಿ ಸುಸ್ತಾಗಿದ್ದೇನೆ. ನೀವಿದ್ದಾಗ ಇಬ್ರೂ ಕೆಲ್ಸ ಹಂಚ್ಕೊಂಡು ಮಾಡ್ತಿದ್ವಿ. ಗೊತ್ತೇ ಆಗ್ತಿರ್ಲಿಲ್ಲ. ದೀಪಾವಳಿ ಅಂದ್ರೆ ಗೊತ್ತಲ್ಲ, ದಿಯಾಗೆ ಜಾಮೂನು, ದೃಶ್ಯಳಿಗೆ ಬರ್ಫಿ, ನಿಮ್ಮಗನಿಗೆ ಆಂಬೊಡೆ ಇರ್ಲೇಬೇಕು. ನಿಮ್ಮಗ ಅಂತೂ "ಇದೇನು ವ್ರತ ಅಲ್ವಲ್ಲ ಎಲ್ಲಾ ತಿಂಡಿ ಮಾಡ್ಲೆಬೇಕು" ಅಂತ ಜೋರು ಮಾಡಿದ್ರು...

ಲಕ್ಷ್ಮಿ: ಅಲ್ಲಮ್ಮ ನಾನು, ಲಕ್ಷ್ಮಿ, ವೈಕುಂಠದಿಂದ.

ದಿವ್ಯ: ನಂಗೊತ್ತಿತ್ತು. ನೀವು ವಿಷ್ಣು ಭಕ್ತೆ ಅಲ್ವಾ, ವೈಕುಂಠಕ್ಕೆ ಹೋಗಿರ್ತೀರಿ ಅಂತ ಅನ್ನಿಸ್ತು.

ಲಕ್ಷ್ಮಿ: ಇಲ್ಲ ದಿವ್ಯ, ನಾನು ವಿಷ್ಣು ಪತ್ನಿ ಲಕ್ಷ್ಮೀದೇವಿ!

ದಿವ್ಯ: ಏನತ್ತೆ ಇದು ಅನ್ಯಾಯ. ಇಲ್ನೋಡಿದ್ರೆ ಮಾವನವರು ನಿಮ್ ನೆನಪಲ್ಲಿ ಕೊರಗ್ತಾ ಇದ್ರೆ, ನೀವು ಅವ್ರ ಹೆಸ್ರನ್ನೇ ತಪ್ಪ್ ಹೇಳ್ತೀರಲ್ಲ... ಶ್ರೀನಿವಾಸಯ್ಯನವರ ಹೆಂಡ್ತಿ ಅನ್ನಿ.

ಲಕ್ಷ್ಮಿ: ನಿಂಗ್ಹ್ಯಾಗ್ ಅರ್ಥ ಮಾಡ್ಸೋದು ಅಂತ ಗೊತ್ತಾಗ್ತಿಲ್ಲ. ಅದಿರ್ಲಿ ಬಿಡು. ಈ ಸಂಜೆ, ಗೋಧೂಳಿ ಲಗ್ನದಲ್ಲಿ ಎಲ್ಲರೂ ನನ್ನನ್ನು ಪೂಜಿಸಿ ಅನುಗ್ರಹ ಪಡೆಯೋ ಹೊತ್ತಾಗಿದೆ. ನಿಮ್ಮನೆಯಲ್ಲಿ ಕತ್ತಲಿತ್ತು. ಅದಕ್ಕೆ ಕರೆ ಮಾಡಿದೆ. ನನ್ನನ್ನು ಆರತಿ ಮಾಡಿ ಒಳ ಬರಮಾಡಿಕೊಳ್ಳಮ್ಮ.

ದಿವ್ಯ: ಅತ್ತೆ, ನೆನ್ನೆ ನರಕ ಚತುರ್ದಶಿ ದಿನ ಒಬ್ಬೆ ಅಷ್ಟೆಲ್ಲ ಅಡಿಗೆ ಮಾಡಿ ಸುಸ್ತಾಯ್ತು. ಸಂಜೆ ಮನೆಯೆಲ್ಲಾ ದೀಪಾಲಂಕಾರ ಮಾಡಿ, ಒಂದ್ರಾಶಿ ಭಾವಚಿತ್ರ ತೆಗೆಸ್ಕೊಂಡೆ. ಆಮೇಲೆ ನಾನು ಸಲ್ಪ ಪಟಾಕಿ ಹೊಡ್ದು, ಊಟ ಮಾಡಿ ತಲೆ ದಿಂಬಿಗಿಟ್ಟೆ ಅಷ್ಟೇ, ನನ್ ಕೆಲ್ಸದ್ ಹೊತ್ತಾಯ್ತು. ಅಂದ ಹಾಗೆ, ನಿಮ್ಗೆ ಗೊತ್ತಿಲ್ಲ ಅಲ್ವಾ... ಒಂದ್ ತಿಂಗಳಿಂದ ನನ್ನ ಕೆಲ್ಸದ್ ಸಮಯ ಬದ್ಲಾಗಿದೆ. ಬೆಳಗ್ಗಿನ ಜಾವ ಮೂರು ಗಂಟೆಯಿಂದ ಹನ್ನೊಂದು ಗಂಟೆ ತನಕ. ಲೆಕ್ಕಕ್ಕೆ ಹನ್ನೊಂದು ಗಂಟೆ ಆದ್ರೆ ವರ್ಕ್ ಫ್ರಮ್ ಹೋಂ ಆದ್ರಿಂದ ಮುಗ್ಸಾಗ ಮಧ್ಯಾಹ್ನ ಒಂದೂವರೆ. ಆಮೇಲೆ ಅಡುಗೆ ಮಾಡಿ, ಊಟ ಮಾಡಿ, ಈಗ ನಾಕ್ ಗಂಟೆಗೆ ಮಲಗ್ದೆ. ಇನ್ನೊಂದ್ ಹತ್ ನಿಮಿಷ.....

ಇನ್ನೂ ಮಾತನಾಡುತ್ತಿರುವಾಗಲೇ ಮನೆ ಪಕ್ಕದಲ್ಲೇ ಪಟಾಕಿ ಬಾಂಬ್ ಸಿಡಿತಕ್ಕೆ ಬೆಚ್ಚಿ ಬಿದ್ದು ಎದ್ದಳು ದಿವ್ಯ. ಕೈಯಲ್ಲಿದ್ದ ಫೋನ್ ಕೆಳಗೆ ಬಿತ್ತು. ಗಡಿಯಾರ ಐದುವರೆ ತೋರಿಸುತ್ತಿತ್ತು. ತಕ್ಷಣ ಕೈಕಾಲು ಮುಖ ತೊಳೆದು ದೇವರ ಮನೆಗೆ ಓಡಿದಳು. ದೇವರ ದೀಪ ಹಚ್ಚಿ, ಹಣತೆಗಳನ್ನೂ ಬೆಳಗಿದಳು. ಬಾಲ್ಕನಿಯಲ್ಲಿದ್ದ ತುಳಸಿ ಮುಂದೆ ಹಣತೆಗಳನ್ನು ಇಟ್ಟು, ಮಿಕ್ಕವನ್ನು ಹೊಸ್ತಿಲ ಮೇಲೆ ಮತ್ತೆ ಮನೆ ಮುಂದೆಲ್ಲ ಇಡಲು, ಮುಂಬಾಗಿಲು ತೆಗೆದಳು. "ಟಿನ್ ಟಿನ್" ಅವಳ ಜಂಗಮವಾಣಿಗೆ ಏನೋ ಸಂದೇಶ ಬಂದ ಸದ್ದಾಯಿತು.

ದೀಪಗಳನ್ನು ಇಟ್ಟು ಬಂದು ಫೋನ್ ನೋಡಿದಳು. "ನಿಮ್ಮ ಖಾತೆಗೆ ಸಂಬಳದ ಜೊತೆಗೆ ಹೆಚ್ಚುವರಿ ಬೋನಸ್ ಪಾವತಿಯಾಗಿದೆ" ಎಂಬ ಸಂದೇಶ ಬಂದಿತ್ತು. ತಲೆ ಕೆರೆಯುತ್ತಾ ಮೇಲೆ ನೋಡಿದರೆ, ಕ್ಯಾಲೆಂಡರಿನಲ್ಲಿದ್ದ ಲಕ್ಷ್ಮಿ ಚಿತ್ರದಲ್ಲಿ ತುಂಟನಗು ಮೂಡಿತ್ತು. ***

ನಮ್ಮ ಭೂಮಿ

–ಶೀಲಾ ಅರಕಲಗೂಡು

(ಕುಸುಮ ಮಂಜರಿ ವೃತ್ತದಲ್ಲಿದೆ)

ತಾಯಿ ರೂಪದಲಿ ಭೂಮಿ ಕಂಡಿಹಳು ತೋರಿ ಶಾಂತಿಯನು ಮುಕ್ತದಿಂ
ಕಾಯುತೆಲ್ಲರನು ಜೀವ ಜಂತುಗಳ ಸಸ್ಯ ವೃಕ್ಷಗಳ ಚಂದದಿಂ
ಪಾಯವಾಗಿಹಳು ಬಾಳಿನಾ ಮನೆಗೆ ದಿವ್ಯ ಶಕ್ತಿಯನು ನೀಡುತಾ
ಸಾಯುವಾತನಕ ನಾವು ಮಾಡುತಿರಬೇಕು ಸೇವೆಯನು ನಿತ್ಯವೂ

ನೋವು ತಿನ್ನುತಲಿ ತೋರದಂತದನು ಪೋಷಿಸುತ್ತಿಹಳು ಸರ್ವರಂ
ಕಾವು ಕೊಟ್ಟಿಹಳು ಬೀಜ ಬಿತ್ತಿರಲು ಬೇಗ ತಾ ಬೆಳೆಯೆ ಸತ್ತ್ವದಿಂ
ನಾವು ನೀವುಗಳು ಸೇವಿಸುತ್ತವಳ ರಕ್ಷಿಸುತ್ತಿರಲು ಮಾನ್ಯರೇ
ದೈವ ನೀಡಿರುವ ನಮ್ಮದೀ ಬದುಕು ಧನ್ಯವಾಗುವುದು ಸತ್ಯಕೂ

***

ಸಂಕಷ್ಟದ ವ್ರತ

- ಗೌರಿ ಭಟ್ಟ

ಪಕ್ಕದ ಮನೆಯ ಸುನಂದಕ್ಕ ಎಂದಿಗಿಂತ ಸ್ವಲ್ಪ ತಡವಾಗಿ ಹೂವು ಕೀಳಲು ಬಂದರು. ಅವರು ಯಾವಾಗಲೂ ನಮ್ಮ ಮನೆ ಹೂಗಳನ್ನೇ ಅವರ ಮನೆ ದೇವರಿಗೆ ಏರಿಸೋದು. ನಮಗೂ ಅದು ಅಭ್ಯಾಸವಾಗಿ ಹೋಗಿದೆ. ಅವರಿಗಾಗಿಯೇ ದಾಸವಾಳ, ಮಲ್ಲಿಗೆ, ನಿತ್ಯಪುಷ್ಪ, ನಂದಿಬಟ್ಟಲು ಹೂವುಗಳನ್ನು ಗಿಡದಲ್ಲಿ ಬಿಟ್ಟಿರುತ್ತೇನೆ. ಇಲ್ಲವಾದರೆ "ಏನು ಗೌರಿ, ನನಗೆ ಹೂವೇ ಇಟ್ಟಿಲ್ಲ, ಎಲ್ಲಾ ನಿಮ್ಮನೆ ದೇವರಿಗೇ ಏರಿಸಿದ್ದೀಯ, ಈ ಸುನಂದಕ್ಕ ಏನು ಮಾಡ್ಬೇಕು? ಬೇರೆ ಎಲ್ಲಿಗೆ ಹೋಗಲಿ?" ಅಂತ ಕೇಳುತ್ತಾರೆ.

"ಸುನಂದಕ್ಕನಿಗೆ ಹೂವು ಬಿಟ್ಟಿಡು ಮಾರಾಯ್ತಿ, ಇಲ್ಲವಾದರೆ ಅವರ ಮನೆ ದೇವರು ಅಳುತ್ತಾರೆ" ಅಂತ ನಮ್ಮ ಮನೆಯವರು ತಮಾಷೆ ಮಾಡುತ್ತಾರೆ.

ಸುನಂದಕ್ಕ ಅವರಿಗೆ ದೇವರಿಗಾಗಿ ಹೂವು ಕೊಯ್ಯುವುದಕ್ಕಿಂತಲೂ ಅವರ ಮನೆಯ ಸುದ್ದಿಗಳನ್ನು ನಮ್ಮ ಮನೆಯ ಸುದ್ದಿಗಳಿಗೆ ವಿನಿಮಯ ಮಾಡಿಕೊಳ್ಳುವ ಅಭ್ಯಾಸ.

ಸುನಂದಕ್ಕನವರ ಸೊಸೆ ಸ್ಮಿತಾ ಬ್ಯಾಂಕಿಗೆ ರಜಾ ಹಾಕಿ ಮನೆಯಲ್ಲಿ ಇದ್ದರೆ ಅವರು ಹೂವು ಕೀಳಲು ಸ್ವಲ್ಪ ತಡವಾಗಿ ಬರುತ್ತಾರೆ. "ಏನೇ ಹೇಳು ಗೌರಿ, ಈಗಿನ ಕಾಲದ ಹುಡುಗಿಯರು ಒಂದು ಹೊತ್ತೂ ಊಟ, ತಿಂಡಿ ಬಿಟ್ಟು ಇರಲಾರರು". ಅವರ ಸೊಸೆಯ ವಿಷಯ ಏನೋ ಹೇಳಲು ಶುರುಮಾಡಿದ್ದಾರೆ ಅಂತ ನನಗೆ ಗೊತ್ತಾಯಿತು. "ಸ್ಮಿತಾ ಇವೊತ್ತು ಮನೆಯಲ್ಲೇ ಇದ್ದಾಳ" ಅಂತ ಕೇಳಿದೆ.

"ತಲೆನೋವಂತೆ. ನಿನ್ನೆ ಅಂಗಾರಕ ಸಂಕಷ್ಟಿಗೆ ಉಪವಾಸ ಮಾಡಿದ್ದಳು. ಪಿತ್ತ ಆಗಿದೆ. ಏನು ಹುಡುಗಿನೋ, ಒಂದು ದಿನ ಊಟ ಮಾಡದೇ ಇದ್ದರೆ ಬ್ಯಾಂಕಿಗೆ ಹೋಗದೇ ರಜಾ ಹಾಕಿ, ಮನೆಯಲ್ಲೇ ಇದ್ದಾಳೆ. ದೇಹಕ್ಕೆ ಒಗ್ಗದ ವ್ರತ, ಉಪವಾಸ ಯಾಕೆ ಅಂತೀನಿ? ಬ್ಯಾಂಕಿನಲ್ಲಿ ಯಾರೋ 'ಮಂಗಳವಾರದಂದು ಬರುವ ಸಂಕಷ್ಟಿಯ ವ್ರತ ಮಾಡಿದರೆ ಒಂದು ವರ್ಷದ ವ್ರತಾಚರಣೆಯ ಪುಣ್ಯ ಸಿಗುತ್ತೆ' ಅಂದರಂತೆ. ಆ ಪುಣ್ಯ ಸಂಪಾದನೆ ಮಾಡಲು ಹೋಗಿ ಈಗ ನೋಡು. ನೋವಿನಿಂದ ತಲೆ ಎತ್ತಲೂ ಕಷ್ಟ ಆಗ್ತಾ ಇದೆ. ಇವೊತ್ತು ಮನೆ ಕೆಲಸ ಅವಳು ಮಾಡಿದ ಹಾಗೇ. ಬಾಗಿಲು ಹಾಕಿಕೋ ಗೌರಿ, ನಾನು ಬರ್ತೇನೆ ಧಂಡಿ ಕೆಲಸ ಇದೆ."

ಸುನಂದಕ್ಕನವರೇನೋ ಹೊರಟು ಹೋದರು. ಆದರೆ ನನ್ನ ತಲೆಯಲ್ಲಿ ವ್ರತಾಚರಣೆಯ ಅನುಭವಗಳು ನುಸುಳಿ ಹೊರಳಾಡಿದವು. ವ್ರತಾಚರಣೆ, ಉಪವಾಸ, ಪೂಜೆಗಳಲ್ಲಿ ನಾನು ಸ್ವಲ್ಪ ಹಿಂದೆ. ಅದೆಲ್ಲಾ ನನ್ನಂತವಳಿಗೆ ಹೇಳಿ ಮಾಡಿಸಿದ್ದಲ್ಲ. ಬ್ಯಾಂಕಿನಲ್ಲಿ ಕೆಲಸ ಮಾಡುವಾಗ ನನಗೂ ಒಬ್ಬಳು ಮುಂಬಯಿಯ ಗೆಳತಿ ಇದ್ದಳು. ಅವಳು ಸಂಕಷ್ಟಿಯ ವ್ರತವನ್ನು ಬಹಳ ಕಠಿಣವಾಗಿ ನಡೆಸಿಕೊಂಡು ಬಂದಿದ್ದಳು. ದಿನವಿಡೀ ಉಪವಾಸ ಇದ್ದು ರಾತ್ರಿ ಚಂದ್ರ ದರ್ಶನ ಆದ ಬಳಿಕ ಸಬ್ಬಕ್ಕಿ ಉಪ್ಪಿಟ್ಟು ಮಾತ್ರ ತಿನ್ನುತ್ತಿದ್ದಳು. ಆ ದಿನ ಬ್ಯಾಂಕಿನಲ್ಲಿ ಪಾರ್ಟಿ ಇದ್ದರೆ ಅವಳ ಪಾಲನ್ನೂ ನಾನೇ ಸ್ವಾಹಾ ಮಾಡುತ್ತಿದ್ದೆ. ಅವಳು ವ್ರತಾಚರಣೆಯ ಬಗ್ಗೆ ನನಗೂ ಸಲಹೆ ಕೊಟ್ಟಿದ್ದಳು. ಒಂದೆರಡು ಸಲ ಮಾಡಿದೆ ಕೂಡ. ಆದರೆ ಊಟದ ಸಮಯದಲ್ಲಿ ಹೊಟ್ಟೆ ಕೇಳುತ್ತಿರಲಿಲ್ಲ. ಬೇರೆ ಸಹೋದ್ಯೋಗಿಗಳ ತಿಂಡಿಯ, ಊಟದ ಪರಿಮಳ ನನ್ನ ಹಸಿವನ್ನು ಕೆರಳಿಸುತ್ತಿತ್ತು. ಗೆಳತಿ ನನ್ನ ಮೇಲೆ ಅಸಮಾಧಾನ ವ್ಯಕ್ತಪಡಿಸಿದಳು.

"ನೋಡು, ನನ್ನಿಂದ ಇದೆಲ್ಲಾ ಅಸಾಧ್ಯ, ಕಾಯಕವೇ ಕೈಲಾಸ ಎಂದು ನಂಬಿದವಳು ನಾನು. ಮತ್ತೆ ಸಂಕಷ್ಟಿಯ ದಿನ ಪಾರ್ಟಿಯಲ್ಲಿ ನಿನ್ನ ಪಾಲು ವ್ಯರ್ಥವಾಗಿ ಹೋಗುತ್ತದೆ " ಎಂದು ಸಮಜಾಯಿಷಿ ಕೊಟ್ಟಿದ್ದೆ.

"ಪ್ರತಿಯೊಬ್ಬರ ದೇಹದಲ್ಲಿ ಪರಮಾತ್ಮ ಇರುತ್ತಾನೆ, ದೇಹದಂಡನೆ ಮಾಡಿದರೆ ಅವನಿಗೆ ಅಪಚಾರ ಮಾಡಿದಂತಾಗುತ್ತದೆ" ಅಂತ ಹೇಳಿದೆ. ಹಾಗಾಗಿ ಉಪವಾಸ ಇದ್ದು ವ್ರತ ಮಾಡುವ ಕ್ರಮವನ್ನು ನಾನು ಲಘುವಾಗಿ ಖಂಡಿಸಿದೆ. ಮುಂಬಯಿ ಗೆಳತಿ ನಿರುತ್ತರಳಾದಳು.

ನನ್ನ ಇನ್ನೊಬ್ಬಳು ಗೆಳತಿ ಶುಕ್ರವಾರ ಉಪವಾಸ ಮಾಡುತ್ತಿದ್ದಳು. ಆದಿನ ಬ್ಯಾಂಕಿನಲ್ಲಿ ಪಾರ್ಟಿ ಅಥವಾ ಸಹೋದ್ಯೋಗಿಗಳ ಮನೆಗಳಲ್ಲಿ ವಿಶೇಷ ಊಟಕ್ಕೆ ಆಮಂತ್ರಣ ಇದ್ದರೆ ತಪ್ಪಿಸದೇ ರಾತ್ರಿಗೆ ಹಣ್ಣು ತಿನ್ನುತ್ತಿದ್ದಳು.

ನನಗೆ ನನ್ನ ಅಮ್ಮನ ವ್ರತಾಚರಣೆಯ ಕ್ರಮ ನೆನೆಪಿಗೆ ಬಂತು. ಎಲ್ಲರೂ ಪುಣ್ಯ ಸಂಪಾದನೆಗೆ ಮಂತ್ರಾಲಯ, ತಿರುಪತಿಗೆ ಹೋದರೆ ಅಮ್ಮನಿಗೆ ಮನೆಯೇ ಮಂತ್ರಾಲಯ, ಮನಸೇ ದೇವಾಲಯ ಆಗಿತ್ತು. ಮನೆವಾರ್ತೆಯೇ ಅವರ ಕಠಿಣವಾದ ವ್ರತ ಆಗಿತ್ತು.

ಅಜ್ಜಿಯ ಆಚರಣೆಯೂ ವಿಶಿಷ್ಟವಾಗಿತ್ತು. ಸಂಪ್ರದಾಯದಂತೆ ಅಜ್ಜಿಯದು ಒಂದೇ ಹೊತ್ತಿನ ಊಟ. ರಾತ್ರಿಗೆ ಗೊಜ್ಜವಲಕ್ಕಿನೋ ಅಥವಾ ಹುರಿದ ಉದ್ದಿನಕಾಳು ಅಥವಾ ಹೆಸರುಕಾಳಿಗೆ ಬೆಲ್ಲ, ತೆಂಗಿನಕಾಯಿ ಹಾಲು ಹದವಾಗಿ ಸೇರಿಸಿ ಕುದಿಸಿ ಸೇವಿಸುತ್ತಿದ್ದರು. ನಾನೂ ಅವರ ವ್ರತಾಚರಣೆಯಲ್ಲಿ ನನ್ನ ಪಾಲನ್ನು ಚಪ್ಪರಿಸುತ್ತಾ ಇದ್ದೆ. ಅಮ್ಮನೂ, ಅಜ್ಜಿಯೂ ವ್ರತಾಚರಣೆಗೆ ಕೆಲವು ಹೊಂದಾಣಿಕೆಯನ್ನು ಮಾಡಿಕೊಂಡಿದ್ದರೆಂದು ನಾನು ಅವರನ್ನು ರೇಗಿಸುತ್ತಿದ್ದೆ.

ಅಕ್ಕಿ ಹುರಿದು ಮಾಡಿದ ದೋಸೆ ಅಥವಾ ಇಡ್ಲಿ ಮುಸುರೆ ಅಲ್ಲವಂತೆ ಅಥವಾ ಅಕ್ಕಿಯನ್ನು ನೀರು ಸೇರಿಸದೇ ತೆಂಗಿನಕಾಯಿ ನೀರಿನಲ್ಲಿ ಅಥವಾ ಕಬ್ಬಿನ ಹಾಲಿನಲ್ಲಿ ನೆನೆಹಾಕಿ ಒರಳಲ್ಲಿ ಬೀಸಿ ದೋಸೆ ಮಾಡಿದರೆ ವ್ರತಾಚರಣೆಯ ಸಮಯದಲ್ಲೂ ತಿನ್ನಬಹುದಂತೆ. ಇನ್ನು ನವರಾತ್ರಿ ಇರಲಿ, ಶಿವರಾತ್ರಿಗಳಲ್ಲಿಯೂ ಶೆಟ್ಟರ ಅಂಗಡಿಯಿಂದ ತಂದ ಅವಲಕ್ಕಿ ಸ್ವೀಕಾರಾರ್ಹ. ಈರುಳ್ಳಿ, ಬೆಳ್ಳುಳ್ಳಿ ಸೇವನೆ ಖಂಡಿತಾ ನಿಷಿದ್ಧ.

ಅಮ್ಮ ಒಂದು ಕತೆ ಹೇಳುತ್ತಿದ್ದರು. ಒಂದು ಊರಿನಲ್ಲಿ ಅತ್ತೆ, ಸೊಸೆ ಇದ್ದರಂತೆ. ದೊಡ್ಡ ಕುಟುಂಬ. ಮನೆ ತುಂಬಾ ಜನ, ಆಳು ಕಾಳು, ಕೊಟ್ಟಿಗೆಯಲ್ಲಿ ದನಕರುಗಳು. ಸೊಸೆಗೆ ಇಡೀ ದಿನ ಕೈತುಂಬಾ ಕೆಲಸ. ಪುರುಸೊತ್ತೇ ಇರಲಿಲ್ಲವಂತೆ. ಮನೆ ಕೆಲಸವೇ ಮಹಾನ್ ಕಾಯಕ, ಗೋಸೇವೆಯೇ ಮಹಾ ಪುಣ್ಯ ಕಾರ್ಯ. ಹಿರಿಯರ ಸೇವೆಯೇ ಬಹುಮುಖ್ಯ ವ್ರತ ಅಂದುಕೊಂಡ ಮುಗ್ಧ ಸೊಸೆ ಅವಳ ಕೆಲಸಗಳಲ್ಲಿಯೇ ಬದುಕಿನ ಸಾರ್ಥಕ್ಯ ಕಂಡುಕೊಂಡಿದ್ದಳಂತೆ. ಒಂದು ದಿನ ಮನೆಯವರೆಲ್ಲಾ ಇವಳನ್ನು ಬಿಟ್ಟು ಕಾಶೀ ಯಾತ್ರೆಗೆ ಹೋಗಿದ್ದರು. ಗಂಗಾನದಿಯಲ್ಲಿ ಕಳೆದುಹೋದ ಅತ್ತೆಯ ಬೆಂಡೋಲೆ ಸೊಸೆಗೆ ದನಗಳಿಗೆ ಕಲಗಚ್ಚು ಕಲಸುವ ದೊಡ್ಡ ಪಾತ್ರೆಯಲ್ಲಿ ಸಿಕ್ಕಿತ್ತಂತೆ. ಪುಣ್ಯಾತಗಿತ್ತಿ ಸೊಸೆಯ ಕಾಲಿಗೆ ಅತ್ತೆ ಬಿದ್ದರಂತೆ.

ಒಟ್ಟಿನಲ್ಲಿ ಮನಃಶುದ್ಧಿ, ದೇಹ ಶುದ್ಧಿಯ ಉಪವಾಸ ವ್ರತಾಚರಣೆ ನನಗೆ ಬಲುಕಷ್ಟ ಅಂತ ನನ್ನ ಅನುಭವದ ಅಭಿಪ್ರಾಯ.

***

ಕಾನ್‌ಸ್ಟಾಂಟಿನೋಪಲ್ ಚರ್ಚ್ ಕಥೆ

– ವಿಠ್ಠಲ. ಇಜೇರಿ

ಬೆಸ್ಕಾಂಟಿಯನ್ ಚಕ್ರವರ್ತಿ, ಜಸ್ಟಿಸೀಯನ್ ತನ್ನ ಪಟ್ಟಣದಲ್ಲಿ ಸುತ್ತಾಡುವಾಗ ಉತ್ತಮವಾದ ಚರ್ಚ್, ದೇವಾಲಯ ಇಲ್ಲದೇ ಇರುವುದನ್ನು ಕಂಡು, ಘನತೆ ಮತ್ತು ಸೌಂದರ್ಯದಿಂದ ಕೂಡಿದ ಸತ್ಯ, ಧರ್ಮದ ದೇವಾಲಯವನ್ನು ಕಟ್ಟಿಸಲು ನಿಶ್ಚಯಿಸಿದನು. ದೇವಾಲಯವನ್ನು ಬಣ್ಣದ ಕಲ್ಲುಗಳಿಂದ, ಒಳಗೂ ಹೊರಗೂ ಕಣ್ಣು ಕೋರೈಸುವ ಪ್ರಕಾಶದಿಂದ ಶೋಭಿಸುವ ಹಾಗೆ ಕಟ್ಟಿಸಲು ಮನಸ್ಸು ಮಾಡಿದ. ಈ ಕೆಲಸದಲ್ಲಿ ಯಾರ ಸಹಾಯವನ್ನೂ ಪಡೆಯದೇ, ಯಾರನ್ನೂ ಪಾಲುಗರರನ್ನಾಗಿಸದೆ, ಬಾಗಿಲು ಮೇಲೆ ತನ್ನೊಬ್ಬನ ಹೆಸರು ಮಾತ್ರ ರಾರಾಜಿಸಬೇಕು ಎಂದು ಅಂದುಕೊಂಡ. ಅದಕ್ಕಾಗಿ ಶ್ರೇಷ್ಠ ಶಿಲ್ಪಿಗಳನ್ನು ಕರೆಸಿ, ಅತ್ಯುತ್ತಮ ಪರಿಕರಗಳನ್ನು ಉಪಯೋಗಿಸಿ ದೇವಸ್ಥಾನವನ್ನು ಕಟ್ಟಿ, ಬಾಗಿಲಲ್ಲಿ "ಅನಂತ ವಿದ್ಯೆಯ ಈ ಸತ್ಯ ದೇವಾಲಯವನ್ನು ಚಕ್ರವರ್ತಿ ಜಸ್ಟಿಸೀಯನ್ ಕಟ್ಟಿಸಿದ್ದಾನೆ" ಎಂದು ಚಿನ್ನದ ಅಕ್ಷರಗಳಲ್ಲಿ ಕೆತ್ತಿರಿ ಎಂದು ಆಜ್ಞಾಪಿಸಿದ.

ಕುಶಲ ಕಾರ್ಮಿಕರು ಏಳು ವರ್ಷಗಳ ಕಾಲ ದೇವಾಲಯದ ಕೆಲಸವನ್ನು ಎತ್ತರದ ಕಂಭಗಳು, ಹೊಳೆಯುವ ಬಿಳಿ ಗುಮ್ಮಟಗಳಿಂದ, ಪ್ರಕಾಶಮಾನ ಗೋಡೆಗಳಿಂದ ಕಟ್ಟಿ ಮುಗಿಸಿದರು. ದೇವಾಲಯ ಸಾರ್ವಜನಿಕರಿಗೆ ಮುಕ್ತ ಮಾಡಲು ಅದ್ದೂರಿ ಕಾರ್ಯಕ್ರಮ ನೆರವೇರಿತು. ಚಕ್ರವರ್ತಿ ಜಸ್ಟಿಸೀಯನ್ ಜಂಭದಿಂದ ಬಂದ. ಆದರೆ ಅವನಿಗೆ ನಿರಾಸೆ ಮತ್ತು ಆಶ್ಚರ್ಯ ಕಾದಿತ್ತು. ದೇವಸ್ಥಾನವನ್ನು ಭಗವಂತನಿಗೆ ವಿಧವೆ ಯುಪ್ರೇಸಿಯಾ ಸಮರ್ಪಿಸಿದಳು ಎಂದು ಬರೆಯಲಾಗಿತ್ತು. ಜಸ್ಟೀಸೀಯನ್ ಕೂಡಲೇ ಮುಖ್ಯ ಶಿಲ್ಪಿಯನ್ನು ಕರೆದು, "ಹೀಗೆ ಬರೆದುದಕ್ಕೆ ನಿನಗೆ ಶಿಕ್ಷೆ ವಿಧಿಸಲಾಗುವುದು" ಎಂದು ಗದರಿದ. ಶಿಲ್ಪಿ "ಪ್ರಭು, ನಾನು ನಿಮ್ಮ ಆಜ್ಞೆಯಂತೆ ಕೆತ್ತಿದ್ದೆ, ಇದಾರದೋ ಬೇರೆಯವರ ಕೈವಾಡ" ಎಂದು ಉಸುರಿದ.

ಅಲ್ಲಿದ್ದ ಪುರೋಹಿತ "ಪ್ರಭು. ಇವನು ಹೇಳುವುದು ನಿಜ. ಇವನು ನಿಮ್ಮ ಹೆಸರನ್ನೇ ಕೆತ್ತುತ್ತಿದ್ದುದನ್ನು ನಾನು ನೋಡಿದ್ದೇನೆ. ಇದು ಬೇರೆಯವರ ಕೈವಾಡ. ನೀವು ಅಲ್ಲಿ ಹೆಸರಿರುವ ಆ ವಿಧವೆ ಯುಪ್ರೇಸಿಯಳನ್ನು ವಿಚಾರಿಸಬೇಕು" ಅಂದ. ಚಕ್ರವರ್ತಿ ಆಕೆಯ ಶೋಧಕ್ಕೆ ಪ್ರಯತ್ನಿಸಿದ. ಯಾರಿಗೂ ಆಕೆ ಸಿಕ್ಕಲಿಲ್ಲ. ಒಬ್ಬ ವೃದ್ಧ "ಪ್ರಭು, ಈ ಹೆಸರಿನ ಹೆಂಗಸು ಸಮುದ್ರದ ದಡದಲ್ಲಿ ವಾಸಿಸುತ್ತಿದ್ದಾಳೆ. ಆದರೆ ಆಕೆ ಬಡವಿ, ಕಣ್ಣು ಕಾಣುವುದಿಲ್ಲ. ಆಕೆಯಿಂದ ಇಂತಹ ಭವ್ಯ ಮಂದಿರ ಕಟ್ಟಿಸಲು ಸಾಧ್ಯವಿಲ್ಲ" ಎಂದು ನುಡಿದ. ಆ ಮುದುಕಿಯನ್ನು ಕರೆತರಲಾಯಿತು. ಚಕ್ರವರ್ತಿ "ಏ, ವೃದ್ಧೆ ಈ ದೇವಾಲಯಕ್ಕೆ ನಿನ್ನ ಹೆಸರು ಅದೇಗೆ ಬಂತು ? ಎಂದು ಗದರಿದ. ಮುದುಕಿ "ಕ್ಷಮಿಸಿ ಮಹಾಸ್ವಾಮಿ, ಅದು ತಿಳಿಯದು. ನಾನು ಈ ದೇವಾಲಯಕ್ಕಾಗಿ ಭಾರವಾದ ಅಮೃತಶಿಲೆಯ ಕಲ್ಲು ಹೊತ್ತು ತರುವ ಎತ್ತುಗಳಿಗೆ ಹಿಡಿ ಹುಲ್ಲು ಹಾಕಿದೆ, ಅಷ್ಟೇ. ಪಕ್ಷಿಯೊಂದು ಕಾಯಿಲೆಯಿಂದ ಮಲಗಿದ ನನ್ನ ಕಿಟಕಿಯ ಬಳಿ ಇಂಪಾಗಿ ಹಾಡಿತು. ಭಗವಂತ ನನ್ನನ್ನು ಸಂತೈಸಲು ಈ ಪಕ್ಷಿಯನ್ನು ಕಳುಹಿಸಿದ್ದಾನೆ. ನಾನು ಭಗವಂತನಿಗೆ ಏನಾದರೂ ಮಾಡಬೇಕು ಎಂದು ನನ್ನ ಮನೆ ದಾರಿಯಲ್ಲಿ ಬಂದ ಬಳಲಿದ ಎತ್ತುಗಳಿಗೆ ಹಿಡಿ ಹುಲ್ಲು ಹಾಕಿದೆ. ಮಿಕ್ಕಿದ್ದು ನನಗೆ ತಿಳಿಯದು" ಅಂದಳು. ಚಕ್ರವರ್ತಿಗೆ ಜ್ಞಾನೋದಯವಾಗಿ ಕಣ್ಣುಗಳಿಂದ ಅಶ್ರುಗಳು ಉದರಿದವು. ಆ ಮುದುಕಿಯ ಕೈಯಿಂದಲೇ ದೇವಸ್ಥಾನ ಉದ್ಘಾಟನೆ ಮಾಡಿಸಿದ.

(ಕ್ರಿ.ಶ. 531ರಲ್ಲಿ ಜಸ್ಟೀಸೀಯನ್ ಕಟ್ಟಿಸಿದ ಚರ್ಚು, ಕ್ರಿ.ಶ. 1453ರಲ್ಲಿ ಸುಲ್ತಾನ್ ಎರಡನೇ ಮೊಹಮ್ಮದನ ಕಾಲದಲ್ಲಿ ಮಸೀದಿಯಾಗಿ ಪರಿವರ್ತತವಾಯಿತು. 1935ರಲ್ಲಿ ಇದನ್ನು ಬ್ರಿಟಿಷರು ವಶಪಡಿಸಿಕೊಂಡು ವಸ್ತುಸಂಗ್ರಹವಾಗಿ ಪರಿವರ್ತನೆ ಮಾಡಿದರು. 1985ರಲ್ಲಿ ಯುನೆಸ್ಕೊ ಇದನ್ನು ಪರಂಪರಾಗತ ಕಟ್ಟಡಗಳ ಪಟ್ಟಿಗೆ ಸೇರಿಸಿತು. ಈಗ ಟರ್ಕಿ ಸರಕಾರ ಪುನಃ ಇದನ್ನು ಮಸೀದಿಯಾಗಿ ಪರಿವರ್ತನೆ ಮಾಡಿದೆ)

***

ಎಲ್ಲರ ಮನೆ ದೋಸೆನೂ...

– ಎಲ್. ಗಿರಿಜಾ ರಾಜ್

"ಆಯ್ತಾ? ನನ್ನ ಮುದ್ದಿನ ಸೊಸೆ, ದೋಸೆ ಹಾಕೇ ಬೇಗ, ಹೊಟ್ಟೆ ಚುರುಗುಟ್ಟುತ್ತಿದೆ ಹಸಿವಿನಿಂದ, ತಿಂಡಿ ತಗೊಂಬಾ ಬೇಗ (ಗೊಣಗುಟ್ಟುತ್ತಾ) ಎರಡು ದೋಸೆ ಹಾಕೋಕೆ ಮಹಾತಾಯಿ ಎಷ್ಟು ಹೊತ್ತು ಮಾಡ್ತಾಳೋ. ಮಗನ ಜೊತೆ ಜಗಳ ಕಾಯಿ ಅಂದ್ರೆ ಕಾಲ್ಕೆರೆದುಕೊಂಡು ಸದಾ ಸಿದ್ಧ! ಏನಂತ ಬಂದು ನಮ್ಮನೇಗೆ ವಕ್ಕರಿಸಿದಳೋ ಕಾಣೆ" ಎಂದುಕೊಳ್ಳುತ್ತಿದ್ದ ಹಾಗೇ, ಸೊಸೆ ಕೂಗುತ್ತ, "ಏನತ್ತೆ, ಭಾರೀ ವಟಗುಟ್ಟುತ್ತಿದ್ದೀರಾ? ಅದರ ಪ್ರಭಾವಾನೇ ಏನೋ, ಇಲ್ಲಿ ದೋಸೆ ತೂತೇ ಬೀಳ್ತಿಲ್ಲ... ಏನ್ ಹೋಲ್ಸೋ, ಹೊಲಸೋ... ಇದೂ ಸೇರಿಕೊಂಡಿದೆ ನನ್ನ ಗೋಳು ಹುಯ್ಯೋಕೆ. ಮನೆ ಜನಸಾಲ್ದು ಅಂತ" ಎಂದು ದೋಸೆಗೆ ಮಗಚೋ ಕೈಯಿಂದಲೇ ತೂತು ಕೊರೆಯಲಾರಂಭಿಸಿದಳು.

ಅತ್ತೆ "ಕೇಳುಸ್ತು ಎಲ್ಲ, ಏನ್ಮಾಡೋದು, ನಮ್ಮನೆ ದೋಸೆ ಜಾಸ್ತಿ ತೂತಿರಬೇಕಲ್ಲ! ಯಾಕಂದ್ರೆ ಮೂರೂ ಹೊತ್ತೂ ಜಗಳ, ಕದನ ಇದ್ದೇ ಇರುತ್ತಲ್ಲ, ಸೊಸೆ ಮುದ್ದೇ.. ಸರಿಯಾಗಿ ಹದವಾಗಿ ಅಳತೆಮಾಡಿ ಅಕ್ಕಿ, ಉದ್ದಿನಬೇಳೆ, ಕುಸುಬಲ ಅಕ್ಕಿ ನೆನೆ ಹಾಕಿದರೆ ತಾನೆ ದೋಸೆ ತೂತು ಬೀಳೋದು, ತೂತು ಬಿದ್ದಷ್ಟೂ ಮೆದುವಾಗಿರುತ್ತೆ. ನಿನಗೆ ನಿಮ್ಮಮ್ಮ, ಅಪ್ಪ ಕಲಿಸಿದ್ದರೆ ತಾನೇ! ನೀನೇನು ಮಾಡ್ತೀಯ ಬಿಡು, ಎಲ್ಲರ ಮನೆಯಲ್ಲಿ ದೋಸೆ ತೂತಾದರೆ ನಮ್ಮ ಮನೆಯಲ್ಲಿ ಕಾವಲೀನೇ ತೂತು! ರಾತ್ರಿಯೆಲ್ಲಾ ಗಂಡ ಹೆಂಡತಿ ಜಗಳ ಆಡ್ತಿದ್ರಿ. ನನಗೆ ನಿದ್ದೆಯೇ ಬರ್ಲಿಲ್ಲ. ಇನ್ನು ಪಾಪು, ಅದೊಂದು ಕೂಸು. ನಿಮ್ಮಿಬ್ಬರ ಜಗಳದಲ್ಲಿ ಅದೂ ಬಡವಾಗಿಹೋಗಿದೆ. ಎಲ್ಲ ನನ್ನ ಗ್ರಹಚಾರ. ಅವರೋ ನೆಮ್ಮದಿಯಾಗಿ ಕಣ್ಣು ಮುಚ್ಕೊಂಡ್ರು. ಪಾಪಿ ಜೀವ ನನ್ದು, ನಾನಿನ್ನೂ ಬದುಕಿದೀನಲ್ಲ" ಎಂದರು.

ಅಷ್ಟು ಹೊತ್ತಿಗೆ ತಟ್ಟೆಯಲ್ಲಿ ಎರಡು ದೋಸೆ, ಜೊತೆಗೆ ಚಟ್ನಿ ತಂದು ಅತ್ತೆಯ ಮುಂದೆ ಕುಕ್ಕುರು ಬಡಿದು, "ಅದೇ ಯಾಕೆ ಅಂತ?" ಮಗಚೋ ಕೈಯಲ್ಲಿ ಆ್ಯಕ್ಷನ್ ಮಾಡಿಸುತ್ತ ಕೇಳಿದಳು. ಅತ್ತೆಗೆ ಅರ್ಥವಾಗಲಿಲ್ಲ. "ಏನೇ ಹಾಗಂದ್ರೇ... ಏನ್ ಹೇಳ್ತಾ ಇದೀಯಾ ನೀನು?" ಎಂದಳು. ಅದಕ್ಕೆ ಸೊಸೆ "ಅದೇ ನೀವಂದ್ರಲ್ಲ, 'ಪಾಪಿ ಜನ್ಮ' ನಂದು, ನಾನಿನ್ನೂ ಬದುಕಿದೀನಲ್ಲ ಅಂತ, ಅದನ್ನೇ ಕೇಳ್ತಾ ಇದೀನಿ ಯಾಕೆ ಅಂತ" ಎಂದಳು. "ಅಯ್ಯೋ, ಏನೇ ನೀನು ಹೇಳ್ತಾ ಇರೋದು. ಇನ್ನೂ ಯಾಕೆ ಬದುಕಿದೀನಿ ಅಂತಲಾ? ಅಯ್ಯಯ್ಯೋ ಶ್ರೀನಾಥೂ, ಬಾರೋ ಇಲ್ಲಿ, ನಿನ್ನ ಹೆಂಡ್ತಿ ನನ್ನ ಇನ್ನೂ ಯಾಕೆ ಬದುಕಿದ್ದೀರಿ? ಅಂತ ಕೇಳ್ತಾ ಇದ್ದಾಳೆ" ಎಂದು ಅಳುತ್ತಾ ಕೂಗಿದಾಗ ಮಗ ಕೋಣೆಯಿಂದ ಓಡಿಬಂದವನೇ, "ಅಮ್ಮ, ಇದೇನಮ್ಮ, ಬೆಳಿಗ್ಗೇನೆ ಶುರು ಮಾಡಿದ್ದೀರಿ ನಿಮ್ಮ ಬಗೆಹರಿಯದ ಜಗಳ. ಅಲ್ಲಿ ನೋಡಿದರೆ ಪಾಪೂಗೆ ಜ್ವರ ಜಾಸ್ತಿ ಆಗಿ ಏನೇನೋ ಬಡಬಡಿಸುತ್ತಾ ಇದೆ, ನೂರಾ ಎರಡು ಡಿಗ್ರಿ..." ಅನ್ನುತ್ತಿದ್ದ ಹಾಗೇ ಜಗಳ ಮರೆತು "ಅಯ್ಯೋ" ಅಂತ ಇಬ್ಬರೂ ಮಗುವಿನ ಬಳಿಗೆ ಓಡಿದರು.

"ಅಲ್ರೀ, ನಾನು ಬೆಳಿಗ್ಗೆ ಎದ್ದು ಜ್ವರದ ಸಿರಪ್ ಹಾಕಿ, ಅತ್ತೆಗೆ ಎರಡು ದೋಸೆ ಹಾಕಿಕೊಟ್ಟು ಹೋಗೋಣ ಅಂತ ಬಂದೆ, ಪಾಪು ನಿದ್ದೆ ಮಾಡ್ತಿದ್ದ, ಜ್ವರ ಕಡಿಮೆಯಾಗುತ್ತದೆ ಅನ್ಕೊಂಡೆ" ಎಂದು ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಅಳತೊಡಗಿದಳು. ಅತ್ತೆ ಮರುಗಿ ಹೋದರು. "ಶ್ರೀನಾಥೂ, ಮೊದಲು ಡಾಕ್ಟರಿಗೆ ಫೋನ್ ಮಾಡಪ್ಪ" ಎಂದು ಅಳುತ್ತಿದ್ದ ಸೊಸೆಯ ಭುಜ ಒತ್ತಿ, "ಅಳಬೇಡ ಪದ್ದೂ, ಏನೂ ಆಗಲ್ಲ ಸುಮ್ನಿರು" ಎಂದು ಸಂತೈಸಿದಾಗ "ಅತ್ತೇ" ಎಂದು ಇನ್ನೂ ಜೋರಾಗಿ ಅಳುತ್ತ ಅವರ ಕೈಗಳನ್ನು ಹಿಡಿದುಕೊಂಡಳು, ಸೊಸೆ.

ಅಷ್ಟುಹೊತ್ತಿಗೆ ಮನೆಗೆ ಹತ್ತಿರವಾಗಿಯೇ ಇದ್ದ ಡಾಕ್ಟರು ಬಂದು ಮಗುವನ್ನು ಪರೀಕ್ಷೆ ಮಾಡಿ ಜ್ವರ ತಕ್ಷಣ ಕಡಿಮೆಯಾಗುವಂತೆ ಒಂದು ಇಂಜೆಕ್ಷನ್ ಕೊಟ್ಟು, "ಗಾಬರಿಯಾಗಬೇಡಿ, ಏನೂ ಆಗಿಲ್ಲ, ಸ್ವಲ್ಪ ಹೊತ್ತಿಗೆ ಜ್ವರ ಬಿಟ್ಟು ಹೋಗುತ್ತೆ" ಅಂತ ಅಭಯ ನೀಡಿ ತಮ್ಮ ಫೀಸು ಪಡೆದು ಹೊರಟು ಹೋದರು.

ಸ್ವಲ್ಪ ಹೊತ್ತಿಗೆ ಕಣ್ತೆರೆದ ಮಗು, ಎಲ್ಲರಕಡೆಗೆ ನೋಡಿ "ಅಮ್ಮ, ಅಜ್ಜೀ, ಅಪ್ಪ" ಅಂದಿತು. ಎಲ್ಲರ ಮುಖಗಳ ಮೇಲೆ ಮಂದಸ್ಮಿತ ಮೂಡಿತು. ಸೊಸೆ ಅತ್ತೆಯ ಕೈ ಹಿಡಿದು, "ನನ್ನ ಕ್ಷಮಿಸಿ ಬಿಡಿ ಅತ್ತೆ. ದೋಸೆಗೆ ನೆನೆ ಹಾಕುವುದು, ಹದ ಎಲ್ಲ ಹೇಳಿಕೊಡಿ, ಕಲಿತುಕೊಳ್ತೀನಿ. ಎಲ್ಲರೂ ತಿಂಡಿ ತಿನ್ನೋಣ ಬನ್ನಿ, ನಿಮಗೆ ಶುಗರ್ ಇದೆ, ಬನ್ನಿ ಬೇಗ. ಅತ್ತೆ, ನನ್ನ ತಪ್ಪಾಯಿತು" ಎಂದಾಗ ದ ಸೊಸೆಯ ಕೆನ್ನೆ ತಟ್ಟಿದ ಅತ್ತೆ, "ನನ್ನ ತಪ್ಪೂ ಇದೆ ಪದ್ದೂ, ಬಾ ಎಲ್ಲಾರೂ ಒಟ್ಟಿಗೇ ತಿಂಡಿ ತಿನ್ನೋಣ" ಎಂದು ಕೋಣೆಯಿಂದ ಆಚೆ ಬಂದರು.

ಶ್ರೀನಾಥ ಕೂಗಿದ, "ಆದರೆ ದೋಸೇಲಿ ಹೋಲ್‌ಸೇ ಇಲ್ವಲ್ಲ ಅಮ್ಮಾ". ಅದಕ್ಕೆ ಅವರು, "ನಿನ್ನ ಹೆಂಡತಿ ಮಗಚೋ ಕೈಯಿಂದಲೇ ದೊಡ್ಡ ದೊಡ್ಡ ತೂತುಗಳನ್ನು ಮಾಡಿದ್ದಾಳೆ ಬಿಡೊ" ಎಂದಾಗ ಎಲ್ಲರೂ ನಕ್ಕರು. ಮಗುವೂ ಕಿಲಕಿಲ ನಕ್ಕಿತು. ಪದ್ದೂ ಹುಸಿ ಮುನಿಸು ನಟಿಸುತ್ತ, "ಹಾಸ್ಯ ಮಾಡ್ಬೇಡಿ ಅತ್ತೆ" ಎಂದಳು. ಅತ್ತೆ " ಸುಮ್ನೆ... ತಮಾಷೆಗೆ, ಪದ್ದೂ’’ ಎಂದು ಪ್ರೀತಿಯಿಂದ ಕೆನ್ನೆ ತಟ್ಟಿದರು.

***

ಅಪ್ಪ ಅಮ್ಮ

-ಶೀಲಾ ಅರಕಲಗೂಡು

(ಮೋದಕ ವೃತ್ತದಲ್ಲಿದೆ)

ಅಮ್ಮನು ತಿಂಡಿಯ ಮಾಡೆ ಸಹಾಯ
ಕ್ಕೆಮ್ಮನು ಕೂಗಿರೆ ತಕ್ಷಣ ನಾನ
ಮ್ಮಮ್ಮನ ಕಾರ್ಯದಿ ಸಕ್ರಿಯವಾಗೀ
ಘಮ್ಮೆನುವಂತೆಯೆ ಮಾಡಿಹೆ ಗೊತ್ತೇ

ಸೇರುತಲೊಟ್ಟಿಗೆ ಭೋಜನ ಮಾಡೆಂ
ದೇರಿದ ಮಾತಲಿ ತಂದೆಯು ಕೂಗಲ್
ಸಾರಿದರೆಲ್ಲರು ಧಾವಿಸಿ ಬೇಗಾ
ಗೌರವ ತೋರುತಲಾತಗೆ ನೋಡಾ

ಅಪ್ಪನು ತಾಯಿಯು ಹೇಳುವ ಮಾತ
ನ್ನೊಪ್ಪುತ ಕಾರ್ಯಗಳೆಲ್ಲವ ಮಾಡು
ತ್ತೊಪ್ಪುವ ರೀತಿಯೆ ನೀವುಗಳೆಲ್ಲಾ
ತಪ್ಪದೆ ವರ್ತಿಸೆ ಮೆಚ್ಚುವರೆಲ್ಲಾ

***

ಬಾರೆ ನನ್ನ ಕನ್ನಡ

-ಶೀಲಾ ಅರಕಲಗೂಡು

(ಉತ್ಸಾಹ ಲಯ ಚೌಪದಿಯಲ್ಲಿದೆ)

ಕವನ ಬರೆಯಲೆಂದು ಕುಳಿತೆ
ಸವಿದು ಹಳೆಯ ನೆನೆಪನು
ವಿವರವಾಗಿ ಮೂಡಿ ಬಂತು
ನವಿರು ಬರೆಹ ಬರೆದೆನು

ಅಂದು ನಾನು ಕಲಿಯಲಿಲ್ಲ
ಚೆಂದದಿಂದ ಕನ್ನಡ
ಸಂದು ಹೋಗುತಿಹುದು ಕಾಲ
ಬಂದು ನಿಲ್ಲು ಸಂಗಡ

ಬೇಡುತಿಹೆನು ನಾನು ನಿತ್ಯ
ಹಾಡಿ ಕಾಡಿ ದೇವನ
ನೀಡಿ ಹರಸು ವಿದ್ಯೆ ಬುದ್ಧಿ
ತೀಡಿ ತಿದ್ದಿ ಕಂದನ

***

ಯತ್ನ ಮತ್ತು ವಿಫಲತೆ – ಲೇಖನಮಾಲೆ 10

ಡ್ರಾಮಾ ಮತ್ತು ಕರ್ಮ

– ಮಾಧುರಿ ಕೃಷ್ಣ

ಆವತ್ತೇಕೋ ಮನಸ್ಸು ತುಂಬ ಉದಾಸವಾಗಿತ್ತು, ಎಂದೂ ಇಲ್ಲದ ನಿಸ್ಸಹಾಯಕತೆ ಕಾಡಿಬರುತ್ತಿತ್ತು. 'ಮುಂದೇನು ಮಾಡಲಪ್ಪಾ, ಹೇಗೆ ಮುಂದುವರಿಯಲಿ' ಎಂದು ಯೋಚಿಸುತ್ತ ಕುಳಿತಿರುವಾಗಲೇ ರಾಯಲ್ ಎನ್‌ಫೀಲ್ಡ್ ಬಂದು ನಿಂತ ಸದ್ದಾಯಿತು. ಈಗಂತೂ ಎದೆವ ಬಡಿತವೇ ಒಮ್ಮೆ ನಿಂತುಬಿಟ್ಟಿತು. ತೆರೆದಿದ್ದ ಬಾಗಿಲ ಕಡೆ ತಿರುಗಿ ನೋಡಲೂ ಅಶಕ್ತಳಾಗಿ, 'ಬಾರೋ ಒಳಗೆ, ಕಾಫಿ ತರಲೇ' ಎಂದರೂ ಕುಳಿತಲ್ಲಿಂದ ಏಳಲಿಲ್ಲ ನಾನು. ಟಿ.ವಿ. ಮೇಲೆ ಸುಳ್ಳುಸುಳ್ಳೇ ಕಣ್ಣು ನೆಟ್ಟಿದ್ದ ನನಗೆ ಏನೂ ಉತ್ತರ ಪಡೆಯದಿದ್ದಾಗ ಆಶ್ಚರ್ಯಗೊಂಡು ತಿರುಗಿ ನೋಡಬೇಕಾಯಿತು. ಹೆಲ್ಮೆಟ್ ಕೈಯಲ್ಲಿ ಹಿಡಿದು, ಗಾಗಲ್ಸ್ ಕಳಚಿ ಸೋದರಳಿಯ ನೆಲ ನೋಡುತ್ತ ನಿಂತಿದ್ದ. ಮುಖವಾದರೋ ಒಂಥರಾ ಗೊಂದಲದಲ್ಲಿದೆಯೋ ಎಂಬಂತಿತ್ತು.

“ಏನೋ.. ಏನ್‌ವಿಷಯ?”

ಅವನು ಉತ್ತರಿಸಲಿಲ್ಲ. ಅವನ ಈ ಹ್ಯಾಪುಮೊರೆ ನೋಡಿ ಒಂದು ನಗೆಯಾದರೂ ತರಿಸೋಣವೆಂದು, "ಏನಪ್ಪ, ಲವ್ ಗಿವ್ ಏನಾದ್ರೂ ಬ್ರೇಕಾಯ್ತೇನೋ ಮಾಣೀ? "ಎಂದೆ ಕುಶಾಲಿಗೆ.

ಥಟ್ಟಂತ ಉತ್ತರ ಬಂತು, “ಇಲ್ಲ!! ಸಕ್ಸೆಸ್ ಆಯ್ತು!”

ಇಲ್ಲೀಗ ಫಟ್ ಅಂತ ವಾಪಾಸು ಸೋಫಾಗೆ ಕುಸಿದದ್ದು ಸ್ವತಃ ನಾನು!

" ಏನೂ.. ಏನ್ ಹೇಳ್ತಾ ಇದ್ದೀಯಾ.. " ತುಟಿ ತೊದಲಿತು,

ಹೆಲ್ಮೆಟ್ ಟೀಪಾಯಿಯ ಮೇಲಿಡುತ್ತಾ, ಗಾಗಲ್ಸ್ ಎದೆಯ ಮೇಲಿನ ಜೇಬಲ್ಲಿ ಭದ್ರಪಡಿಸುತ್ತ, "ಹೌದು ಆಂಟೀ.. ನನ್ನ ಲವ್ ಸ್ಟೋರಿ ಹಂಡ್ರೆಡ್ ಪರ್ಸೆಂಟ್ ಸಕ್ಸೆಸ್ಫುಲ್. ಈಗ ಮೊದಲು ಒಂದು ಲೋಟ ಸ್ಟ್ರಾಂಗ್ ಕಾಫಿ ಕೊಡಿ ನೋಡುವಾ, ಸಕ್ಕರೆ ಜಾಸ್ತಿ ಬೇಕು!" ಎಂದು ಕುರ್ಚಿಯೊಂದನ್ನು ಎಳೆದು ನನ್ನೆದುರು ಕುಳಿತ.

"ನೋಡೀಂದ್ರೇ... ಇಲ್ ಬನ್ನೀಂದ್ರೇ... " ಫಕ್ಕನೆ ಏನೂ ಹೇಳಲೂ ತೋಚದೇ ಯಜಮಾನರನ್ನು ಕರೆದೆ. ಒಳಗೆಲ್ಲೋ ಇದ್ದ ಅವರೂ ದಡಬಡಿಸಿ ಬಂದರು. ಅವರು ಸ್ಟೈಲಾಗಿ ಕುಳಿತ ಸೋದರಳಿಯನನ್ನೂ, ಗೊಂದಲದಲ್ಲಿ ಬಿದ್ದಿದ್ದ ಮಡದಿಯನ್ನೂ ಕಣ್ಣರಳಿಸಿ ನೋಡಿ, ಕೇಳಿದರು. "ಏನೋ ಆಂಟಿಗೇನಾದರೂ ಶಾಕ್ ಥೆರೆಪಿ ಕೊಟ್ಟೆಯಾ?"

ಕುಳಿತಿದ್ದ ಸೋದರಳಿಯ ಇನ್ನಷ್ಟು ಬೀಗಿದ. "ಹೌದು ಹಾಗೇ ಕಾಣಿಸುತ್ತದೆ, ಈಗ ನೀವೇ ಹೋಗಿ ಎರಡು ಕಪ್ ಕಾಫಿ, ಸಕ್ಕರೆ ಜಾಸ್ತಿ ಹಾಕಿ ಮಾಡಿಕೊಂಡು ತನ್ನಿ. ಹಾಂ! ನಿಮಗೂ ಒಂದು ಕಪ್ ಇರಲಿ!" ಎಂದು ಧಾರಾಳಿತನ ಬೇರೆ ತೋರಿ, "ಕಥೆ ಹೇಳುವೇ.. ನಾನೊಂದು ಕಥೆ ಹೇಳುವೇ.. ನನ್ನ ಪ್ರೀತಿ ಪ್ರಣಯದಾ ಕಥೆ ಹೇಳುವೇ..”

“ಎಲಾ ಮಾಣೀ.. ಇದ್ಯಾವಾಗಿಂದ ನಡೀತಿತ್ತು ನಿನ್ನ ಪ್ರೇಮ ಕಹಾನಿ? ಸ್ವಲ್ಪವೂ ಸುಳಿವೇ ಕೊಡಲಿಲ್ಲವಲ್ಲವೋ ನೀನು?" ಎನ್ನುತ್ತ ತಾನೂ ಒಂದು ಕುರ್ಚಿ ಎಳೆದು ನನ್ನ ಪಕ್ಕದಲ್ಲೇ ಕೂತು, "ಕಾಫಿಗೀಫಿ ಎಲ್ಲಾ ಆಮೇಲೆ! ಮೊದಲು ನಿನ್ನ ಪ್ರಣಯ ಪರಿಚ್ಛೇದವನ್ನು ತೆರೆದಿಡು! ಆಮೇಲೆ ಸಕ್ಕರೆ ಕಾಫಿಯೋ ಇಲ್ಲಾ ಶುಗರ್ ಲೆಸ್ಸೋ ನಾವು ನಿಶ್ಚಯಿಸುತ್ತೇವೆ!" ಎಂದು ಕಾಫಿ ಮಾಡಿಕೊಂಡುಬರುವ ಯಾವ ಉತ್ಸಾಹವನ್ನೂ ತೋರದೇ ಹೇಳಿದರು.

"ಹಾಗೇ ಆಗಬೇಕು, ಈ ಘಟಿಂಗನಿಗೆ! ಕಳೆದೆರಡು ವರ್ಷಗಳಿಂದ ಇವನಿಗೆ ಕನ್ಯೆ ಹುಡುಕುವ ವಿಭ್ರಮೆಯಲ್ಲಿ ನಾನು ತೊಳಲಾಡಿದ್ದು ಸ್ವಲ್ಪವೇ!" ಎಂಬ ವಿಕೃತ ಆನಂದವುಂಟಾಯಿತು ನನಗೆ.

ಕೆನ್ನೆ ಊದಿಸಿ ಕುಳಿತ ನನ್ನನ್ನು ನೋಡುತ್ತಲೇ ಮೆತ್ತಗಾದ ಸೋದರಳಿಯ ಬೇರೆ ಸೊಲ್ಲಿಲ್ಲದೇ ತನ್ನ ಪ್ರಣಯ ಶೃಂಗಾರದ ಕಥನವನ್ನು ಹೇಳಲು ಸನ್ನದ್ಧನಾದ.

"ಇದರ ಆರಂಭ ಅಂದು ನಾನು ಇಂಟರ್‌ವ್ಯೂ ತೆಗೆದುಕೊಳ್ಳಲು ಹೋದಾಗಲೇ ಶುರುವಾಗಿತ್ತು. (ಥೂ.. ಹೇಳ್ತಾನೆ ನೋಡು ನಾಚಿಕೆಯಿಲ್ಲದೇ ಎಂದೆನಿಸಿದರೂ ಸುಮ್ಮನಿದ್ದೆ) ಇಂಟರ್ವ್ಯೂ ತೆಗೆದುಕೊಂಡವರಲ್ಲಿ ಅವಳೂ ಒಬ್ಬಳಾಗಿದ್ದಳು. ನಾನು ನನ್ನೆಲ್ಲ ಪ್ರವರ ಸರಿಯಾಗಿಯೇ ಮಂಡಿಸಿದ್ದೆ. ಜಾಸ್ತಿ ಆಫರ್ ಮಾಡಿದ್ದ ಇನ್ನೊಂದು ಕಂಪೆನಿಗೂ ಮನಸ್ಸು ಮಾಡದೇ ಇಲ್ಲೇ ಯಾಕೆ ಕೆಲಸ ಒಪ್ಪಿಕೊಂಡೆನೋ ಎಂಬುದೂ ನನಗರ್ಥವಾಗಿರಲಿಲ್ಲ. ನನಗಿಂತ ಕೆಲವೇ ದಿನಗಳ ಸೀನಿಯಾರಿಟಿಯಿಂದ ಅವಳು ನನಗಿಂತ ಮೇಲಿನ ಕುರ್ಚಿಯನ್ನು ಅಲಂಕರಿಸಿದ್ದಳು. ಪದೇಪದೇ ನಾನ್ ವರ್ಬಲ್ ಸಿಗ್ನಲ್‌ಗಳು ಫ್ಲಾಶ್ ಆಗುತ್ತಲೇ ಇದ್ದುವು" ಎಂದು ಕ್ಷಣಕಾಲ ತಡೆದ. ಸೋದರಳಿಯನ ಕಣ್ಣುಗಳುಮಿರಮಿರನೆ ಮಿನುಗುವುದನ್ನು ಕೂತಲ್ಲಿಂದಲೇ ನಾನು ಗಮನಿಸಿದರೂ ಮಧ್ಯೆ ಪ್ರವೇಶಿಸುವ ಮನಸ್ಸಾಗಲಿಲ್ಲ. ಯಾವುದು ಡ್ರಾಮಾ, ಯಾವುದು ಕರ್ಮ ಎಂದು ಸ್ಪಷ್ಟವಾಗಬೇಕಿತ್ತು ನನಗೆ! ಸೋದರಳಿಯನೋ ನಿರರ್ಗಳವಾಗಿ ಮುಂದುವರಿಸುತ್ತಿದ್ದ.

"ಒಂದಿದ್ದ ವರ್ಷ ಎರಡಾಯ್ತು. ನೀವು ಮತ್ತು ಪಪ್ಪ ನನಗೆ ಕನ್ಯೆ ನೋಡಲು ತೊಡಗಿಕೊಂಡಿರಿ. ನಿಮ್ಮೊಂದಿಗೆ ನಾನೂ ಉಪ್ಪಿಟ್ಟು ತಿಂದು... ತಿಂದು... ಬಂದೆ!"

'ತಿಂದು ಬಂದದ್ದೆಲ್ಲಿ? ನಾನೇ ಮಾಡಿ ಸಪ್ಲೈ ಮಾಡಿದ್ದೇ ಜಾಸ್ತಿ!' ಎಂದು ನನ್ನಷ್ಟಕ್ಕೇ ನಾನು ಗೊಣಗಿಕೊಂಡದ್ದು ಕೇಳಿ, ನಮ್ಮೆಜಮಾನರ ತುಟಿಗಳಲ್ಲಿ ಮಾತ್ರ ಮುಗುಳುನಗೆ ಸುಳಿದದ್ದು ಸುಳ್ಳಲ್ಲ! ಅವನೋ ಭಾರೀ ಮೂಡ್ ಸ್ವಿಂಗ್‌ನಲ್ಲಿದ್ದ.

"ನಿಮ್ಮಲ್ಲಿಂದ ನಾನು ಹೋಗಿ ಸ್ವಂತ ಗೂಡು ಮಾಡಿಕೊಂಡೆನಾ, ನನ್ನ ಸಮಯವೆಲ್ಲಾ ಆಫೀಸಿನಲ್ಲೇ ಜಾಸ್ತಿ ಕಳೆಯುತಿತ್ತು. ಒಂದರ್ಥದಲ್ಲಿ ನನ್ನ ಬಾಸೇ ಆಗಿದ್ದ ಅವಳೊಡನೇ ಹೆಚ್ಚು ಹೆಚ್ಚು ಸಮಯ ಕಳೆಯಬೇಕಾಗಿ ಬರುತಿತ್ತು. ಆಗಲೇ ಅವಳಿಗೆ ಕ್ಯಾಲಿಫೋರ್ನಿಯಾದಿಂದ ಆರು ತಿಂಗಳ ಪ್ರಾಜೆಕ್ಟಿಗೆ ಆರ್ಡರ್ ಬಂತು. ಏರ್ ಪೋರ್ಟಿಗೆ ಬೀಳ್ಕೊಡಲು ಹೋದವರಲ್ಲಿ ನಾನೂ ಒಬ್ಬ. ತನ್ನ ಕ್ಯಾಬಿನ್ ಲಗೇಜ್ ಎಳೆದೆಳೆದುಕೊಂಡೇ ಹೋದಳೆನಿಸಿತು. ಒಂದು ತಿಂಗಳು ಕಳೆದು ಎರಡನೇ ತಿಂಗಳೂ ಮುಗಿಯುತ್ತಾ ಬಂದಿತ್ತು. ಒಂದು ರಾತ್ರಿ ಮಲಗಿದ್ದೆ. ಮೊಬೈಲ್ ಬಿಡದೆ ಕಿರುಗುಟ್ಟಲು ಶುರುವಾಯ್ತು. 'ಇನ್ನರ್ಧ ಗಂಟೆಯಲ್ಲಿ ನನ್ನ ಫ್ಲೈಟ್ ಭೂ ಸ್ಪರ್ಶ ಮಾಡಲಿದೆ, ರಿಸೀವ್ ಮಾಡಲು ಬಾ!' ಗಡಬಡಿಸಿಕೊಂಡು ಓಡುವುದಷ್ಟೇ ನನಗಿದ್ದ ಆಪ್ಶನ್! ನನ್ನನ್ನು ಕಾಣುತ್ತಲೇ ಭಾರ ಹಾಕಿ ನಿಂತಿದ್ದ ಲಗೇಜು ಗಾಡಿಯನ್ನು ದೂರ ತಳ್ಳಿಬಿಟ್ಟಳು!" ಎಂದು ಜಾಕೆಟ್ಟಿನಲ್ಲಿದ್ದ ಫೋಟೋವೊಂದನ್ನು ಹೊರತೆಗೆದು ನಮ್ಮ ಮುಂದಿಟ್ಟ.

ಫೋಟೋದಲ್ಲಿ ತರುಣಿಯೊಬ್ಬಳು ತನ್ನ ಕಮಲದೆಸಳಿನ ಕಣ್ಣುಗಳ ತುಂಬ ನೀರು ತುಂಬಿಸಿಕೊಂಡು ಸೋದರಳಿಯನ ಕೊರಳಸುತ್ತ ಕೈ ಬಳಸಿ, ಅವನ ಹೆಗಲಮೇಲೆ ಮುಖವೂರಿದ ದೃಶ್ಯ ಸೆರೆಯಾಗಿತ್ತು.

"ಇನ್ನೆಲ್ಲವನ್ನೂ ನಿಮಗೆ ಬಿಟ್ಟಿದ್ದೇನೆ ಆಂಟೀ.. "ಎಂದವನು ಮತ್ತೊಮ್ಮೆ ಉಸಿರು ಒಳಗೆಳೆದುಕೊಂಡು, "ಎಷ್ಟು ಬೇಗ ಮದುವೆ ಮಾಡಿಸುತ್ತೀರೋ ಮಾಡಿಸಿ" ಎಂದು ಸೋಫಾಗೆ ಒರಗಿ ಎರಡೂ ಕೈಗಳನ್ನೂ ಆರಾಮಕ್ಕೆ ಚಾಚಿ ತನ್ನ ಭಾರವನ್ನು ನಮಗೆ ವರ್ಗಾವಣೆ ಮಾಡಿ ತಾನು ನಿಶ್ಚಿಂತನಾದ.

ನಾವು ಗಂಡ ಹೆಂಡತಿ ಒಬ್ಬರ ಮುಖ ಇನ್ನೊಬ್ಬರು ನೋಡುತ್ತ ಕುಳಿತೆವು.

***

ಪನ್ನಾ ದಾಸಿ

– ನಾಗರತ್ನ ಸಾಲಗಾಮೆ

ತೆರೆದರೆ ಪುಟ ಮೇವಾಡದ ಚರಿತೆಯ
ಚಲಿಸದೆ ಒಂದೆಡೆ ನಿಲ್ಲುವುದು
ಆ ದಿನ ರಾತ್ರಿಯ ಧಾತ್ರಿಯ ಕಾರ್ಯಕೆ
ಮಾತು ಕಳೆದು ಜಗ ಮಣಿಯುವುದು (೧)

ಮಣ್ಣಿನ ರಮಣಿಯ ಮೋಹವದೆಂತದು
ಬೆನ್ನಿನವರ ಕೊಲೆ ಹೊಸದಲ್ಲ
ಹೆತ್ತವರುತ್ತಮರೆಂಬುದ ಗಣಿಸದೆ
ಒರೆಗಳಚಿದುದೂ ಹುಸಿಯಲ್ಲ (೨)

ಭಗವದ್ಭಕ್ತಿಯ ಉನ್ಮಾದದಿ ಜಗ
ಮರೆಯುತ ಮಗುವನೆ ತುಳಿದವರು
ನ್ಯೂನವನರಿಯದ ನಾಡಿನ ಪ್ರೇಮಕೆ
ತನುಮನ ಪದದಲಿ ಸುರಿದವರು (೩)

ಹಡೆದಿಹ ಕೂಸಿಗು ತಬ್ಬಲಿ ಶಿಶುವಿಗು
ಮೊಲೆ ಹಾಲಲಿ ಪಾಲಿತ್ತವರು
ನಂಬಿದ ಸತ್ಯವ ನೆಮ್ಮುತ ನಗುತಲಿ
ಹಾಲಾಹಲವನು ಉಂಡವರು (೪)

ಕರುಳಿನ ಅತಿ ವ್ಯಾಮೋಹಕೆ ಕುಲವನೆ
ರಣಮಾರಿಗೆ ಬಲಿಗೊಟ್ಟವರು
ಹೇಸದೆ ಸ್ವಾರ್ಥಕೆ ವೈರಿಗೆ ತಾಯಿಯ
ಸೆರಗನೆ ಹಾಸಲು ಕೊಟ್ಟವರು (೫)

ನೆತ್ತರ ಪುಟದಲಿ ರನ್ನದ ಪದದಲಿ
ಕೆತ್ತಿದೆ ಪನ್ನೆಯ ದಿವ್ಯ ಕತೆ
ತ್ರಿಕಾಲವರಿಯದ ಅಸೀಮ ತ್ಯಾಗದ
ಶಿಖರದ ಗುಡಿಯ ಗುಡಿಯಂತೆ (೬)

ಕೂಟದಿ ಪಟ್ಟದ ಪ್ರಭು ಹತನಾದನು
ಅಂತಃಕಲಹಕೆ ಹಿರಿಮಗನು
ನಾಲ್ಕೇ ದಿನದಲಿ ಮಂಡಳಿ ಇಳಿಸಿತು
ದ್ವಿತೀಯ ಶಕ್ತಿವಿಹೀನನು (೭)

ಹಗುರವೆ ಹೆಗಲಿಗೆ ರಾಜ್ಯದ ನೊಗವು
ದೃಢವಿಲ್ಲದಿರೆ ಪರಭಾರೆ
ಕದಲದ ನಿಷ್ಠೆಯ ಕಲಿ ಸರದಾರರು
ನಾಡನ್ನುಳಿಸದೆ ನಡೆಯುವರೇ (೮)

ಬೆಳೆಯುವ ಪೈರನು ಮೊಳೆಯಲಿ ಕಂಡು
ಉದಯಸಿಂಹನನು ಹರಸಿದರು
ಆರರ ಅರಸುಕುಮಾರನ ಲಾಲನೆ
ಪನ್ನಾದಾಯಿಗೆ ವಹಿಸಿದರು (೯)

ದೀನನ ಬಳಿಯಿನ ನ್ಯಾಸದ ಮಾಣಿಕ
ಸುತ್ತಲು ಕೆರಳುವ ಸರ್ಪಗಳು
ಎಣ್ಣೆಯಗಣ್ಣಿನ ಬಿಡುಗಾವಲ ಪಡೆ
ಮಿಣ್ಣನ್ನ ಬಲೆಯೊಡೆ ಮೀಂಬುಲಿಗ (೧೦)

ಕುರುಡನ ಕೋಣೆಯ ರತ್ನದ ಸಂದುಕ
ಕಣ ಕಣ ಸಾವಿರ ಕಿವಿಯಂತೆ
ಈಟಿಯ ಅಳವಿನ ಕೇಸರಿ ಕಂದನ
ದೂಸರಕಾಗಿಯೆ ಕೊಲದಂತೆ (೧೧)

ರಕ್ಷಿಸಿ ಪಟ್ಟಕೆ ಗಟ್ಟಿಯ ಮಾಡುವ
ನಿಷ್ಠೆಯ ವ್ರತಕೆ ತಪ ನಿಂತು
ಓರಗೆ ಮಗನೊಡೆ ಕಾಯುತಲಿದ್ದಳು
ಸಿಪ್ಪಿನ ಒಳಗಿನ ಮುತ್ತಿನೊಲು (೧೨)

ಪಾದುಕ ಪ್ರತಿನಿಧಿ ಭರತನ ಪಾಂಗಿನ
ಸೋದರ ಬಂಧು ಬನಬೀರ
ಕುವರ ಶಿಕ್ಷಣಕೆ ರಾಜ್ಯ ರಕ್ಷಣೆಗೆ
ಹೊಣೆ ಹೊತ್ತಂತಿಹ ಗಾಂಧಾರ (೧೩)

ಪೀಠದ ಪದವಿಯ ಮಾದಕ ಹೆಣ್ಣಿನ
ಸಂಗಕೆ ಸೋಲದ ನರರೆತ್ತ
ಕಡಿವಳು ನಿಷ್ಠೆಯ ಕುಡಿವಳು ನೆತ್ತರ
ಹಿಂಡುತ ಹೊಸ ಬಲಿಯರಸುತ್ತ (೧೪)

ಬಾಧ್ಯರು ಪಟ್ಟಕೆ ಈರ್ವರೆ, ಒಬ್ಬನು
ಶಕ್ತಿವಿಹೀನನು ವಿಕ್ರಮನ
ಅರಿವಿಗೆ ಬಾರದೆ ಮುನ್ನವೆ ಕೊಚ್ಚಿದ
ಭಗ್ಗನೆ ಲಾಲಸೆ ಕಬಳಿಸಲು (೧೫)

ಉದಯನ ಮುಗಿಸಲು ಧಾವಿಸಿ ಬರುತಿಹ
ಸುಳಿವಿಗೆ ಥರಥರ ನಡುಗಿದಳು
ಉಡಿಯಲ್ಲಿಹ ಮೇವಾಡದ ಭಾಗ್ಯವ
ಉಳಿಸುವ ನಿಶ್ಚಯಕೆರಗಿದಳು (೧೬)

ನಿಶೆಯಾಪೋಶನಗೊಂಡಿಹ ಅರಮನೆ
ಧೃತಿಗೆಟ್ಟಿತು ಮತಿ ತ್ರುಟಿಯಷ್ಟೆ
ಖುಲ್ಲನು ಖೂಳನು ಬಲಬೀರನ ಪ್ರತಿ
ಮಿಂಚಿನ ಸಂಚನು ಹೂಡಿದಳು (೧೭)

ವಿದ್ಯುದ್ವೇಗವು ನಾಚುತ ತೊಡರಿತು
ತ್ಯಾಗವು ಶಿಖರವ ಮೀರಿತ್ತು
ಜ್ಯೋತಿರ್ಮೇಘ ವಿಶಾಲದ ಹೃದಯವು
ಪೌರವ್ಯೂಹವ ನುಂಗಿತ್ತು (೧೮)

ಕರುಳಿನ ಎಳೆಕುಡಿ ಚಂದನನನ್ನು
ಕುವರನ ವಸ್ತ್ರದಿ ಸುತ್ತಿದಳು
ಅಂಚೆಯದಿಪ್ಪುಳ ಮೆತ್ತನೆ ಮಂಚದಿ
ಮಲಗಿಸಿ ಮುತ್ತನ್ನೊತ್ತಿದಳು (೧೯)

ಪ್ರಭುವನು ಜತನದಿ ಬುಟ್ಟಿಯೊಳಿಟ್ಟು
ಕಸಕಡ್ಡಿಯ ಹೊರೆಯೊಟ್ಟಿದಳು
ಮೀಸಲ ನಿಷ್ಠೆಯ ಮಾಲಿಯ ಜೊತೆಯಲಿ
ರಕ್ಷಿತ ಸೀಮೆಗೆ ಅಟ್ಟಿದಳು (೨೦)

ಬಿರಿಯುವ ಹೃದಯವ ಹಿಡಿದಳು ಅಸೀಮ
ದೇಶಪ್ರೇಮದ ಕಟ್ಟಿನಲಿ
ಮೂರ್ಛೆಗೆ ಸಂದದೆ ನಟಿಸುತ ನಿದಿರೆಯ
ಗುಟ್ಟನು ಕಾಯುವ ನಿಟ್ಟಿನಲಿ (೨೧)

ನಿರ್ಜನ ನೀರವ ನಿಶೆಯಲಿ ನೀತಿಯ
ಹೊಸಕುತ ಸ್ವಾರ್ಥಕೆ ರಕ್ಕಸನು
ಹಿರಿದ ಕಠಾರಿಯಲಿರಿದೇ ಇರಿದನು
ಮಂಚದ ಮೇಲಿನ ಬಾಲನನು (೨೨)

ಘಟ್ಟಿಸಿ ಘಟ್ಟಿಸಿ ರೋಧಿಸುತಿಹ ಎದೆ
ನೆತ್ತರು ಜಿನುಗುವ ಅಧರಗಳು
ವಜ್ರದ ಹೃದಯದಿ ಮಂಜಿನ ಕಂಬನಿ
ಹಿಮಗಿರಿ ಮೀರುವ ಸಂಕಲ್ಪ (೨೩)

ಪರಿಮಳ ಸೂಸದ ತೆರದಲಿ ಚಂದನ
ಶಿಶುವನು ಬೀರಾ ದಡದಲ್ಲಿ
ಮಣ್ಣಿಗೆ ಅರ್ಪಿಸಿ ತರ್ಪಣವಿತ್ತಳು
ಜಗ ಕಂಡರಿಯದ ಇರುಳಿನಲಿ (೨೪)

ಗುಟ್ಟಲಿ ಬೆಳೆದು ಪಟ್ಟಕೆ ಬಂದುದ
ಚರಿತೆಯು ಹಲವೆಡೆ ಕೆತ್ತಿಹುದು
ಪನ್ನಾದಾಯಿಯ ವಿಮಲ ತ್ಯಾಗವು
ಎಂದೂ ಪುನರಾವರ್ತಿಸದು (೨೫)

(ಚಿಕ್ಕವಯಸ್ಸಿನಿಂದ ನನ್ನನ್ನು ಬಹಳವಾಗಿ ತಟ್ಟಿದ, ಕಾಡಿದ ಹಾಗೂ ತಲ್ಲಣಗೊಳಿಸಿದ ಮೇವಾಡದ ರಜಪೂತ ರಾಜ್ಯದಲ್ಲಿ ೧೬ನೆಯ ಶತಮಾನದ ಪೂರ್ವಾರ್ಧದಲ್ಲಿ ನಡೆದ ಘೋರ ಘಟನೆ ಇದು. ಪನ್ನಾದಾಸಿಯ ಅಸೀಮ ದೇಶಪ್ರೇಮದ ಮೈ ಜುಮ್ಮೆನಿಸುವ ತ್ಯಾಗದ ಕತೆ. ೨೫ ವರ್ಷಗಳ ಹಿಂದೆ ಬರೆದ ಕಥನ ಕವನ)

ಪಮ್ಮು ಆದಳೇ ಸ್ಲಿಮ್ಮು...?

– ಟಿ.ಆರ್.ಉಷಾರಾಣಿ

"ಇದೇನೆ ಪಮ್ಮು, ಮದ್ವೆಗೆ ಮುಂಚೆ ಒಳ್ಳೇ ಐಶ್ವರ್ಯ ರೈ ಥರ ಇದ್ದೋಳು ಈಗ ಪ್ರೀತಿ ಗಂಗೂಲಿ ಆಗೋಗಿದೀಯಲ್ಲೇ?" ಪ್ರಮೀಳಾಳ ಆತ್ಮೀಯ ಸೋದರತ್ತೆ ಹೀಗೆಂದಾಗ ಪ್ರಮೀಳ ಮೂತಿ ಊದಿಸಿಕೊಂಡು ಕೂಡದೇ ಇರಲು ಸಾಧ್ಯನಾ? ನಾಲ್ಕಡಿ ಎಂಟಿಂಚು ಗಿಡ್ಡಗೆ ಗುಂಡಗೆ ಎನ್ನುವಂತೆ ಪ್ರಮೀಳಾ ಗುಂಡುಗುಂಡಾಗಿ ಓಡಾಡಿದರೆ ಸಾಕು, ಡ್ರಮ್ಮು ಉರುಳಿಸಿದಂತೆ ಎನ್ನುವರು. ಪ್ರತೀ ಸಲ ಅವಳನ್ನು ಸಂತೈಸುವುದು ಅವಳ ಗಂಡ ಪಾಂಡುರಂಗನ ಕೆಲಸ.

"ಅಯ್ಯೋ ಬಿಡೆ, ನೀನೇನು ಸಿನಿಮಾದಲ್ಲಿ ನಟನೆ ಮಾಡಬೇಕಾ? ನಿಮ್ಮ ಸೋದರತ್ತೇಗಂತೂ ಹೋಲಿಸೋದಕ್ಕೇ ಸರಿಯಾಗಿ ಬರಲ್ಲ. ಪ್ರೀತಿ ಗಂಗೂಲಿ ಯಾವುದೋ ತಾತರಾಯನ ಕಾಲದೋಳು. ನಿನ್ನನ್ನ ಅನ್ನೋಕೆ ಹೋಗಿ ಅವರ ಜನರಲ್ ನಾಲೆಜ್ ಗೊತ್ತಾಯ್ತು ಅಷ್ಟೇ. ಆ ವಿಷ್ಯ ಬಿಡು ಇನ್ನೇನು ಟಿಪ್ಸ್ ಹೇಳಿದ್ರು ನಿನ್ನ ಸೋದರತ್ತೆ."

"ರೀ... ದಿನಾ ಬೆಳಿಗ್ಗೆ ಬೆಚ್ಚಗಿರೋ ನೀರಿಗೆ ನಿಂಬೆಹಣ್ಣಿನ ರಸ ಮತ್ತು ಜೇನುತುಪ್ಪ ಹಾಕಿ ತೆಗೆದುಕೊಂಡರೆ ಸಣ್ಣ ಆಗ್ತೀವಂತೆ".

"ಕುಡಿ ಯಾರು ಬೇಡಾ ಅಂದ್ರು". ಆದರೆ ಅವನ ಗ್ರಹಚಾರಕ್ಕೆ ಅದು ಅಷ್ಟಕ್ಕೇ ನಿಲ್ಲಲಿಲ್ಲ.

"ರೀ... ಆಮೇಲೆ ಎರಡು ಕಿಲೋಮೀಟರ್ ವೇಗವಾಗಿ ನಡೀಬೇಕು. ನೀವೂ ನನ್ನ ಜೊತೆ ಬರಬೇಕು. ಮಾತಾಡ್ಕೊಂಡು ಹೋಗೋಣಾರೀ".

ಹೇಳಿ ಕೇಳಿ ಪಾಂಡುರಂಗ ಬರೋಬ್ಬರಿ ನಲವತ್ತು ಕೆ.ಜಿ., ದಿನಾ ನಡೆದೂ ನಡೆದೂ ಇಪ್ಪತ್ತು ಕೆ.ಜಿ.ಆಗೋದ್ರೆ ಅಂತ ಹೆದರಿ ನಡುಗಿದ. ಇಷ್ಟಕ್ಕೂ ಸುಮ್ಮನೆ ಕೂಡುವಳೇ ಪಮ್ಮಿ, ಅವಳ ಸೋದರತ್ತೆ ಹೇಳಿದ ಮೇಲೆ? ಅಲಾರಂ ಕ್ಯಂಯ್ ಎಂದದ್ದೇ ತಡ ಗಂಡನನ್ನು ಎಬ್ಬಿಸಿಕೊಂಡು ಹೊರಟೇಬಿಟ್ಟಳು. ನಾಲ್ಕು ಹೆಜ್ಜೆ ಇಟ್ಟು ಉಸ್ಸಪ್ಪ ಎನ್ನುತ್ತಾಳೆ. ಹಳ್ಳಿಗಾಡಿನ ಬಸ್ಸಿನಂತೆ ನಾನಾ ಸ್ಟಾಪು ಅವಳದು. ಸೀರೆಯಲ್ಲಿ ನಡೆಯುವುದು ಕಷ್ಟ ಎಂದು ಜಾಗಿಂಗ್ ಡ್ರೆಸ್, ಕಾಲಿಗೆ ಕಾಲುಚೀಲ, ಬೂಟು, ತಲೆಗೆ ಸ್ಕಾರ್ಫ್ ಎಲ್ಲವೂ ಬಂತು. ರೀ, ಕೈಯಲ್ಲಿ ಆಗಲ್ಲ ನನ್ನ ಕಾಲೆಲ್ಲಾ ನೋವಾಗ್ತಾ ಇದೆ. ಪ್ಲೀಸ್ ಸ್ಕೂಟರ್ ತಂದುಬಿಡ್ರಿ".

"ಏಳು ಪಮ್ಮು ಏಳು, ನಿನ್ನ ಸೋದರತ್ತೆ ನಿನಗೆ ಅಪ್ಪಣೆ ಕೊಟ್ಟಿಲ್ಲವಾ? ನೀನು ಐಶ್ವರ್ಯ ರೈ ಆಗಬೇಡ್ವ? ನಿಮ್ಮ ಮಹಿಳಾ ಸಮಾಜದಲ್ಲಿ ನಿನ್ನನ್ನ 'ರೀ, ಪ್ರಮೀಳಾ ಏನುಮಾಡಿ ಇಷ್ಟು ಸಣ್ಣಗಾದ್ರಿ' ಅಂತ ಕೇಳಬೇಡ್ವ? ನಿನ್ನ ದೇಹವನ್ನು ನಿಷ್ಕರುಣೆಯಿಂದ ಆವರಿಸಿಕೊಂಡಿರುವ ಈ ಕೊಬ್ಬಿಯನ್ನು ಬಡಿದೋಡಿಸು". ಪ್ರಮೀಳಾ ಕವಾಯತಿನಲ್ಲಿ ಭಾಗವಹಿಸುವ ಸಿಪಾಯಿಯಂತೆ ಎದ್ದು ಗಂಡನನ್ನು ಅನುಸರಿಸಿದಳು. ಇಷ್ಟು ಮಾಡುವಷ್ಟರಲ್ಲಿ ಅವನು ನಾಲ್ಕಾರು ಕೆ.ಜಿ. ಕಮ್ಮಿ ಆಗಿದ್ದ. ಒಂದು ವಾರ ಮುಂದುವರೆಯಿತು. ಪಮ್ಮು ಕೈಯಲ್ಲಿ ಕರಪತ್ರ ನೋಡಿ ಯಾವುದೋ ಸೀರೆ, ಡ್ರೆಸ್ ಮಾರಾಟದ ಪತ್ರ, ಇನ್ನೇನು ಆಸ್ಫೋಟಿಸುತ್ತದೆ. ಅದನ್ನು ಹೇಗೆ ತಪ್ಪಿಸಿಕೊಳ್ಳುವುದೆಂದು ಯೋಚಿಸುತ್ತಿರುವಾಗಲೇ ಅವನಿಗೆ ಮತ್ತೊಂದು ಆಘಾತ ಕಾದಿತ್ತು.

ರೀ... ಶಶಿಶಂಕರ್ ಗುರೂಜಿ ನಮ್ಮ ಲೇಔಟ್‌ನಲ್ಲಿ ಪ್ರಾಣಾಯಾಮ, ಯೋಗ ಶಿಬಿರ ನಡೆಸ್ತಾ ಇದಾರೆ. ನಾನೂ ಸೇರ್ತೀನಿ".

"ಈ ನಿಂಬೇರಸ, ವಾಕಿಂಗ್ ಗತಿ ಗೋವಿಂದಾನಾ? ಸರಿ ದುಡ್ಡು ಎಷ್ಟಂತೆ".

"ಬರೀ ಐದು ಸಾವಿರ." ಹಣದ ವಿಷ್ಯ ಕೇಳಿದ ತಕ್ಷಣ ಪಾಂಡುರಂಗ ತನ್ನ ಕಿವಿಯ ಸ್ಪೀಕರ್ ಆಫ್ ಮಾಡಿಕೊಂಡುಬಿಟ್ಟ.

"ಲೇ ಬೇಡ್ವೆ. ಸೊಂಟ, ಕೈಕಾಲು ಹಿಡಕೊಂಡು ಆಮೇಲೆ ಡಾಕ್ಟರ್ ಹತ್ತಿರ ಹೋಗಬೇಕಾಗುತ್ತೆ. ಈಗ ಸುಮ್ನೆ ಮಲಕ್ಕೋ ಹೋಗು. ಬೆಳಿಗ್ಗೆ ವಾಕಿಂಗ್ ಹೋಗಬೇಕು."

"ವಾಕಿಂಗ್ ಬೇಕಾದ್ರೆ ನೀವು ಹೋಗಿ ನನ್ನನ್ನ ಶಿಬಿರದಲ್ಲಿ ಬಿಟ್ಟು. ನಾನಂತೂ ಗೂರೂಜಿ ಶಿಬಿರಕ್ಕೆ ಹೋಗುವವಳೇ. ನಮ್ಮ ಮಹಿಳಾ ಸಮಾಜದಿಂದಾನೇ 5-6 ಜನ ಬರ್ತಾ ಇದಾರೆ".

ಮಾರನೇ ದಿನದಿಂದ ಹೊಸ ಅಧ್ಯಾಯ ಪ್ರಾರಂಭಗೊಂಡಿತು. ಪಾಂಡುರಂಗನ 20 ಇಂಚಿನ ಸೊಂಟವನ್ನು ಹೆಬ್ಬಾವಿನಂತೆ ಬಳಸಿಕೊಂಡಿತ್ತು ಪಮ್ಮೂಳ ಕೈ. ಕುಟರ್ ಕುಟರ್ ಎಂದು ಶಬ್ದ ಮಾಡುತ್ತಾ ಶಿಬಿರದತ್ತ ದೌಡಾಯಿಸಿತು, ಅವನ ಪಾಪದ ಸ್ಕೂಟರ್. ಪಮ್ಮು ವಿಜಯದ ಕಹಳೆ ಊದುತ್ತಾ ಒಳಗೆ ನಡೆದಳು. ಬಡಪಾಯಿ ಪಾಂಡುರಂಗ ಐದು ಸಾವಿರಗಳನ್ನು ತುಂಬಿ ಭಾರವಾದ ಹೆಜ್ಜೆಗಳನ್ನಿಡುತ್ತಾ ವಾಕಿಂಗ್ ಹೊರಟ. ಒಂದು ನಾಲ್ಕು ದಿನ ಹೋಗಿರಬಹುದು, ಇದ್ದಕ್ಕಿದ್ದಂತೆ ಪಮ್ಮು ತನಗೆ ಅಗಾಧವಾದ ಮಂಡಿನೋವು, ಸೊಂಟನೋವೆಂದು ಮಲಗಿದವಳು ಏಳಲೇ ಇಲ್ಲ. ಏತನ್ಮಧ್ಯೆ ಇವಳ ನೆಂಟರ ಮದುವೆ ಬೇರೆ. ಹಾಗೆಯೇ ಕಷ್ಟಪಟ್ಟುಕೊಂಡು ಪಮ್ಮು ಪಾಂಡುರಂಗನನ್ನೂ ತಳ್ಳಿಕೊಂಡು ಹೊರಟೇಬಿಟ್ಟಳು. ಅವನ ಗ್ರಹಚಾರಕ್ಕೆ ಅವಳ ಸೋದರತ್ತೆ ಛತ್ರದ ಬಾಗಿಲಲ್ಲೇ ನಿಂತಿದ್ದವರು,

"ಏನೇ ಪ್ರಮೀಳ. ಬರ್ತಾ ಬರ್ತಾ ನಿನ್ನ ಗಂಡ ನರಪೇತಲ ನಾರಾಯಣ ಆಗ್ತಾ ಇದಾರೆ. ನೀನು ಮಾತ್ರಾ ಆ ಸುಮೋದವರ ಜೊತೆ ಸ್ಪರ್ಧೆಗೆ ನಿಂತವಳ ಹಾಗೆ ಊದ್ತಾ ಇದೀಯ!" ಎಂದುಬಿಡೋದೆ?

ಮನೆಯ ಯಜಮಾನ್ತಿ ಇವಳನ್ನು ನೋಡಿ ಎರಡೆರಡು ಸ್ವೀಟು ಹಾಕಿಸಿದರು. ಇವಳು ವೇಸ್ಟ್ ಯಾಕೆ ಮಾಡುವುದು ಎಂದು ತನ್ನ ಗುಡಾಣದಂತಹ ಹೊಟ್ಟೆಗೆ ತುರುಕಿಕೊಂಡಳು. ಇವಳ ಸೋದರತ್ತೆ ಇನ್ನೇನು ಫಿಟಿಂಗ್ ಇಡುತ್ತಾರೋ ಹೊರಡುವುದರಲ್ಲಿ ಎನ್ನುವ ಆತಂಕ ಅವನಿಗೆ.

"ರೀ.. ನಮ್ಮ ಉಮಚ್ಚಿ ಇದಾಳಲ್ಲ".

"ಯಾವೋಳೇ ಅವಳು?"

"ಅದೇ ನಮ್ಮ ಚಿಕ್ಕಮ್ಮನ ಅಣ್ಣನ ಸೊಸೆಯ ತಂಗಿ ನಾದಿನಿ".

"ಅದಕ್ಕೇನೀಗ, ನಾನೇನು ಅವಳ ಜೊತೆ ಡ್ಯಾನ್ಸ್ ಮಾಡಬೇಕಾ"

"ಥೂ ಹೋಗ್ರೀ. ನನಗಿಂತಾ ದಪ್ಪ ಇದ್ಲು. ಪ್ರತಿದಿನ ವಾಕರ್‌ನಲ್ಲಿ ಜಾಗಿಂಗ್ ಮಾಡಿ ಇಪ್ಪತ್ತು ಕೇಜಿ ಇಳಿಸಿಕೊಂಡಿದಾಳಂತೆ. ನಂಗೂ ವಾಕರ್ ಬೇಕೂರಿ".

ಮತ್ತೆ ಬಂತು ಪಾಂಡುರಂಗನ ಜೇಬಿಗೆ ಕತ್ತರಿ. ಮೂಲೆಯ ಜಾಗವನ್ನು ಆಕ್ರಮಿಸಿದ್ದ ಅದಕ್ಕೆ ಒದ್ದು ಪಾಂಡುರಂಗ ತನ್ನ ಕೋಪವನ್ನೆಲ್ಲಾ ತೀರಿಸಿಕೊಳ್ಳುತ್ತಿದ್ದ. ಪಮ್ಮು ಅದಕ್ಕೆ ಅರಿಸಿನ ಕುಂಕುಮ ಹಚ್ಚಿ ಅಮೃತ ಘಳಿಗೆಯಲ್ಲಿ ಪ್ರಾರಂಭಿಸೇಬಿಟ್ಟಳು. ಒಂದು ವಾರಕ್ಕೂ ಮುಂಚಿತವಾಗಿಯೇ ವಾಕರ್ ಸ್ಥಬ್ಧವಾದಾಗ ಪಾಂಡುರಂಗ ಗೊಣಗಾಡಿದ. ಧೂಳು ಕುಡಿಯುತ್ತಾ ಕುಳಿತಿದ್ದ ಅದನ್ನು ಒಂದು ದಿನ ಆರಕ್ಕೆ ಮೂರಕ್ಕೆ ಮಾರಿಬಿಟ್ಟ. 'ಸದ್ಯ ಪೀಡೆ ತೊಲಗಿತು' ಅಂತಾ ಪಮ್ಮು ನಿಟ್ಟುಸಿರು ಬಿಟ್ಟಳು. ಅವಳ ಬೀರುವಿನಿಂದ ಅದೇನೋ ಪುಡಿ, ಮಾತ್ರೆಗಳನ್ನು ನುಂಗುವುದನ್ನು ನೋಡಿ ಕೆಂಡಾಮಂಡಲವಾದ ಪಾಂಡುರಂಗ. ಈ ದಿನ

ಬಿಡಲೇಬಾರದು, ಪ್ರಮೀಳಾಳನ್ನು ಸರಿಯಾಗಿ ತರಾಟೆಗೆ ತೆಗೆದುಕೊಳ್ಳಬೇಕು ಎಂದು ಕನ್ನಡಿ ಮುಂದೆ ನಿಂತು ಒಳ್ಳೆಯ ತಯಾರಿ ತೆಗೆದುಕೊಂಡ.

"ಏನೇ ಅದು ಬೀರೂನಲ್ಲಿ..."

"ಏನು, ವಾಯ್ಸ್ ರೈಜ್ ಆಗೋಗಿದೆ. ಏನ್ರೀ?"

"ಲೇ ಅಲ್ವೆ, ಅದೇ ಬೀರುನಲ್ಲಿ ಇಟ್ಟಿರೋದು ಏನು ಅಂದೆ"

"ನಂದೇ. ಇನ್ಮೇಲೆ ವ್ಯಾಯಾಮಾ, ವಾಕಿಂಗ್ ಏನು ಮಾಡಬೇಕಿಲ್ಲ. ಇದನ್ನ ತೊಗೊಂಡ್ರೆ ಸಾಕು ಸಣ್ಣಾ ಆಗ್ತೀನಿ".

"ಸರಿ ಅದಕ್ಕೆಲ್ಲಾ ದುಡ್ಡು?"

"ನೀವು ನಂಗೆ ಹೇಳ್ದೆ ಕೇಳ್ದೆ ವಾಕರ್ ಮಾರಲಿಲ್ವ? ಅದರ ದುಡ್ಡಲ್ಲೇ ತೊಗೊಂಡೆ". ಪಾಂಡುರಂಗ ಕುಸಿದುಹೋದ. ಆ ಹಾಳಾದ ಕುಂಭಯ್ಯನಿಗೆ ಮಾರಿದರೆ. ಅವನ ಹೆಂಡತಿ ಮಹಿಳಾ ಸಮಾಜದಲ್ಲಿ ಪ್ರಮೀಳಾ ಕೈಯಲ್ಲಿ ದುಡ್ಡು ಕೊಟ್ಟಿದಾಳೆ. ಸಾಲದೂಂತ 'ಅಲ್ಲಾ ಸಾರ್, ನೀವು ನೋಡಿದರೆ ಮಡಿಕೋಲು ಇದ್ದಹಾಗೆ ಇದೀರಿ. ನಿಮ್ಮ ವೈಫ್ ನೋಡಿದರೆ ರಮಡೋಲು' ಎನ್ನುವ ಬಿಟ್ಟಿ ಕಾಮೆಂಟ್ಸ್ ಬೇರೆ. ಅದೂ ಮುಗಿದು ಡಬ್ಬಗಳು ಖಾಲಿಯಾದವು. ಆದರೆ ಪಮ್ಮು ಮಾತ್ರ ಅದೇ ವೇಸ್ಟ್ ಲೈನ್ ಉಳಿಸಿಕೊಂಡಿದ್ದಳು.

"ನಮ್ಮ ಮಹಿಳಾ ಸಮಾಜದವರೆಲ್ಲಾ ನೇಚರ್ ಕ್ಯೂರ್‌ಗೆ ಸೇರ್ತಾ ಇದೀವಿ. ನಾನು ವಾಪಸ್ಸು ಬಂದಾಗ ನಿಮಗೆ ಗುರ್ತೇ ಸಿಗಲ್ಲ".

"ನಾನಂತೂ ಒಂದು ಪೈಸೇನೂ ಕೊಡಲ್ಲ", ಪಾಂಡುರಂಗ ತನ್ನ ಅಸಹಾಯಕತೆಯನ್ನು ತೋಡಿಕೊಂಡುಬಿಟ್ಟ.

"ಬೇಡ. ನಿಮ್ಮ ಕ್ರೆಡಿಟ್ ಕಾರ್ಡ್ ನಂಬರ್ ಕೊಟ್ಟಿದೀನಿ".

ಪಾಂಡುರಂಗನ ಮುಖ ಕಪ್ಪಿಟ್ಟುಕೊಂಡಿತು. ಅವನಿಗೆ ಒಂದೇ ಖುಷಿ ಎಂದರೆ ಬೇಕಾದಕಡೆ ಬೇಕಾದ ತಿಂಡಿಯನ್ನು ತಿಂದುಕೊಂಡು ಆರಾಮವಾಗಿ ಓಡಾಡಿಕೊಂಡಿರಬಹುದು. ಒಂದು ಹದಿನೈದು ಸಾವಿರ ಖರ್ಚಾದರೂ ಪಮ್ಮು ಸ್ವಲ್ಪ ಸಣ್ಣಗೆ ಸೊರಗಿದಂತೆ ಕಾಣುತ್ತಿದ್ದಳು.

"ಪಮ್ಮು, ನೀನು ಮೊದಲು ಮಾಡಬೇಕಾದ ಕೆಲಸ ಅಂದ್ರೆ ನಿಮ್ಮ ಸೋದರತ್ತೆ ಮನೆಗೆ ವಿಜಿಟ್ ಕೊಟ್ಟು ಬಾ. ಹೊಟ್ಟೆ ಉರಿಸಿಕೊಳ್ಳಲಿ. ಏನೆಂದುಕೊಂಡು ಬಿಟ್ಟಿದಾರೆ ಅವರು ಪ್ರಮೀಳಾ ಅಂದ್ರೆ" ಎಂದದ್ದೇ ತಡ, "ಸರಿ, ನೀವೂ ಈವತ್ತು ಸಂಜೆ ಆಫೀಸಿಂದ ಬೇಗ ಬನ್ನಿ, ಹೋಗೋಣ. ಹಾಗೆ ಬರ್ತಾ ಒಂದು ಒಳ್ಳೆ ರೆಸ್ಟೋರೆಂಟ್ಗೆ ಹೋಗಿ ಬರೋಣ. ನನ್ನ ಬಾಯೆಲ್ಲ ಕೆಟ್ಟು ಹೋಗಿದೆ, ಬರೀ ಸೊಪ್ಪು ತರಕಾರಿ ತಿಂದು..." ಎಂದು ಸಂಜೆಯ ಪ್ರೋಗ್ರಾಂ ಫಿಕ್ಸ್ ಮಾಡಿಯೇಬಿಟ್ಟಳು.

"ಸ್ವಲ್ಪ ಯೋಚ್ನೆ ಮಾಡೇ. ಇನ್ನೆಷ್ಟು ಹಣ ಖರ್ಚು ಮಾಡೋದು?"

"ಅದ್ಯಾಕ್ರೀ ಹಣಾ ಹಣಾಂತ ಬಾಯ್ ಬಾಯ್ ಬಿಡ್ತೀರ. ನಾನು ನೇಣು ಬಿಗಿದುಕೊಂಡು ಸಾಯ್ತೀನಿ, ನೀವು ತೆಳ್ಳಗೆ ಬೆಳ್ಳಗೆ ಇರೋ ಹುಡುಗಿ ನೋಡಿ ಮದುವೆ ಮಾಡ್ಕೋಳಿ..."

"ಪಮ್ಮು, ಮನೇಲಿರೋ ಹಗ್ಗ ಲೋ ಕ್ವಾಲಿಟೀದು. ಸುಮ್ನೆ ನೀನು ಸ್ಟೂಲಿಂದ ಧಢಂ ಅಂತಾ ಬಿದ್ದು ಸೊಂಟ ಉಳುಕಿಸಿಕೊಳ್ತೀಯ ಅಷ್ಟೇ. ನಾಳೆಯಿಂದ ನಾನೇ ನಿನ್ನ ಡಯಟ್ ಚಾರ್ಟ್ ರೆಡಿ ಮಾಡ್ತೀನಿ. ಅದು ಹೇಗೆ ಸಣ್ಣಗಾಗಲ್ವೋ ನೋಡೇಬಿಡ್ತೀನಿ".

ಎರಡು ದಿನ ಪಮ್ಮು ಪಾಂಡುರಂಗನ ಮಾತಿಗೆ ಎದುರಾಡಲಿಲ್ಲ. ಎರಡು ಸೂಖ ಚಪಾತಿ, ಒಂದಿಷ್ಟು ತರಕಾರಿ, ಹಣ್ಣು. ಎರಡೇ ದಿನಗಳ ನಂತರ ಪಾಂಡುರಂಗನಿಗೆ ಮನೆಯಲ್ಲಿ ಆಶ್ಚರ್ಯ ಕಾದಿತ್ತು. ತನ್ನ ಮನೆಗೆ ತಾನೇ ಪರಕೀಯ ಎನ್ನುವಂತೆ. ಅತ್ತೆ ಮಾವ ಎಲ್ಲಾ ಅವಳ ಕಡೆಯವರು. ಇದ್ದಬದ್ದವರೆಲ್ಲಾ ಅವನನ್ನು ನೋಡಿ ಮುಸಿಮುಸಿ ನಗುತ್ತಾರೆ.

"ಅಳಿಯಂದ್ರು ಬಂದ್ರು", ಅತ್ತೆ ಸೆರಗನ್ನು ಬಾಯಿಗೆ ಅಡ್ಡ ಇಟ್ಟುಕೊಂಡು ಕಳ್ಳನಗು ನಕ್ಕರೆ ಮಾವನವರು ಅವನ ಬೆನ್ನು ಚಪ್ಪರಿಸಿ ನಗುತ್ತಾರೆ. ಪಮ್ಮುವಿನ ಪತ್ತೆಯೇ ಇರಲಿಲ್ಲ. ತನ್ನ ರೂಮಿಗೆ ಬಂದರೆ ಅವನು ನೋಡುವುದೇನು. ಮಂಚದ ಮೇಲೆ ಪಟ್ಟಾಂಗ ಹಾಕಿಕೊಂಡು ತಟ್ಟೆ ತುಂಬಾ ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ ರವೆ ಉಂಡೆ ಮುಕ್ಕುತ್ತ ಕುಳಿತಿದ್ದಾಳೆ.

ಪಾಂಡುರಂಗನಿಗೆ ಕೋಪ ಉಕ್ಕೇರಿತು. ಕೋಪದಿಂದ ಅವನಿಗೆ ಮಾತೇ ಹೊರಡಲಿಲ್ಲ.

"ನೀನು... ನೀನು..., ಗುಜ್ಜಾನೆ ಮರಿ. ಡ್ರಮ್ಮು, ಕೊಳದಪ್ಪಲೆ, ರೋಡ್ ರೋಲರು.." ಅವನ ಎಲ್ಲ ಬೈಗುಳಗಳಿಗೂ ಅವಳೂ ಮುಸಿಮುಸಿ ನಗುತ್ತಾಳೆ. ಪಾಂಡುರಂಗನಿಗೆ ಮತ್ತಷ್ಟು ಆಶ್ಚರ್ಯವಾಯಿತು.

"ರೀ..."

"ಅದೇನು ಬೊಗಳೆ..."

"ರೀ.. ನಾನೇನು ನಾಯೀನಾ.. ವಿಷ್ಯ ಕೇಳಿದ್ರೆ ನಿಮಗೂ ನಗು ಬರುತ್ತೆ"

"ಏನೇ ಅದು?"

"ನಂಗೀಗ ಮೂರು ತಿಂಗಳು. ನೀವು ಅಪ್ಪಾ ಆಗ್ತಾ ಇದೀರ. ಅದ್ಯಾಕೆ ಹೀಗೆ ಬೆಪ್ಪನಾಗಿ ನೋಡ್ತಾ ಇದೀರಿ"

ಪಾಂಡುರಂಗ ಸುಸ್ತಾಗಿ ಕುಳಿತುಬಿಟ್ಟ. ಎಲ್ಲಿತ್ತೋ ನಗು ನುಗ್ಗಿಕೊಂಡು ಬಂತು. ಅವನೂ ಮುಸಿಮುಸಿ ನಗಲು ಶುರುಮಾಡಿದ.

***

ಭಾಗ-೩

ನನ್ನಪ್ಪನ ಸೆಂಟಿನರಿ

- ವೆಂಕಟೇಶ ಕಾಮತ, ಉಡುಪಿ

ನಾನು ಈಗಾಗಲೇ ನನ್ನ ಅಪ್ಪನ ಸೆಂಟಿನರಿ ಬಗ್ಗೆ ಈ ಹಿಂದಿನ ಎರಡು ದಾಸೋಹಗಳಲ್ಲಿ ಹಲವು ವಿಷಯಗಳನ್ನು ಹಂಚಿಕೊಂಡಿರುವೆ. ನನ್ನಪ್ಪ ೧೯೨೪ರ ಅಕ್ಟೋಬರ್ ನಲ್ಲಿ ಹುಟ್ಟಿದವರು. ಅವರಿಗೀಗ ಜನ್ಮ ಶತಮಾನೋತ್ಸವ ವರ್ಷ. ಈ ವರುಷ ಅಪ್ಪನನ್ನು ನೆನೆಸಿಕೊಳ್ಳದ ದಿನವೊಂದಿಲ್ಲಾ. ಗಂಡುಮಕ್ಕಳು ತಮಗೆ ಬೇಕೋಬೇಡವೋ ಅವರ ಮನಸ್ಸಿನ ಪಟಲದ ಮೇಲೆ ಅಪ್ಪನ ಚಿತ್ರ ಅಪ್ಪನ ಬಾಳೊಂದಿಗೆ ತಮ್ಮದನ್ನು ಹೋಲಿಸುವುದು ಒಂದು ಸರಪಳಿ ನಿರಂತರ. ಈಗಂತೂ ಆಗಾಗ್ಗೆ ಕಾಡುವ ಚಿಂತೆ. ನಾನೀಗ ಅಪ್ಪನಿಗಿಂತ ಹೆಚ್ಚು ಬದುಕಿರುವೆ. ಅಪ್ಪ ಬದುಕಿದ್ದು ೬೬ ವರುಷಕ್ಕೆ ೪೪ ದಿನ ಕಡಿಮೆ ನನಗೆ ಈಗ ೬೮ ತುಂಬಿ ೬೯ ನಡೆಯುತ್ತಿದೆ. ಈ ಒಂದು ಯೋಚನೆ ಒಂದು ಪರಮಸತ್ಯ ನಾ ಈಗಲೂ ಹೋದರು ಹೋದೆ. ಬದುಕಿನ ಒಂದೊಂದು ದಿನವೂ ಬೋನಸ್ ಇರಬಹುದು ಅನಿಸುತ್ತದೆ.

ಅಪ್ಪ ನಾಳಿನ ಬಗ್ಗೆ ಎಂದು ಯೋಚಿಸಲಿಲ್ಲ ಅವರು ಸದಾ ಸುಖೀ... ನಿವೃತ್ತಿ ಹೊಂದಿದ ನಂತರ ಪಿಪಿಎಫ್ ಹಾಗೂ ಸರ್ಕಾರದ ಸಣ್ಣ ಉಳಿತಾಯ, ಪೋಸ್ಟ್ ಆಫೀಸ್ ಯೋಜನೆಗಳ ಏಜೆಂಟ್ ಆಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮನೆಗೆ ಬೇಕಿರುವ ಎಲ್ಲ ಅಡುಗೆ ತರಕಾರಿ, ಜಿನಸಿ ಸಾಮಾನು ತರುವುದಲ್ಲದೆ ಮನೆಯ ಕೆಲಸಗಳಲ್ಲಿ ಕೆಲವನ್ನು ತಮ್ಮದಾಗಿಸಿಕೊಂಡು ಅವುಗಳನ್ನು ಬಹಳ ಪ್ರೀತಿ ಹಾಗೂ ಶಿಸ್ತಿನಿಂದ ಗಡಿಯಾರದ ಮುಳ್ಳುಗಳ ನಡೆಯೊಂದಿಗೆ ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದರು. ಈ ದಿನಚರಿಯಲ್ಲಿ 'ಅಸಡ್ಡೆ ' ಎಂಬುದು ಅವರಿಗೆ ಸೇರದ ವಿಷಯ.

ಬೆಳಿಗ್ಗೆ ಕಾಫಿ ಮಾಡುವುದು, ಹಾಲು ಕಾಯಿಸುವುದನ್ನು ಅಮ್ಮನಿಂದ ಶ್ರದ್ದೆಯಿಂದ ಕಲಿತಿದ್ದರು. ಹಾಲು ಇನ್ನೇನು ಉಕ್ಕಿ ಪಾತ್ರೆಯಿಂದ ಚೆಲ್ಲಿಬಿಡುವುದೋ ಏನೋ ಎಂಬಂತೆ ಹಾಲಿನ ಮೇಲಿನ ತೆಳುಕೆನೆಯ ಟೊಪ್ಪಿಯೊಂದು ಮೇಲೆದ್ದು ನಿಂತ ಮೇಲೆಯೇ, 'ನಿನಗೆ ಬುದ್ದಿ ಕಲಿಸುವೆ ಕೆಳಿಗಿನ ಬೆಂಕಿಯ ಬೆಂಬಲವಿದೆ ಎಂದು ಈ ಮಟ್ಟಿಗೆ ಹಾರಾಡಬೇಡ' ಎಂದು ಬ್ಯಾಟ್ಸಮನ್ ಕೊನೇಕ್ಷಣ ಕಟ್ ಹೊಡೆದಂತೆ ಟಪ್ಪನೇ ಗ್ಯಾಸ್ ಆಫ್ ಮಾಡುವುದು ಅವರಿಗೆ ನಿತ್ಯ ಸಂತಸ ಕೊಡುವ ವಿಷಯ. ಒಣಹಾಕಿದ ಬಟ್ಟೆಗಳನ್ನು ಕ್ಲಿಪ್ ನಿಂದ ಬಿಡಿಸಿ ತಂತಿಯಿಂದ ತೆಗೆದು ಒಮ್ಮೆ ಒದರಿ, ನೆರಿಗೆ ಬರದಂತೆ ಮಡಿಸಿ ಆಯಾ ಜಾಗಗಳಲ್ಲಿ ಇಡುವುದು, ತೊಳೆದಿಟ್ಟ ಪಾತ್ರೆಗಳನ್ನು ಬಟ್ಟೆಯಿಂದ ಒರೆಸಿ ಅವುಗಳ ಜಾಗಗಳಲ್ಲಿ ಬೋರಲು ಹಾಕುವುದು ಇತ್ಯಾದಿ ಅವರ ಇಷ್ಟದ ಇತರ ದಿನಗೆಲಸಗಳು.

ಅಂದಿನ ಆ ಪುಟ್ಟ ಹೆಂಚಿನ ಮನೆಯಲ್ಲಿ ಹಂಡೆ ಕಾಯಿಸುವುದು ವ್ಯರ್ಥ ಖರ್ಚೆಂದು ಒಂದು ಸೀಮೆಎಣ್ಣೆಯ ಸ್ಟವ್ ಮೇಲೆ ದೊಡ್ಡ ಅಲ್ಯೂಮಿನಿಯಂ ಪಾತ್ರೆಯಲ್ಲಿ ನೀರು ಕಾಯಿಸಿ ಬಕೇಟಿಗೆ ಸುರಿದು ಸ್ನಾನಕ್ಕೆ ಉಪಯೋಗಿಸುವುದಿತ್ತು. ಕುದಿಯುವ ನೀರು ನಮ್ಮ ಅಜಾಗರೂಕತೆಯಿಂದ ಮೈ ಮೇಲೆ ಸುರಿದುಕೊಂಡರೆ ಎಂದು ಅಪ್ಪ ನಮ್ಮನ್ನು ಎಂದೂ ನೀರುಬಗ್ಗಿಸಿ ಕೊಳ್ಳಲು ಬಿಡುತ್ತಿರಲಿಲ್ಲ. ಇದು ಎಷ್ಟರಮಟ್ಟಿಗೆ ಅಂದರೆ ಎಂದಾದರೂ ಸಮೀಪದ ಊರಿಗೆ ಮಗಳ ಮನೆಗೆ ಅಥವಾ ಇತರ ಸಂಬಂಧಿಗಳ ಮನೆಗೆ ಇವರು ಹೋದಲ್ಲಿ ರಾತ್ರಿ ಅಥವಾ ಬೆಳ್ಳಂಬೆಳಗ್ಗೆ ಇವರು ವಾಪಸ್ ಬಂದು ಈ ನೀರು ಬಗ್ಗಿಸುವ ಕೆಲಸ ತಾವೇ ಮಾಡಬೇಕು ಇಲ್ಲವೇ ನಾವು ಸೆಕೆಯ ಉಡುಪಿಯಲ್ಲಿ ಒಂದು ದಿನ ತಣ್ಣೀರು ಸ್ನಾನ ಮಾಡಿದರೂ ಪರವಾಗಿಲ್ಲ. ಆ ದಿನಗಳಲ್ಲಿ ಮೊಬೈಲ್ ಬಂದಿರಲಿಲ್ಲ. ಬಂದಿದ್ದರೆ ಇವರು ಏನೆಲ್ಲಾ ಫೋನ್ ಮಾಡುತ್ತಿದ್ದರೋ ?

ಚಿಕ್ಕಂದಿನಲ್ಲಿ ಚಂದಮಾಮ ಮತ್ತಿತರ ಪತ್ರಿಕೆಗಳಲ್ಲಿ ನಾವು ಎಲ್ಲೂ ನೋಡದ, ಓದದ ಕಥೆಗಳನ್ನು ನಮ್ಮ ಅಪ್ಪ ನಮಗೆ ಓದಿ ಹೇಳಿದ ನೆನಪು ನನಗೆ ಈಗಲೂ ಇದೆ. ಅಟ್ಟಿಸಿಕೊಂಡು ಬಂದಾಗ ಚಾಪೆಯಲ್ಲಿ ಡಗಿಸಿದ ಬಭ್ರುಬಾಹುವನ್ನು ಶಿರಚ್ಛೇದ ಮಾಡಿಸಿ ಕೃಷ್ಣ ಕೊನೆಯ ಆಸೆ ಎಂದು ತಲೆಯನ್ನು ಮಹಾಭಾರತದ ಯುದ್ಧವನ್ನು ನೋಡಲು ಸ್ಥಂಭವೊಂದರ ಮೇಲೆ ಇಡಲಾಯಿತೆಂದು ಒಂದು ಕಥೆ, ಆ ಕಾಲದಲ್ಲಿ ನರಮಾಂಸವನ್ನು ಎಲ್ಲ ರಾಜ ಹಾಗೂ ರಿಷಿಗಳು ತಿನ್ನುತಿದ್ದರೆಂದು "ವಾತಾಪಿ

ಜೀರ್ಣೋದ್ಭವ" ಎಂಬ ಇನ್ನೊಂದು ಕಥೆಯನ್ನು ಹೇಳಿದ ನೆನಪು. ಅಪ್ಪ ಹೇಳಿದ ಇಂತಹ ಕಥೆಗಳ ಕೆಲವು ಅಂಶಗಳನ್ನು ಮುಂದೆ ಎಲ್ಲಾದರೂ ಕೇಳಿದಾಗ ನನಗೆ ಆಶ್ಚರ್ಯವಾಗುವುದಿತ್ತು.

ಬಹಳಷ್ಟು ಈಗಿನ ದಿನಬಳಕೆಯ ವಸ್ತುಗಳು ಆಗ ಬಳಕೆಗೆ ಬಂದಿರಲಿಲ್ಲ. ಆದರೂ ಕಲರ್ ಟಿವಿ ಬಂದಮೇಲೆ ಇವರು ಟಿವಿ ಅದರಲ್ಲೂ ಪತ್ತೇದಾರಿ ಧಾರಾವಾಹಿಗಳನ್ನು ಬಹಳ ಸಂತೋಷದಿಂದ ನೋಡುತ್ತಿದ್ದರು ಅದರಲ್ಲಿ ಹಿಂದಿ ಧಾರಾವಾಹಿ ಧೀರಜ್ ಕುಮಾರ್ ನ "ಅದಾಲತ್" ಇವರಿಗೆ ಬಹಳವೇ ಪ್ರಿಯವಾಗಿತ್ತು. ಅರ್ಧ ಕಥೆ ನೋಡಿ ಉತ್ತರಾರ್ಧ ಮುಂದಿನವಾರ ಅಂದಾಗ ಕೊಲೆಗಾರ ಯಾರೆಂದು ಊಹಿಸುವುದು ಇವರ ಇಷ್ಟದ ಹವ್ಯಾಸವೇ ಆಗಿತ್ತು ಅನ್ನಬಹುದು. ಇದಲ್ಲದೆ ಮಾಟ ಮಂತ್ರದ ಕಥೆ, ಹಾವು ಹೆಣ್ಣಾಗುವ ಶ್ರೀದೇವಿಯ ನಗೀನಾ, ಸೇಡು ತೀರಿಸುವ ಅಮಿತಾಭ್ ಬಚ್ಚನ್‌ನ ಆಖ್ರಿ ರಾಸ್ತಾ ಇವರು ಮೆಚ್ಚಿ ಮತ್ತೆ ಮತ್ತೆ ನೋಡಬಯಿಸಿದ ಹಾಗೂ ನೋಡಿದ ಚಲನಚಿತ್ರಗಳು.

ಮಕ್ಕಳೆಂದರೆ ಅತಿ ಪ್ರೀತಿಯಿಂದ ನೋಡಿದ ಇವರು ಮೊಮ್ಮಕ್ಕಳನ್ನು ತಲೆಯ ಮೇಲೆಯೇ ಕೂರಿಸಿಕೊಂಡರು ಅನ್ನಬಹುದು. ಆದರೆ ನನ್ನ ದುರ್ಭಾಗ್ಯವೆಂದರೆ ನನ್ನ ಮಗಳನ್ನು ನೋಡುವ ಮೊದಲೇ ಅವರು ಹೊರಟು ಹೋದರು. ನಾನು ನನ್ನ ಮಗಳಿಗೆ ಆಗಾಗ್ಗೆ ಹೇಳುವ ಒಂದು ಪ್ರೀತಿಯ ಕಥೆಯಾದರು.

***

ಬೆಳ್ಳಿ ಹಬ್ಬ

– ಮಾಲತಿ ಶ್ರೀನಿವಾಸನ್

ರಮಣನ ಹೆಸರಿನ ಈ ತಾಣದಲಿ
ಇಂದು ಬೆಳ್ಳಿ ಹಬ್ಬದ ಕಾರ್ಯಕ್ರಮ
ಜೊತೆಗೂಡಿಹುದು ಕರುನಾಡಿನ
ಕನ್ನಡರಾಜ್ಯೋತ್ಸವ ಆಚರಣೆಯ ಸಂಭ್ರಮ.

ದಶಕಗಳ ಹಿಂದೆ ಈ ತಾಣದಲಿ ಬರಿ
ಹಚ್ಚ ಹಸುರಿನ ಕಾಡು, ಹಾದಿ ಬೀದಿ
ಕಾಣದ ಶುಭ್ರ ಜಲದ ಕೊಳದ ಬದಿ
ಬೀಡು. ಇಂದು ಬೇಂದ್ರೆ ಅಜ್ಜನ
ಕವನದೊಲು ಸುತ್ತೆಲ್ಲ ಹಚ್ಚಹಸಿರಿನ
ತೋಟ, ರಸ್ತೆಯ ಇಕ್ಕೆಲಗಳ ಮನೆ
ಮನೆಗಳಲ್ಲಿ ಬಣ್ಣ ಬಣ್ಣದ ಹೂವಿನ
ಮರಗಿಡಗಳ ಸುಂದರ ನೋಟ.

ಸಂಜೆ ಮುಂಜಾನೆಯಲಿ ಚಿಲಿಪಿಲಿ ಹಕ್ಕಿಗಳ
ಕಲರವದ ಗಾನ, ವಾಯುವಿಹಾರಿಗಳ
ನಿರಂತರ ಶಿಸ್ತಿನ ಸಿಪಾಯಿಗಳಂತೆ ಮಿಲನ
ಸುತ್ತೆಲ್ಲ ಪುಟ್ಟ ಮಕ್ಕಳ ಕಲರವದ ಸುಗಾನ

ಬೆಳ್ಳಿ ಹಬ್ಬದ ಸಂಭ್ರಮಕೆ ಕುಣಿಸಿದಳು
ವಸುಂಧರೆ ಹಿರಿಕಿರಿಯರೆಲ್ಲರನು
ಒಮ್ಮತದಲಿ, ಉತ್ಸಾಹ ಹುರುಪಲ್ಲಿ.
ವಯಸ್ಸು ಮರೆತವು ನಾವು ಈ
ಮುಸ್ಸಂಜೆಯ ಮಬ್ಬಿನಲಿ ಬೆಳಕ ಕಂಡೆವು
ನಾವು ಎಪ್ಪತ್ತರಾಚೆಯಲಿ ಇಪ್ಪತ್ತರ
ಅನುಭಾವ ಪಡೆದೆವು ನಾವು

ಈ ರಮಣನ ನಗರದಲಿ ಇಂದು
ಹೊಸ ಉತ್ಸಾಹ ಹೊಸ ಚೇತನ
ಹೊಸ ಗಾಳಿ ಹೊಸ ವಿಚಾರಧಾರೆ ಆಗಮನ.
ಜೀವನದ ಸಂಘರ್ಷಗಳ
ದಿನಚರಿಯ ಬವಣೆಗಳೆಲ್ಲ ಮರೆತು
ಹೊಸ ಹುರುಪಲ್ಲಿ ಕಟ್ಟೋಣ ಬನ್ನಿ
ಸಂಬಂಧಗಳ ಸೆಲೆ ಮನದಲಿ ಎಬ್ಬಿಸಿ
ಪ್ರೀತಿ ವಿಶ್ವಾಸ ನಂಬಿಕೆ ಸೌಹಾರ್ದತೆಯ ಅಲೆ.

ಕನಸ ಕಾಣೋಣ ಮುಂದಿನ ಪೀಳಿಗೆಗೆ,
ಸುವರ್ಣ ಮಹೋತ್ಸವದ ಸಂಭ್ರಮಕೆ
ಇನ್ನಷ್ಟು ಶುಭ್ರ ಸ್ವಚ್ಛ ಸುಂದರ ಪರಿಸರದ ತಾಣಕೆ .

***

ಸಣ್ಣ ಕಥೆ

ಸ್ವಾತಂತ್ರ್ಯ

– ರಾಧಿಕಾ. ವಿ. ಗುಜ್ಜರ್

ಹೈಸ್ಕೂಲಿನ ಓದು ಮುಗಿಯುತ್ತಲೇ ತಾತನೊಂದಿಗೆ ದುಡಿಯಲು ನಿಂತು, ಕಸುಬು ಕಲಿತಿದ್ದನಂತೆ ಅಪ್ಪಯ್ಯ. ಇಬ್ಬರೂ ಸೇರಿ ನಡೆಸುತ್ತಿದ್ದ ಕಮ್ಮಾರಿಕೆಯ ಕಸುಬು, ತಾತ ಕಾಲವಾದ ನಂತರ ಅಪ್ಪನೊಬ್ಬನದ್ದೇ ಆಗಿತ್ತು. ನನಗಾಗ ಎಂಟು, ಹತ್ತು ವಯಸ್ಸಿತ್ತೇನೋ. ರಾತ್ರಿ ಪ್ರಯಾಣ ಆರಂಭಿಸಿದ ನೆನಪು ಅಷ್ಟೇ. ಬೆಳಿಗ್ಗೆ ಕಣ್ತೆರೆದಾಗ ಆಗಲೇ ನಮ್ಮ ಹಳ್ಳಿಯ ಮನೆಗೆ ಬಂದು ತಲುಪಿಬಿಟ್ಟಿದ್ದೆವು. ತಾತನೇ ಕಟ್ಟಿದ್ದ ಪೇಟೆಯ ಅಂಗಡಿಯನ್ನು ಅಪ್ಪ ತನ್ನ ಜೊತೆಯಲ್ಲೇ ಕೆಲಸ ಮಾಡುತ್ತಿದ್ದ ಸ್ನೇಹಿತನಿಗೆ ವಹಿಸಿ ಹಳ್ಳಿಗೆ ಹೊರಟುಬಿಟ್ಟಿದ್ದ. ಅಂಗಡಿಯ ಮೇಲಿದ್ದ ನಮ್ಮ ಮನೆಗೆ ಬೀಗ ಹಾಕಿ, ಆರು ದೊಡ್ಡ ಕಬ್ಬಿಣದ ಪೆಟ್ಟಿಗೆಗಳಲ್ಲಿ ಎಲ್ಲಾ ಆವಶ್ಯಕ ಸಾಮಾನುಗಳನ್ನು ತುಂಬಿಸಿ ಹಳ್ಳಿಗೆ ಸಾಗಿಸಿದ್ದ. ಅಂಗಡಿಯ ಅಪ್ಪನ ಸ್ನೇಹಿತ ಹೇಳುತ್ತಿದ್ದ ಅದೊಂದು ಮಾತು ಈಗಲೂ ಜ್ಞಾಪಕದಲ್ಲಿದೆ. "ಹೆಂಡತಿ ಇವನನ್ನು ಬಿಟ್ಟು ಓಡಿಹೋಗಿ ಬಿಟ್ಟಳು. ಅದೆಷ್ಟು ಮಾನವಂತ ಕುಟುಂಬ ಇವರದ್ದು. ಆಕೆ ಓಡಿಹೋಗಿ ಇನ್ನೂ ಒಂದೇ ದಿನ. ಜನರಿಗೆ ಮುಖ ತೋರಿಸಲಾಗದಷ್ಟು ವಿಚಲಿತನಾಗಿದ್ದಾನೆ. ಅದು ಹೇಗೆ ತಡೆದು ಕೊಳ್ಳುತ್ತಾನೋ ನನ್ನ ಸ್ನೇಹಿತ. ಒಂದಲ್ಲಾ, ಐದಲ್ಲಾ, ಹನ್ನೆರಡು ವರ್ಷಗಳ ಸಂಸಾರಕ್ಕೆ ಕೊಳ್ಳಿಯಿಟ್ಟು ಹೋದಳು ಆ ಹೆಂಗಸು" ಎಂದು.

ಅಂದಿನಿಂದ ನಾನು ಮತ್ತು ಅಪ್ಪ ಇಬ್ಬರದೇ ಪ್ರಪಂಚವಾಗಿಬಿಟ್ಟಿತ್ತು. ನಾವು ಹಳ್ಳಿಗೆ ಹೋದ ಕೆಲಸಮಯದಲ್ಲೇ, ಚಿಕ್ಕಮ್ಮಂದಿರು ಪೊಲೀಸರೊಂದಿಗೆ ಬಂದು ದೊಡ್ಡ ಗಲಾಟೆ ಮಾಡಿದ್ದರು. ನಂತರದಲ್ಲಿ ಎಲ್ಲವೂ ತಣ್ಣಗಾಗಿತ್ತು. ಅಷ್ಟೇ, ಮತ್ತೆಂದೂ, ಮತ್ತಾರೂ ಇತ್ತ ಬರಲಿಲ್ಲ. ಅತ್ಯಂತ ಸಮಾಧಾನಿ, ಶಾಂತ ಹಾಗೂ ಸಂಭಾವಿತ ಅಪ್ಪ ನನಗೆ ಎಲ್ಲವನ್ನೂ ಕಲಿಸಿದ. ಅವಕಾಶಗಳ ತೆರೆದು ಉನ್ನತ ವಿದ್ಯಾಭ್ಯಾಸ ಪಡೆಯಲು ಪಟ್ಟಣಕ್ಕೆ ಕಳಿಸಿದ. ಪಟ್ಟಣದ ಮನೆಯಲ್ಲಿದ್ದು ಹಳ್ಳಿಗೆ ಬಂದೂ... ಹೋಗೀ... ಮಾಡುತ್ತಾ ಇರುತ್ತಿದ್ದೆ. ಈಗಂತೂ ಅಲ್ಲೇ ಉತ್ತಮ ಉದ್ಯೋಗವೂ ದೊರಕಿತ್ತು. ಅಪ್ಪನಿಗೆ ನನ್ನ ಪ್ರಗತಿ ಬಹಳ ಸಂತೋಷ ತಂದಿತ್ತು.

"ನನ್ನ ಪತ್ನಿ, ನಿನ್ನಮ್ಮ ಸ್ವಾತಂತ್ರ್ಯ ಬೇಕೆಂದು ತಾನೂ ಬಾಳದೆ, ನಾನೂ ತಲೆಯೆತ್ತಿ ನೆಮ್ಮದಿಯಿಂದ ಬಾಳಲಾಗದಂತೆ ಮಾಡಿಬಿಟ್ಟಳು. ನೀನಾದರೂ ಸಂತೋಷವಾಗಿರು, ಆದರೆ ಸಂಗಾತಿಯನ್ನು ಬಹಳ ಎಚ್ಚರಿಕೆಯಿಂದ ಆಯ್ಕೆ ಮಾಡಿಕೋ ಮಗಳೇ" ಎನ್ನುತ್ತಿದ್ದ. ನಾನವನ ಎದುರಿಗಿರುವಷ್ಟು ಸಮಯದ ಹೊರತು, ಈಗೀಗ ಬಹಳ ವಿಮುಖನೂ, ಏಕಾಂಗಿಯೂ, ಮೌನಿಯೂ ಆಗಿಬಿಟ್ಟಿದ್ದ. ಹೆಣೆದ ಸಂಸಾರ ಛಿದ್ರವಾದ ನಂತರ ಬದುಕಿನೆಡೆಗೆ ಆತ ಮತ್ತೆ ಆಸಕ್ತಿ ತೋರಲೇ ಇಲ್ಲ. ಹಳ್ಳಿಯಲ್ಲಿಯೂ ತೋಟದ ಕೆಲಸಗಳನ್ನು ಮಾಡಿದರೆ ಮಾಡಿದ, ಇಲ್ಲದಿದ್ದರೆ ಇಲ್ಲ. ಆಳುಗಳು ಎಂದಿನಂತೆ ಬಂದು ಹೋದರೂ, ಈತ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. ನಿರಾಸಕ್ತನಾಗಿ, ವಿರಕ್ತನಾಗಿ ಕುಳಿತುಬಿಡುತ್ತಿದ್ದ. ವೈದ್ಯರಲ್ಲಿ ತೋರಿಸಿ, ನನ್ನ ಕಡೆಯಿಂದಾಗುವ ಎಲ್ಲ ಪ್ರಯತ್ನಗಳನ್ನೂ ಮಾಡಿ, ಪರಿಹಾರವಿಲ್ಲದ ಖಿನ್ನತೆಯಿದು ಎಂದುಕೊಂಡು ನಾನು ಸಹಾ ಕೈ ಚೆಲ್ಲಿದೆ. ನನ್ನನ್ನು ಅಷ್ಟು ಪ್ರೀತಿಸುತ್ತಿದ್ದವ, ನನ್ನಾತಂಕಗಳಿಗೆ ಉತ್ತರಿಸದಷ್ಟು ಕಲ್ಲಾಗಿ ಬಿಟ್ಟಿದ್ದ. ಬದುಕಿನ ಜೊತೆ ನಡೆಯದೆ ಸೋತವನು ನನ್ನನ್ನು ಗೆಲ್ಲಿಸಿದರೂ, ಅನಾಥಳಾಗಿಸಿ ಕಾಲವಾಗಿಬಿಟ್ಟ.

ಅಪ್ಪ ತೀರಿಕೊಂಡ ನಂತರ ಹಳ್ಳಿಯ ಸಮಸ್ತ ಆಸ್ತಿಯನ್ನು ಮಾರಿ ನಾನು ಪಟ್ಟಣದ ಮನೆ ಸೇರಿದೆ. ಹಳ್ಳಿಗೆ ಬರುವಾಗಿದ್ದ, ಸಾಮಾನು ಸಾಗಿಸುವ ಆರು ಕಬ್ಬಿಣದ ಪೆಟ್ಟಿಗೆಗಳಲ್ಲಿ ಐದು ಪೆಟ್ಟಿಗೆಗಳು ಮನೆಯ ಶೆಡ್ಡಿನಲ್ಲೇ ಸಿಕ್ಕಿದ್ದವು. ಅವುಗಳಲ್ಲಿಯೇ ಇಲ್ಲಿಯ ಬೇಕಾದೆಲ್ಲ ಸಾಮಾನುಗಳನ್ನು ಮರಳಿ ಪಟ್ಟಣಕ್ಕೆ ಸಾಗಿಸಿದ್ದೆ.

ಅದೊಂದು ಮಧ್ಯಾಹ್ನ ಹಳ್ಳಿಯಿಂದ ಕರೆ ಬಂದಿತ್ತು. ನಮ್ಮ ಆಸ್ತಿಯನ್ನು ಖರೀದಿಸಿದವರು ಹಳೆಯ ಮನೆಯನ್ನು ಕೆಡವಿದ್ದರು ಮತ್ತು ಈಗ ಮತ್ತೆ ಹೊಸಮನೆಯನ್ನು ಕಟ್ಟಲು ನೆಲ ಅಗೆಯುವಾಗ ಶೆಡ್ಡಿನ ನೆಲದ ಅಡಿಯಲ್ಲಿ; ನನಗೆ ಸಿಗದ ಆ ಆರನೆಯ ಕಬ್ಬಿಣದ ಪೆಟ್ಟಿಗೆ ದೊರಕಿತ್ತು. ಪೆಟ್ಟಿಗೆಯಲ್ಲಿ ಸುಮಾರು ಮೂವತ್ತು, ಮೂವತ್ತೆರಡು ವರ್ಷಗಳ ವಯಸ್ಸಿನ ಹೆಣ್ಣುಮಗಳ ಶವದ ಅವಶೇಷವಿತ್ತು. ಪೊಲೀಸರು ಪ್ರಥಮ ಹಂತದ ತನಿಖೆಯನ್ನು ಕೈಗೊಂಡು ಶವವನ್ನು ಗುರುತಿಸಲು ಸಾಧ್ಯವೇ ಎಂದು ಕೇಳಲು ನನ್ನನ್ನು ಕರೆಸಿದ್ದರು. ಪೆಟ್ಟಿಗೆಯಲ್ಲಿನ ದೇಹದ ಮೇಲಿದ್ದ ಬಟ್ಟೆಗಳು, ಕೊರಳಲ್ಲಿದ್ದ ಸರ, ಬೆಳ್ಳಿಯ ಹೆಸರು ಕೆತ್ತಿದ್ದ ಬಳೆ ಎಲ್ಲವನ್ನೂ ಗುರುತಿಸಿದ್ದೆ. ಅದು ನನ್ನಮ್ಮನದ್ದೇ ಆಗಿತ್ತು. ತನ್ನೊಡನೆ ತನ್ನ ದೇಹವನ್ನೂ ಒಯ್ಯದೆ ಎಲ್ಲವನ್ನೂ ಕಳಚಿಕೊಂಡು ಹಗುರವಾಗಿಬಿಟ್ಟಳೇ? ಹೀಗೆ ಸ್ವಾತಂತ್ರ್ಯ ಪಡೆದಿದ್ದಳೇ ನನ್ನಮ್ಮ? ಇನ್ನು ಅಪ್ಪನ ಖಿನ್ನತೆ ! ಅದು ಖಿನ್ನತೆಯೋ ಅಥವಾ...?

ಈಗ ಇವೆಲ್ಲವುಗಳಿಂದ ನನಗೆಂದು ಸ್ವಾತಂತ್ರ್ಯವೋ?

***

ಸ್ವಲ್ಪ ನಿಧಾನಿಸು ಕಾಲ

– ಮಾಲತಿ ಶ್ರೀನಿವಾಸನ್

ಕಾಲ ನಿನ್ನ ಗತಿ ತೀವ್ರವೋ ಮುಸ್ಸಂಜೆಯಲಿ
ನನ್ನ ತನುಮನದ ಚಲನೆ ಮಂದ್ರವೋ ಜಡವೋ?.
ನಿನ್ನ ತಿರುಗಣೆಯ ಚಕ್ರ ಇಂದೇಕೆ
ಇಷ್ಟು ರಭಸವೆನಿಸುತ್ತಿದೆ ಎನ್ನ ಮನಕೆ.

ಸೂರ್ಯ ಚಂದ್ರರ ನಿರಂತರ ಅದೇ ಸುತ್ತಾಟ,
ರಾತ್ರಿ ಹಗಲಿನೊಡನೆ ಅದೇ ನಿತ್ಯ ಚೆಲ್ಲಾಟ,
ಬೆಳಕು ಕತ್ತಲಿನಾಟ ಈ ಜಗದಿ. ತನುಮನದ
ಸಂಯಮಕೆ ನೂರಾರು ಪರಿಧಿ, ಕಾಯಕದಿ
ಎಲ್ಲ ಮರೆಯುವ ಮನ, ಕಾಣುವುದೇ ನೆಮ್ಮದಿ.?

ಇದು ಕರ್ಮ ಬಂಧವೋ, ಕರ್ತವ್ಯದ
ಕರೆಯೋ ಚಲಿಸುವುದು ಅನಿವಾರ್ಯ,
ಕಾಯಕದ ಸುಖ ಅನುಭಾವಿಸದೆ
ಜಡತೆಯಲಿ ಸುಮ್ಮನೆ ನಿಂತ
ನೀರಾದರೇನು ಸೊಗಸು?

ಸುತ್ತೆಲ್ಲ ನನ್ನವರೇ ದಶಕಗಳ ಒಡನಾಟದಲಿ
ಪ್ರೀತಿ ವಾತ್ಸಲ್ಯದಾ ಸದ್ಭಾವ ಸ್ಫುರಿಸಿದವರೆ,
ಇವರೊಡನೆ ಸಂತಸಿಸಿ ಸಹಕರಿಸಿ ಹೆಜ್ಜೆಹಾಕೆ
ನೀಡೆನಗೆ ಬಲ,ಮನಕೆ ಹುರುಪ ನೀಡುವ ಛಲ,
ಸ್ವಲ್ಪ ನಿಧಾನಿಸು ಕಾಲ, ಸ್ವಲ್ಪನಿಧಾನಿಸು.

***

ಫ್ರಾನ್ಸಿನ ಪುರಾತನ ಧಾಮ ಮಾಂಟ್ ಸೈಂಟ್ ಮಿಷೆಲ್


– ಪ್ರಮೋದಾ ಮೂರ್ತಿ

ಇಲ್ಲಿ ನಾನು ಹೇಳಹೊರಟಿರುವುದು ಹತ್ತು ಶತಮಾನಗಳಷ್ಟು ಹಿಂದಿನ, ಶ್ರೀಮಂತ ಇತಿಹಾಸ ಹೊಂದಿರುವ ಮಾಂಟ್ ಸೈಂಟ್ಮಿಷೆಲ್ ಆಬೆ ಎಂಬ ಒಂದು ಧಾರ್ಮಿಕ ಮೊನಸ್ಟರಿಯ ಬಗ್ಗೆ. Saint Michel Abbey ಫ್ರಾನ್ಸಿನ ಉತ್ತರ ಭಾಗದ ನಾರ್ಮಂಡಿ ಪ್ರದೇಶದಲ್ಲಿರುವ ಒಂದು ಪುರಾತನ ಸ್ಕೈ ಸ್ಕ್ರೇಪರ್‌ನಂತಿರುವ ಅದ್ಭುತ-ಸುಂದರ ಕಟ್ಟಡ. ತೀರಕ್ಕೆ ಹತ್ತಿರದಲ್ಲೇ ಉಬ್ಬರವಿಳಿತಗಳಿರುವ ಒಂದು ಅತಿ ಪುಟ್ಟ ದ್ವೀಪದಲ್ಲಿ ಈ ಕಟ್ಟಡ ನೆಲೆಯಾಗಿ ನಿಂತಿದೆ.

ನಮ್ಮ ಮಕ್ಕಳಿಬ್ಬರೂ ಹೊರದೇಶಗಳಲ್ಲೇ ನೆಲೆಸಿರುವುದರಿಂದ ನಾವು ಅವರ ಊರುಗಳಿಗೆ ೩--೪ ತಿಂಗಳು ಹೋಗುವುದು, ಬರುವುದು ಇದ್ದೇ ಇರುತ್ತದೆ. ಅವರಿಗೆ ಸಮಯ ದೊರೆತಾಗೆಲ್ಲಾ ಸುಂದರ ಪ್ರಕೃತಿ ತಾಣಗಳಿಗೆ ಎಲ್ಲರೂ ಭೇಟಿಕೊಟ್ಟು ಆನಂದಿಸುವುದು ಪರಿಪಾಠ. ಹಾಗೆ ಭೇಟಿಮಾಡಿದ ಕೆಲವು ತಾಣಗಳು ಇಷ್ಟವಾಗುತ್ತ, ಬಹಳ ಆಪ್ತವೆನಿಸಿಬಿಡುತ್ತಿತ್ತು. ಅಂತಹುದೇ ಒಂದು ಭಾವನೆ ಈ ಸೈಂಟ್ ಮಿಷೆಲ್ ಆಬೆ (abbey) ಕಂಡಾಗ ಅನ್ನಿಸಿತ್ತು.

ಹೋದ ವರುಷ ನಾವು ನಮ್ಮ ಎರಡನೇಯ ಮಗಳಾದ ಮೇಘನಾಳ ಪ್ಯಾರಿಸ್ ಮನೆಯಲ್ಲಿದ್ದೆವು. ಅದು ಬೇಸಿಗೆಯ ಸಮಯ. ಎಲ್ಲಾ ಶಾಲಾ ಕಾಲೇಜುಗಳಿಗೂ ರಜೆ ಇತ್ತು. ಆಗ ಎರಡು ತಿಂಗಳು ಕಛೇರಿಗಳಲ್ಲೂ ಹಾಜರಾತಿ ಕಡಿಮೆ. ಸಂಸಾರ ಸಮೇತ ಪ್ರವಾಸ ಹೋಗಿ ಆನಂದಿಸುವವರು ಬಹಳ. ಅದಕ್ಕೆ ಸರ್ಕಾರದ ಉತ್ತೇಜನವೂ ಇದೆ. ಆ ಸಮಯದಲ್ಲಿ ಪ್ರವಾಸ ಹೋಗಲು ೨--೩ ತಿಂಗಳುಗಳ ಮುಂಚೆಯೇ ವಸತಿ ಕಾದಿರಿಸಬೇಕಾಗುತ್ತದೆ. ಅಂತಹುದರಲ್ಲಿ ಒಳ್ಳೇ ಜುಲೈ ತಿಂಗಳಲ್ಲಿ ನಮ್ಮ ಮಗಳು ಹಾಗೂ ಅಳಿಯ ದಿಡೀರ್ ಎಂದು ಸೈಂಟ್ ಮಿಷೆಲ್‌ಗೆ ಹೋಗುವ ಆಲೋಚನೆ ಮಾಡಿದರು. ಆದರೆ ಅಲ್ಲಿ ಇರಲು





ಗಾಜಿನ ಮೇಲಿನ ವರ್ಣ ಚಿತ್ರಗಳು

ಹೋಟೆಲ್ ಸಿಗಬೇಕು, ಬೇಸಿಗೆಯ ರಜಾ ದಿನ\ಗಳಲ್ಲಿ ಅಬ್ಬೆ ಧಾಮದ ಭೇಟಿಗೆ ವಿಪರೀತ ಡಿಮ್ಯಾಂಡ್. ಒಳಗೆ ಹೋಗಲು ಟಿಕೇಟ್ ಬೇರೆ. ಅಂತೂ ಎರಡು-ಮೂರು ದಿನಗಳ ಸತತ ಪರಿಶ್ರಮದಿಂದ ಎರಡೂ ಬುಕ್ಕಿಂಗ್ ಎಲ್ಲಾ ಆನ್‌ಲೈನ್ನಲ್ಲೇ ಆಯ್ತು. ನಮ್ಮ ಪುಣ್ಯ ಚೆನ್ನಾಗಿತ್ತು.

ಶನಿವಾರ ಮಧ್ಯಾಹ್ನ ಊಟ ಮುಗಿಸಿಕೊಂಡು ೧೨.೩೦ ಗಂಟೆಗೆಲ್ಲಾ ಮನೆ ಬಿಟ್ಟೆವು. ನಮ್ಮ ಒಂದೂವರೆ ವರುಷದ ಮೊಮ್ಮಗ ನೀಲ್ ಗೆ ಕಾರಿನಲ್ಲಿ ಸುತ್ತುವುದೆಂದರೆ ಎಲ್ಲಿಲ್ಲದ ಉತ್ಸಾಹ.

ಸೈಂಟ್ ಮಿಷೆಲ್‌ಗೆ ಹೋಗಿ ತಲುಪಲು ಕಾರಿನಲ್ಲಿ ಸುಮಾರು ೪ರಿಂದ ೫ ಗಂಟೆಗಳ ಕಾಲ ಬೇಕೇಬೇಕು. ದಾರಿ ಉದ್ದಕ್ಕೂ ನಾರ್ಮಂಡಿ ಪ್ರದೇಶದ ಹುಲ್ಲುಗಾವಲು, ನದಿ, ಹಸಿರ ಸಿರಿಯ ಸೊಬಗು ಸವಿಯುತ್ತಾ ಮಧ್ಯಾಹ್ನ ೫ ಘಂಟೆ ಹೊತ್ತಿಗೆ ನಾವು ಬುಕ್ ಮಾಡಿದ IBIS ಹೋಟೆಲ್ ತಲುಪಿದೆವು. ಅಷ್ಟರಲ್ಲಿ ಮಗುವಿಗೂ ಹೊಟ್ಟೆ ಹಸಿದಿತ್ತು. ನಮ್ಮ ರೂಮುಗಳಲ್ಲಿ ಲಗೇಜ್ ಇರಿಸಿ ಮಗುವಿಗೆ ಹಾಲು ಕೊಟ್ಟು ಅಲ್ಲೇ ಇದ್ದ ಆಟದ ಮೈದಾನದಲ್ಲಿ ಅವನನ್ನು ಸ್ವಲ್ಪ ಹೊತ್ತು ಆಟ ಆಡಿಸಿ ಸುತ್ತಮುತ್ತ ನೋಡಲು ಕಾರು ಹತ್ತಿ ಹೊರಟೆವು. ದಾರಿಯಲ್ಲಿದ್ದ ಒಂದು ಪುಟ್ಟ ಊರಿನ ಕಡೆಗೆ ಕಾರು ತಿರುಗಿಸಿದರು ನಮ್ಮ ಅಳಿಯ. ಹೇಗೂ ಸೈಂಟ್ ಮಿಷೆಲ್ ನೋಡುವ ಕಾರ್ಯಕ್ರಮ ಭಾನುವಾರ ಬೆಳಿಗ್ಗೆ ಇದ್ದುದರಿಂದ ನಮಗೇನೂ ಅವಸರವಿರಲಿಲ್ಲ.

ಅಂದು ನೋಡಿದ ಆ ಊರಿನ ಹೆಸರು ಈಗ ಮರೆತುಹೋಗಿದೆ. ಆದರೆ ಒಂದು ಸುಂದರವಾದ ಪುಟ್ಟ ಊರು. ದಾರಿಯುದ್ದಕ್ಕೂ ಅಕ್ಕಪಕ್ಕದಲ್ಲಿ ಎಲ್ಲಾ ಅಂಗಡಿಗಳ ಮುಂದೂ ಕುಂಡಗಳಲ್ಲಿ ಅಂದವಾಗಿ ಕಾಣುವ ಹೂವಿನ ಗಿಡಗಳು, ಮೇಲೆ ತಿಳಿ ನೀಲ ಶುಭ್ರ ಆಕಾಶ, ಮೈಗೆ ಹಿತ ಕೊಡುವ ಗಾಳಿ ಹಾಗೂ ಬಿಸಿಲು, ಅಲ್ಲಿ ಇಲ್ಲಿ ಓಡಾಡುತ್ತಿರುವ ಜನ. ಕಣ್ಣು ಹಾಯಿಸಿದಷ್ಟು ದೂರವೂ ಹಾವಿನಂತೆ ಮಲಗಿರುವ ಡಾಮರಿನ ರಸ್ತೆಯ ಮೇಲೆ ಆಗೊಂದು ಈಗೊಂದು ಕಾರುಗಳ ಓಡಾಟ. ಹೆಚ್ಚು ಸದ್ದುಗದ್ದಲವಿಲ್ಲ. ಆ ನೋಟವೇ ಚಂದ. ಅಲ್ಲಿ ಕಾರನ್ನು ಪಾರ್ಕ್ ಮಾಡಿ ನಡೆದುಕೊಂಡು ಅಲ್ಲಿನ ನೋಟ ಸವಿಯುತ್ತಾ ಇದ್ದಾಗ, ಫ್ರೆಂಚ್ ಭಾಷೆಯಲ್ಲಿ ಬರೆದ ಬೋರ್ಡ್ ಒಂದನ್ನು ಓದಿ ನಮ್ಮ ಅಳಿಯ ಮಗಳು ಇಬ್ಬರೂ, ಇವತ್ತು ಸಾಯಂಕಾಲದಿಂದ ಮಿಷೆಲ್‌ನಲ್ಲಿ ಲೈಟ್ ಹಾಕಿರುತ್ತಾರೆ, ಪ್ರವೇಶವೂ ಉಚಿತವಂತೆ. ಇಂದು ಸಾಯಂಕಾಲವೇ ಅಲ್ಲಿಗೆ ಹೋಗೋಣ ಎಂದು ನುಡಿದರು. ನಮಗೂ ಸಂಜೆಯ ಸಮಯದಲ್ಲಿ ನೋಡುವ ಕುತೂಹಲ ಹುಟ್ಟಿ, ಆರು ಗಂಟೆಯಾಗಿದೆ ಏನಾದರೂ ತಿಂದುಕೊಂಡು ಹೋಗೋಣ, ಬೆಳಿಗ್ಗೆ ಬೇಗ ತಿಂದಿರುವುದು ಅಂತ ಅಲ್ಲಿನ ಒಂದು ರೆಸ್ಟೋರೆಂಟಿನಲ್ಲಿ ಪಿಜ್ಜಾ ತಿಂದು, ನಂತರ ಸೈಂಟ್ ಮಿಷೆಲ್ ಕಡೆಗೆ ಹೊರಟೆವು. ಅಲ್ಲಿಂದ ಸುಮಾರು ಅರ್ಧ ಗಂಟೆಯ ದಾರಿ. ಅಂತೂ ಸಾಯಂಕಾಲ ೬:೪೦ರ ಹೊತ್ತಿಗೆ ನಮ್ಮ ಗುರಿಯನ್ನು ತಲುಪಿದೆವು.

ಕಾರ್ ಪಾರ್ಕಿಂಗ್ ಸ್ಥಳದಲ್ಲಿ ಕಾರು ನಿಲ್ಲಿಸಿ. ಮೊಮ್ಮಗನ ಇತರ ಸೇವೆಗಳನ್ನು ಪೂರೈಸಿ ಆಬೆ ಕಡೆಗೆ ಹೊರಡುವ ವೇಳೆಗೆ ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಕೆಂಪಗೆ ಹೊಳೆಯುತ್ತಿದ್ದ. ಅಲ್ಲಿ ಬೇಸಿಗೆಯ ಸಮಯದಲ್ಲಿ ರಾತ್ರಿ ಒಂಬತ್ತೂವರೆ ಹತ್ತು ಗಂಟೆಗೆ ಸೂರ್ಯಾಸ್ತವಾಗುವುದು.



ನಾವು ಆಬೆ ಧಾಮದ ಬಳಿಗೆ ಬಸ್ಸಿನಲ್ಲಿ ಹೊರಟೆವು. ಕಟ್ಟಡದ ಹತ್ತಿರದ ತನಕವೂ ಸೇತುವೆ ಇದೆ. ಬೆಳಕು ಮಂದವಾಗುತ್ತಿದ್ದಂತೆ ದೀಪಗಳ ಅಲಂಕಾರದಲ್ಲಿ ಸೈಂಟ್ ಮಿಷೆಲ್ ಭವ್ಯವಾಗಿ ಕಾಣುತ್ತಿತ್ತು. ಸೇತುವೆ ಕೆಳಗಡೆ ವಿಶಾಲ ಮರಳಿನ ಹರವು. ಅಲ್ಲಿ ಜನರು ತಂಡೊಪತಂಡವಾಗಿ ಓಡಾಡುತ್ತ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ನಾವು ಬಸ್ಸಿಳಿದು ಕಾಲ್ನಡಿಗೆಯಲ್ಲಿ ಒಳಗಡೆಯ ಮೆಟ್ಟಿಲುಗಳನ್ನು ಹತ್ತುತ್ತಾ ಬಹಳಷ್ಟು ಮೇಲೆ ಮೇಲೆ ಹೋದೆವು. ಕಡಿದಾದ ಸುರುಳಿ ಆಕಾರದ ಮೆಟ್ಟಿಲುಗಳು. ಓಡಾಡಲು ಕೈಕಾಲುಗಳು ಗಟ್ಟಿಯಾಗಿರಬೇಕು. ಮೇಲೆ ಭವ್ಯವಾದ ಎತ್ತರಕ್ಕೇರಿದ ಚರ್ಚ್ ಇದ್ದು, ತುತ್ತತುದಿಯಲ್ಲಿರುವ ಸೈಂಟ್ ಮಿಷೆಲ್‌ನ ಬಂಗಾರದ ಬಣ್ಣದ ಪ್ರತಿಮೆ ಇದೆ. ಅದು ಕತ್ತಿ ಹಿಡಿದು ದುಷ್ಟ ಡ್ರ್ಯಾಗನ್ ಅನ್ನು ಹೊಡೆಯಲು ಸಿದ್ಧವಾಗಿರುವ ಪ್ರಧಾನ ದೇವದೂತ ಮಿಷೆಲನ್ನು ಚಿತ್ರಿಸುತ್ತದೆ.

ಆಬೆಯ ಒಳಭಾಗದಲ್ಲಿ ಕುಸುರಿ ಕೆಲಸದ ಕಮಾನುಗಳು, ಕಂಬಗಳು, ವಿಶಾಲ ಹಜಾರಗಳಿವೆ. ನೂರಾರು ಕಂಬಗಳ ಸುಂದರ ಅಂಗಳ ವೊಂದಕ್ಕೆ ಕ್ಲಾಯಿಸ್ಟರ್ ಎನ್ನುತ್ತಾರೆ. ಅಲ್ಲಿನ ಟೆರಸ್ ಮೇಲೆ ನಿಂತು ನೋಡಿದರೆ ಕಾಣುವ ದೃಶ್ಯ ಅದ್ವಿತೀಯ. ಧಾಮದ ಇತಿಹಾಸದ ಲೈಟ್ ಅಂಡ್ ಸೌಂಡ್ ಶೋ ನೋಡಿ ಕೆಳಗಿಳಿದು ಬರಲು ನಮಗೆ ಎರಡು ಗಂಟೆಗಳ ಕಾಲ ಹಿಡಿಯಿತು. ನಮ್ಮ ಮೊಮ್ಮಗ ಅವನ ಗಾಡಿಯಲ್ಲೇ ಮಲಗಿಬಿಟ್ಟಿದ್ದ. ನಮ್ಮ ಅಳಿಯ ಮಗುವಿನೊಂದಿಗೆ ಕೆಳಗಡೆಯೇ ಉಳಿದುಕೊಂಡಿದ್ದು, ನಮ್ಮ ನಂತರ ಅವರು ಮೇಲಿನ ಜಾಗವನ್ನು ನೋಡಬೇಕಾಯಿತು.

ಸುಮಾರು ಅಂದಾಜು ೩೫೦ ಕಡಿದಾದ ಮೆಟ್ಟಿಲುಗಳನ್ನು ಹತ್ತಿಕೊಂಡು ಮೇಲೆ ಹೋಗಿ ಎಲ್ಲವನ್ನೂ ನೋಡಿ ಬಂದದ್ದು ಸಾರ್ಥಕವಾಯ್ತು ಎಂಬ ಧನ್ಯತಾಭಾವ ಮೂಡಿಬಂತು. ನೈಸರ್ಗಿಕ ಸೌಂದರ್ಯದ ಜೊತೆಜೊತೆಗೆ ನಿರ್ಮಾಣ ಕಾರ್ಯದಲ್ಲಿ ಮನುಷ್ಯ ಎಂತಹ ಅದ್ಭುತ ಕೆಲಸ ಮಾಡಿದ್ದಾನೆ ಎಂದು ಹೆಮ್ಮೆ ಎನಿಸಿತು.

ನಮ್ಮ ಅಳಿಯದೇವರು ಮಾತಿನಮಲ್ಲ. ಫ್ರೆಂಚ್ ಭಾಷೆ ಸುಲಲಿತವಾಗಿ ಬರುತ್ತಿದ್ದುದ್ದರಿಂದ ಅಲ್ಲಿನ ಸ್ಥಳೀಯರೊಂದಿಗೆ ಸಂಭಾಷಣೆಯಲ್ಲಿ ನಿರತನಾಗಿದ್ದರು. ಅವರು ಸಂಗ್ರಹಿಸಿದ ವಿಷಯಗಳು ನನಗೆ ಈ ಲೇಖನ ಬರೆಯಲು ತುಂಬಾ ಸಹಾಯಕವಾಯಿತು.

ಆಬೆಯ ಒಳಭಾಗ, ಹೊರಭಾಗ ಎಲ್ಲಾ ನೋಡಿ ವಾಪಾಸು ಕೆಳಗೆ ಬರುವ ಹೊತ್ತಿಗೆ ರಾತ್ರಿ ೧೧ ಘಂಟೆ. ಈಗ ಸೇತುವೆಯ ಕೆಳಗಡೆ ನೋಡಿದರೆ ನಾವು ಹೋದಾಗ ಇದ್ದ ಮರಳಿನ ರಾಶಿಯ ಬದಲು ಅಚ್ಚರಿ ಎನಿಸುವಷ್ಟು ನೀರು... ನಮ್ಮ ಕಣ್ಣನ್ನು ನಂಬಲೇ ಅಗಲಿಲ್ಲ.. ಆಶ್ಚರ್ಯವಾಗಿ ಹೋಯಿತು. ಒಂದೆರಡು ಗಂಟೆಗಳ ಅಂತರದಲ್ಲಿ ಸೇತುವೆಯ ಕೆಳಗಡೆ ಎಲ್ಲೆಡೆ ನೀರು. ಅಲೆಗಳ ರಭಸ ಅಷ್ಟು ಪ್ರಬಲವಾಗಿತ್ತು. ಒಮ್ಮೊಮ್ಮೆ ಸುಮಾರು ೧೫ ಮೀಟರು ಎತ್ತರದವರೆಗೂ ಈ ಉಬ್ಬರವಿಳಿತಗಳು ಇರುತ್ತದಂತೆ.



ಕ್ರಿಶ್ಚಿಯನ್ ಮತದವರಿಗೆ ಸೈಂಟ್ ಮಿಷೆಲ್ ಆಬೆ ಒಂದು ಪವಿತ್ರ ಹಾಗೂ ಪ್ರಮುಖ ಆಕರ್ಷಕ ತಾಣ. ಲಕ್ಷಾಂತರ ಜನರು ನೋಡಲು ಬರುವ ಪ್ರೇಕ್ಷಣೀಯ ಸ್ಥಳ. ಇದು ಸಮುದ್ರ ತಟದಿಂದ ೫೦ ಮೀಟರ್ ಎತ್ತರದಲ್ಲಿ ಇದೆ. ಸಮುದ್ರದ ನೀರಿನಿಂದ ಆವೃತವಾಗಿದ್ದು ಸಂಜೆಯಾದ ನಂತರ ಅಲೆಗಳು ಕಟ್ಟಡದ ಬುಡದ ಗೋಡೆಗಳಿಗೆ ಅಪ್ಪಳಿಸಲಾರಂಭಿಸುತ್ತವೆ. ಈ ವಾಸ್ತುಶಿಲ್ಪವು ಅದರ ವಿಶಿಷ್ಟ ಭೌಗೋಳಿಕ ಸ್ಥಾನ, ಸ್ಥಳಾಕೃತಿಯ ವಿನ್ಯಾಸ, ಅದರ ನಿರ್ಮಾಣ ಹಾಗೂ ನಿರ್ವಹಣೆಗೆ ಒಂದು ದೊಡ್ಡ ಸವಾಲೇ ಆಗಿತ್ತಂತೆ. ಭೂಪ್ರದೇಶದ ಅಸ್ಥಿರ ಸ್ವರೂಪವನ್ನು ಗಣನೆಗೆ ತಂದುಕೊಂಡು ವಿಶಿಷ್ಟ ನಿರ್ಮಾಣ ತಂತ್ರವನ್ನು ಬಳಸಿದ್ದಾರಂತೆ. ಎತ್ತರೆತ್ತರದ ಗೋಡೆಗಳು, ಬಟ್ರೆಸ್‌ಗಳ ಮತ್ತು ಕಮಾನುಗಳ ಬಳಕೆ ಅದರ ಸ್ಥಿರತೆಯನ್ನು ಈಗಲೂ ಕಾಪಾಡಲು ಸಹಾಯಕ ಎಂಬುದು ಅಲ್ಲಿ ಸಿಕ್ಕ ಮಾಹಿತಿ.

ಇತಿಹಾಸದಲ್ಲಿ ಇದರ ಹಿಂದೆ ಒಂದು ಕಟ್ಟುಕತೆಯೂ ಇದೆ. ದೇವದೂತನಾದ ಮಿಷೆಲ್ ಎಂಬುವವನು ಬಿಷಪ್ ಆಬರ್ಟಗೆ ಕನಸಿನಲ್ಲಿ ಮೂರು ಬಾರಿ ಬಂದು ಅವನ ಹೆಸರಿನಲ್ಲಿ ಒಂದು ಪವಿತ್ರಧಾಮವೊಂದನ್ನು ಕಟ್ಟುವಂತೆ ಹೇಳಿದಾಗ ಈ ಧಾಮದ ನಿರ್ಮಾಣವಾಯಿತಂತೆ.

ಫ್ರೆಂಚ್ ಇತಿಹಾಸದಲ್ಲಿ ಇದು ಮಹತ್ವದ ಪಾತ್ರವಹಿಸಿದೆ. ಮೊದಲು ಇದು ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧವಾಗಿತ್ತು. ಯುದ್ಧದ ಸಮಯದಲ್ಲಿ ಇದು ಕಾರ್ಯತಂತ್ರ ಸ್ಥಳವಾಗಿತ್ತಂತೆ. ಇದರೊಳಗೆ ಸುಲಭವಾಗಿ ಬರುವುದು ಕಷ್ಟಸಾಧ್ಯ. ನೈಸರ್ಗಿಕವಾಗಿ ರಕ್ಷಣೆ ಇರುವುದರಿಂದ ಕೋಟೆಯಾಗಿಯೂ, ಆಮೇಲೆ ಒಂದು ಕಾಲದಲ್ಲಿ ಇದನ್ನು ಜೈಲಾಗಿಯೂ ಉಪಯೋಗಿಸಿದ್ದರಂತೆ. ಈಗ ಇದು ಶ್ರೇಷ್ಠವಾದ ಧಾರ್ಮಿಕ ವಿಚಾರಗಳ ಕಲಿಕೆ ಹಾಗೂ ವಿನಿಮಯಕ್ಕೆ ಹೆಸರಾಗಿದೆ. ಪ್ರವಾಸಿಗಳನ್ನು ಆಕರ್ಷಿಸುವ ವೈಶಿಷ್ಟ್ಯಪೂರ್ಣ ತಾಣವಾಗಿದೆ ಎಂಬುದು ಇಲ್ಲಿಯವರ ಅಂಬೋಣ.

ಇದರ ಸಾಂಸ್ಕೃತಿಕ, ಐತಿಹಾಸಿಕ, ಕಲಾಕೃತಿಯ ಮಹತ್ವ, ನೈಸರ್ಗಿಕ ಸೌಂದರ್ಯ ಹಾಗೂ ಮಾನವ ನಿರ್ಮಿತ ಅದ್ಭುತ ಸಾಧನೆಗೆ 1979ರಲ್ಲಿ ಇದನ್ನು ವಿಶ್ವ ಪರಂಪರೆಯ ತಾಣ (UNESCO Heritage Site) ಎಂದು ಪರಿಗಣಿಸಲಾಗಿದೆ. ಇಲ್ಲಿ ಈಗ ವಾಸಿಸುವವರ ಸಂಖ್ಯೆ ಎಷ್ಟು ಅಂದುಕೊಂಡಿದ್ದೀರಿ? ಕೇವಲ ೨೯ ಸನ್ಯಾಸಿಗಳು ಮತ್ತು ೭೦ ಮಂದಿ ಇತರ ನಿವಾಸಿಗಳು ಅಷ್ಟೇ! ಇಲ್ಲಿ ತಯಾರಾಗುವ ಬಿಸ್ಕೇಟುಗಳು ಸೈಂಟ್ ಮಿಷೆಲ್ ಬಟರ್ ಬಿಸ್ಕೆಟ್ ಎಂದೇ ಪ್ರಸಿದ್ಧಿ. ಇದರ ಮೇಲೆ ಕೋಳಿಯ ಚಿತ್ರವಿದೆ. ಆಫ್ರಿಕಾದಿಂದ ಯುರೋಪಿನ ಕಡೆ ವಲಸೆಹೋಗುವ ಹಕ್ಕಿಗಳು ದೊಡ್ಡ ಸಂಖ್ಯೆಯಲ್ಲಿ ವಿಶ್ರಾಂತಿಗಾಗಿ ಹಾಗೂ ಆಹಾರಕ್ಕಾಗಿ ಉಳಿದು ಮುಂದೆ ಹೋಗುತ್ತವೆ. ಸಮುದ್ರದ ತೀರವು ಅನೇಕ ತರಹದ ಸಸ್ಯ, ಪ್ರಾಣಿಗಳು ಹಾಗೂ ಆ ಪ್ರದೇಶಕ್ಕೆ ವಿಶಿಷ್ಟವಾದ ಅದಿರುಗಳಿಗೆ ನೆಲೆಯಾಗಿದೆ.

ಅಂತೂ ಅಲ್ಲಿಂದ ಹೊರಟು ಮಧ್ಯರಾತ್ರಿಯಲ್ಲಿ ನಾವು ಉಳಿದಿದ್ದ ಹೋಟೇಲ್ ತಲುಪಿದೆವು. ಅಲ್ಲಿಂದ ಬೆಳಗಾಗೆದ್ದು ಮನೆಯ ಕಡೆ.

***

ರಾಜ್ ಕಪೂರ್

ರಷ್ಯ – ಕೆಂಪುಟೋಪಿ

– ಜಿ. ವಿ. ಅರುಣ



ಭಾರತೀಯ ಸಿನಿಮಾವನ್ನು ಉನ್ನತ ಮಟ್ಟಕ್ಕೆ ಏರಿಸಿದ ಖ್ಯಾತಿವಂತರ ಮೊದಲ ಸಾಲಿನಲ್ಲಿ ನಿಲ್ಲುವವರು ರಾಜ್ ಕಪೂರ್. ಈಗ ಆತನ ಜನ್ಮ ಶತಾಬ್ದಿ. ಆತ ನೂರು ವರ್ಷಗಳ ಹಿಂದೆ, 14ನೇ ಡಿಸೆಂಬರ್ 1924ರಲ್ಲಿ ಈಗ ಪಾಕಿಸ್ತಾನದಲ್ಲಿರುವ ಪೆಷಾವರ್‌ನಲ್ಲಿ ಹುಟ್ಟಿದ್ದು. ಜನರ ಮನರಂಜನೆಗೆ ಆಕರ್ಷಕ ಕಥೆಗಳನ್ನು ಹೊಂದಿರುತ್ತಿದ್ದ ಆತನ ಸಿನಿಮಾಗಳಲ್ಲಿ ಹಾಡುಗಳೇ ಜೀವಾಳ. ಆತನ ಚಿತ್ರಗಳನ್ನು ನೋಡುತ್ತಾ ಬೆಳೆದ 60-70ರ ದಶಕದ ಸಿನಿಮಾಪ್ರಿಯರು ಈಗಲೂ "ಹರ್ ದಿಲ್ ಜೋ ಪ್ಯಾರ್ ಕರೆಗಾ...", "ದಿಲ್ ಕಿ ನಜ಼ರ್ ಸೇ...", "ತೇರೆ ಮನ್ ಕೆ ಗಂಗಾ, ಮೇರೇ ಮನ್ ಕೆ ಜಮುನಾ...", "ಜಾನೆ ಕಹಾ ಗಯೇ ವೊ ದಿನ್...", "ಮೇರಾ ನಾಮ್ ರಾಜು...", "ಪ್ಯಾರ್ ಹುವಾ ಇಕರಾರ್ ಹುವಾ...", "ಕಿಸಿ ಕಿ ಮುಸ್ಕುರಾಹ ಟೋಂಪೆ...", "ಸಬ್ ಕುಚ್ ಸಿಖಾ ಹೂಂ ನೇ...", "ಏಕ್ ದೀನ್ ಬಿಕ್ ಜಾಯೇಗಾ ಮಾಟೀ ಕೇ ಮೋಲ್...", "ಏ ರಾತ್ ಭೀಗಿ ಭೀಗಿ...", "ರಾಮಯ್ಯ ವಸ್ತಾವಯ್ಯ...", "ಸಜನರೆ ಝೂಟ್ ಮತ್ ಬೋಲೋ ಖುದಾ ಕಿ ಪಾಸ್ ಜಾನಾ ಹೈ...", "ಆಜಾ ಸನಂ ಮಧುರ ಚಾಂದಿನಿ ಮೇ..." ಮುಂತಾದ ನೂರಾರು ಹಾಡುಗಳನ್ನು ಗುನುಗುನಿಸುತ್ತಿರುತ್ತಾರೆ!

ಖ್ಯಾತ ಹಿನ್ನೆಲೆ ಗಾಯಕ ಮುಖೇಶ್, ರಾಜ್ ಕಪೂರರ ಆತ್ಮವನ್ನು ಆವಾಹಿಸಿಕೊಂಡವರಂತೆ ಹಾಡಿದ ಚಿತ್ರಗೀತೆಗಳು ಕೇಳುಗರ ಮನಸ್ಸಿನ ಆಳಕ್ಕೆ ಇಳಿದುಬಿಡುತ್ತಿದ್ದವು. ಆತ ರಾಜ್ ಕಪೂರ್‌ಗಾಗಿ 110 ಚಿತ್ರ ಗೀತೆಗಳನ್ನು ಹಾಡಿದ್ದಾನೆ. ಹಿಂದಿ ಭಾಷೆ ಅರ್ಥವಾಗದವರಿಗೂ ಅವನ "ದರ್ದ ಭರಿ" – ಕರುಣೆಯನ್ನು ಉಕ್ಕಿಸುವ ಹಾಡುಗಳ ಜಾಡು ತಿಳಿದುಬರುತ್ತಿತ್ತು.

ರಾಜ್ ಕಪೂರರ ಚಿತ್ರ ಎಂದರೆ ಶೈಲೇಂದ್ರರ ಗೀತ ರಚನೆ, ಶಂಕರ್ ಜೈಕಿಶನ್ ಅವರ ಸಂಗೀತ ಮತ್ತು ಮುಖೇಶ್ ಅವರ ಗಾಯನ ಇದ್ದೇ ಇರುತ್ತದೆ ಎನ್ನುವಷ್ಟರಮಟ್ಟಿಗೆ ಈ ತಜ್ಞರ ಸಮೂಹ ಕೆಲಸ ಮಾಡಿದೆ.

ರಾಜ್ ಕಪೂರರ ಕೆಲವು ಚಲನಚಿತ್ರಗಳಲ್ಲಿ ಬೇರೆಯ ಹೆಸರಾಂತ ಗಾಯಕರು ಹಾಡಿರುವುದೂ ಇದೆ. ಪ್ರಮೋದ್‌ಚಂದ್ರ ಡೇ ಅಂದರೆ ನಮ್ಮೆಲ್ಲರ ಮನ್ನಾಡೇ 'ದಿಲ್ ಹಿ ತೋ ಹೈ' ಚಲನಚಿತ್ರಕ್ಕೆ ಹಾಡಿದ್ದು 'ಲಾಗ ಚುನರಿ ಮೇ ದಾಗ್...' ಗೀತೆ. ಇದು ಇಂದಿಗೂ ಒಂದು ಜನಪ್ರಿಯ ಶಾಸ್ತ್ರೀಯ ಸಂಗೀತದ ಛಾಯೆಯ ಸುಶ್ರಾವ್ಯ ಚಿತ್ರಗೀತೆಯಾಗಿದೆ. ಅದರಲ್ಲಿ ಚಾಂದ್ ಪಾತ್ರದ ರಾಜ್ ಕಪೂರ್ ಮಾರುವೇಷದಲ್ಲಿ ಉಸ್ತಾದ್ ಖಾನ್ ಸಾಬ್ ಆಗಿ ನೃತ್ಯಕ್ಕೆ ಹಾಡುವ ಅಭಿನಯವು ಗಾಯನದಷ್ಟೇ ಸಹಜವಾಗಿ ಚಿತ್ರಿತವಾಗಿದೆ. ಗಾಯಕನಾಗಿ ರಾಜ್ ಕಪೂರ್ ನೃತ್ಯಗಾತಿಯಾಗಿ ಪದ್ಮಿನಿ ಇವರ ಗಾಯನ-ನೃತ್ಯದ ಅಭಿನಯನಗಳ ಜುಗಲ್‌ಬಂದಿ ಬಹಳ ಮೇರುಮಟ್ಟದ್ದಾಗಿತ್ತು.

ಬಹುಶಃ ಹಿಂದಿ ಪ್ರಚಾರ ಸಭಾ ಮಾಡಿದ ಹಿಂದಿ ಕಲಿಸುವ ಕೆಲಸಕ್ಕಿಂತ ಹೆಚ್ಚಾಗಿ ಈ ಹಿಂದಿ ಸಿನಿಮಾ ಹಾಗೂ ಅದರ ಗೀತೆಗಳು ಹಿಂದಿ ಬಾರದವರಿಗೂ ಆ ಭಾಷೆಯನ್ನು ಸ್ವಲ್ಪ ಕಲಿಸಿಬಿಟ್ಟದ್ದು ಸುಳ್ಳಲ್ಲ. ಸರಿಯೋ ತಪ್ಪೋ ಆ ಹಾಡುಗಳನ್ನು ನಮ್ಮ



ತನ್ನ ರಷ್ಯನ್ ಅಭಿಮಾನಿಗಳೊಡನೆ ರಾಜ್ ಕಪೂರ್

ಯುವಜನತೆ ಹಾಡುತ್ತಿದ್ದರು. ರಾಜ್ ಕಪೂರ್ ಅವರ ಮೇರಾ ನಾಮ್ ಜೋಕರ್ ಚಿತ್ರದ 'ಜೀನಾ ಯಹಾ ಮರನಾ ಯಹಾ...' ಗೀತೆಯಲ್ಲಿ ಬರುವ "ರೂಹ್ ಬದಲ್ಕರ್ ಆಯೆಗಾ..." ಎಂಬ ಸಾಲುಗಳನ್ನು ನನ್ನಷ್ಟೇ ಹಿಂದಿ ಬರುತ್ತಿದ್ದ ಮಿತ್ರನೊಬ್ಬ ***"ರೂಲ್ಸ್ ಬದಲ್ಕರ್ ಆಯೆಗಾ..."***ಎಂದೇ ಹಾಡುತ್ತಿದ್ದ! ಅವನಿಗೆ ಗೊತ್ತಿಲ್ಲದ ರೂಹ್ ಅನ್ನುವುದನ್ನು ಚೆನ್ನಾಗಿ ತಿಳಿದಿದ್ದ ರೂಲ್ಸ್ ಮಾಡಿಕೊಂಡ ಅವನ ದೃಷ್ಟಿಯಲ್ಲಿ ಎಲ್ಲವೂ ಸರಿಯಾಗಿಯೇ ಇತ್ತು!

ಮೇರಾ ನಾಮ್ ಜೋಕರ್ ಎಂದ ತಕ್ಷಣ ನೆನಪಿಗೆ ಬರುವುದು ಆ ಚಿತ್ರದ ಮೂವರು ನಾಯಕಿಯರು. ಅವರಲ್ಲಿ ಸೋವಿಯೆತ್ ಒಕ್ಕೂಟದ ಕಸೆನ್ಯಾ ರ‍್ಯಬಿನ್‌ಕಿನಾ (Kseniya Ryabinkina) ಕೂಡ ಒಬ್ಬರು. ಆಕೆ ಒಬ್ಬ ಬ್ಯಾಲೆ ನರ್ತಕಿ ಹಾಗೂ ಸಿನಿಮಾ ನಟಿ. ಈ ಚಿತ್ರದಲ್ಲಿ 'ಮರಿನಾ' ಪಾತ್ರದಲ್ಲಿ ಸರ್ಕಸ್ ಕಲಾವಿದೆಯಾಗಿ ಆಕೆಯ ಅಭಿನಯ ಅಮೋಘ. ಮೇರಾ ನಾಮ್ ಜೋಕರ್ ಚಲನಚಿತ್ರವನ್ನು ಮೂರು ಭಾಗಗಳನ್ನಾಗಿ ಮಾಡಿ, ರಷ್ಯನ್ ಭಾಷೆಗೆ ಡಬ್ ಮಾಡಿ, ಮೂರು ಸಿನಿಮಾಗಳಂತೆ ಸೋವಿಯೆತ್ ಒಕ್ಕೂಟದಲ್ಲೆಲ್ಲ ಪ್ರದರ್ಶಿಸಲಾಯಿತು. ಅಲ್ಲಿ ಅವು ಒಳ್ಳೆಯ ಬಾಕ್ಸ್ ಆಫೀಸ್ ಗಳಿಕೆಯನ್ನು ಕಂಡವು. ಒಂದು ಅಂದಾಜಿನ ಪ್ರಕಾರ ಅಲ್ಲಿ ಈ ಚಿತ್ರವನ್ನು ಸುಮಾರು ಹತ್ತು ಕೋಟಿ ಜನರು ವೀಕ್ಷಿಸಿದರಂತೆ.

ರಾಜ್ ಕಪೂರ್‌ನ ಹೆಸರು ಸೋವಿಯೆತ್ ಒಕ್ಕೂಟದಲ್ಲಿ ಅಷ್ಟು ಜನಜನಿತವಾಗಲು ಕಾರಣ ಆತನ ಹಿಂದಿನ ಚಲನಚಿತ್ರಗಳಾದ **"ಆವಾರ"** (1951) ಹಾಗೂ **"ಶ್ರೀ 420"** (1955). **ಆವಾರ** ಚಿತ್ರವು ರಷ್ಯನ್ ಭಾಷೆಗೆ **ಬ್ರಾದವ್ಯ**ಎಂಬ ಹೆಸರಿನಲ್ಲಿ ಡಬ್ ಆಗಿತ್ತು. ಆ ಚಿತ್ರದಲ್ಲಿ ಮೂಡಿದ್ದ ಸಾಮಾಜಿಕ ಅನ್ಯಾಯ ಹಾಗೂ ಬಡತನದ ವಿರುದ್ಧದ ಹೋರಾಟಗಳು ಹಾಗೂ ಸುಶ್ರಾವ್ಯವಾದ ಚಿತ್ರಗೀತೆಗಳಿಂದ ಅದು ಸೋವಿಯೆತ್ ಒಕ್ಕೂಟದ ಸಾಮಾನ್ಯ ಪ್ರಜೆಗಳನ್ನು ರಾಜ್‌ಕಪೂರ್‌ನ ಆರಾಧಕರನ್ನಾಗಿ ಮಾಡಿಬಿಟ್ಟಿತು! ಅಲ್ಲಿ ರಾಜ್ ಕಪೂರ್ ಅವರ**"ಆವಾರ ಕಲ್ಟ್"** ಕೂಡ ಪ್ರಾರಂಭವಾಗಿಬಿಟ್ಟಿತ್ತು! ಮುಂದೆ ಆತನಿಗೆ **"ತವರಿಸ್ ಬ್ರಾದವ್ಯ"** (ಕಾಮ್ರೇಡ್ ಆವಾರ) ಎಂಬ ಬಿರುದನ್ನು ಸೋವಿಯೆತ್ ಒಕ್ಕೂಟದ ಜನತೆ ನೀಡಿತು.



ಇನ್ನು '**ಶ್ರೀ 420**' ಚಲನಚಿತ್ರದಲ್ಲಿ ಬರುವ

"ಮೇರಾ ಜೂತ ಹೈ ಜಪಾನಿ
ಏ ಪತ್ಲೂನ್ ಇಂಗ್ಲಿಷ್ಥಾನಿ
ಸರ್ ಪೆ ಲಾಲ್ ಟೋಪಿ ರೂಸಿ
ಫಿರ್ ಬಿ ದಿಲ್ ಹೈ ಹಿಂದುಸ್ಥಾನಿ..."

ಗೀತೆಯಂತೂ ಸೋವಿಯೆತ್ ಒಕ್ಕೂಟದ ಜನಸಾಮಾನ್ಯರ ಹೃದಯಕ್ಕೆ ಬಹಳ ಹತ್ತಿರವಾದ ಗೀತೆಯಾಗಿ ಹೋಗಿತ್ತು. ಅದಕ್ಕೆ ಕಾರಣ ಆ ಗೀತೆಯ ಮೂರನೆಯ

ಸಾಲು: 'ಸರ್ ಪೆ ಲಾಲ್ ಟೋಪಿ ರೂಸಿ', ಅರ್ಥಾತ್ 'ತಲೆಯ ಮೇಲಿನ ರಷ್ಯದ ಕೆಂಪು ಟೋಪಿ!' ಈ ಉತ್ತಮ ಚಿತ್ರಗೀತೆಯ ಲೇಖಕ ಶೈಲೇಂದ್ರ ಅವರು. ಸುಶ್ರಾವ್ಯವಾಗಿ ಹಾಡಿದ್ದು ಮುಖೇಶ್.



ಮೆರಾ ನಾಮ್ ಜೋಕರ್' ಚಲನಚಿತ್ರದ ರಷ್ಯನ್ ಭಾಷೆಯ ಡಿವಿಡಿ

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶ ಒಂದಿದೆ. ಆ ಚಿತ್ರವು ಕರಿಬಿಳುಪಿನ ಚಿತ್ರ; ಬಣ್ಣದ್ದಲ್ಲ. ಹಾಗಾಗಿ ಕೆಂಪುಬಣ್ಣದ ಟೋಪಿ ಆ ಚಿತ್ರದಲ್ಲಿ ಎಲ್ಲೂ ಕಾಣುವುದಿಲ್ಲ. ಇಷ್ಟೆಲ್ಲಾ ಇದ್ದರೂ ಈ ಹಾಡಿಗೆ ಅಭಿನಯಿಸಿದಕ್ಕೆ ರಾಜ್‌ಕಪೂರ್ ಅವರಿಗೆ ಕೀರ್ತಿ ಬಂತು. ಅವರು ಸೋವಿಯೆತ್ ಒಕ್ಕೂಟದ ಜನಸಾಮಾನ್ಯರ ಹೃದಯದಲ್ಲಿ ಅತಿ ಹತ್ತಿರದ ಸ್ಥಾನಪಡೆದ ನಟನಾಗಿ ಹೋಗಿದ್ದರು. ರಾಜ್‌ಕಪೂರ್ ಅವರಿಗೆ ಇದರ ಅರಿವು ಚೆನ್ನಾಗಿತ್ತು. ಹಾಗಾಗಿ ಅವರು ಒಂದು ಚಿತ್ರದಲ್ಲಿ ಸೋವಿಯೆತ್ ಒಕ್ಕೂಟದ ಕಲಾವಿದೆಯೊಬ್ಬರನ್ನು ಆರಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

1988ರಲ್ಲಿ ನಾನು ವಿಶೇಷ ತರಬೇತಿಗೆ ಸೋವಿಯೆತ್ ಒಕ್ಕೂಟದ ಮಾಸ್ಕೋದಲ್ಲಿದ್ದೆ. ಜುಲೈ 88ರಲ್ಲಿ ಇಂಡಿಯ ಫೆಸ್ಟಿವಲ್ ಉದ್ಘಾಟನೆಗೆ ಅಂದಿನ ರಾಷ್ಟ್ರಪತಿಗಳಾಗಿದ್ದ ಆರ್.ವೆಂಕಟರಾಮನ್ ಅವರು ಬಂದಿದ್ದರು. ಆ ಸಂದರ್ಭದಲ್ಲಿ ಮಾಸ್ಕೋದ ಮ್ಯೂಸಿಯಂ ಒಂದರಲ್ಲಿ ರಾಜ್ ಕಪೂರ್ ಮತ್ತು ಆತನ ಕುಟುಂಬದವರ ದೊಡ್ಡ ತೈಲಚಿತ್ರಗಳನ್ನು ವಿಶೇಷವಾಗಿ ಪ್ರದರ್ಶಿಸಿದ್ದರು. ಸೋವಿಯೆತ್ ಒಕ್ಕೂಟದ ಚಿತ್ರ ಕಲಾವಿದರು ಆ ಚಿತ್ರಗಳನ್ನು ರಚಿಸಿದ್ದರು. ಮ್ಯೂಸಿಯಂನ ಒಂದು ಕೋಣೆಯಲ್ಲಿ ರಾಜ್ ಕಪೂರ್ ಅಭಿನಯಿಸಿದ್ದ ರಷ್ಯನ್ ಭಾಷೆಗೆ ಡಬ್ ಆದ ಚಲನಚಿತ್ರಗಳ ಅನೇಕ ಛಾಯಾಚಿತ್ರಗಳನ್ನು ಪ್ರದರ್ಶಿಸಿದ್ದರು. ನಾನು ಆ ಮ್ಯೂಸಿಯಂ ನೋಡಲು ಹೋದಾಗ ಅಲ್ಲಿದ್ದ ಜನರು ನನ್ನನ್ನು ಕೈಹಿಡಿದು ಆ ಕೋಣೆಗೆ ಕರೆದುಕೊಂಡು ಹೋದರು. ಮ್ಯೂಸಿಯಂಗೆ ಬಂದಿದ್ದ ಅನೇಕರು ನನ್ನನ್ನು ನೋಡಿ 'ನಮ್ಮ ಭಾರತದ ಸ್ನೇಹಿತರು' – 'ದ್ರುಗ್ ಇಂದಿಸ್ಕೀ' ಎಂದು ಸಂತೋಷದಿಂದ ನನ್ನ ಕೈಕುಲುಕಿದರು. ಅಲ್ಲಿದ್ದ ರಾಜ್ ಕಪೂರ್ ತೈಲಚಿತ್ರವನ್ನು ನೋಡಿ ತಮ್ಮ ಎದೆಯ ಮೇಲೆ ಕೈ ಇಟ್ಟುಕೊಂಡು ನಗುಮುಖದಿಂದ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. 'ಸರ್ ಪೆ ಲಾಲ್ ಟೋಪಿ ರೂಸಿ' ಸಾಲುಗಳನ್ನು ತಮ್ಮದೇ ಧ್ವನಿಯಲ್ಲಿ ಹೇಳಿ, ಅದು ಅವರ ಮನದಲ್ಲಿ ಉಳಿದಿರುವುದನ್ನು ನನಗೆ ದಾಟಿಸಿದರು! ಅಲ್ಲಿ ನಾನಿದ್ದ ಸುಮಾರು ಒಂದು ಗಂಟೆಯ ಸಮಯದಲ್ಲಿ ರಷ್ಯನ್ನರ ಪ್ರೀತಿಯನ್ನು ನಮ್ಮ ರಾಜ್ ಕಪೂರ್ ಹೇಗೆ ಗಳಿಸಿದ್ದರು ಎನ್ನುವುದು ಚೆನ್ನಾಗಿ ಅರಿವಾಯಿತು. ಹಲವರು 'ರಾಜ್ ಕಪೂರ್ ತೈಲಚಿತ್ರವು ಎಲ್ಲಿದೆ?' ಎಂದು ಕೇಳುತ್ತಿದ್ದರೆ, ಇತರರು 'ಆ ಕೋಣೆಗೆ ಹೋಗಿ' ಎಂದು ನಿರ್ದೇಶನ ಮಾಡುತ್ತಿದ್ದರು. ನನಗಂತೂ ಅದೊಂದು ರೋಮಾಂಚಕಾರಿ ಅನುಭವ. ಇದು ನಮ್ಮ ದೇಶದವರನ್ನು ಕಂಡರೆ ಸೋವಿಯೆತ್ ಒಕ್ಕೂಟದ ಜನರಿಗೆ ಇರುವ ಪ್ರೀತಿ ಆದರಗಳನ್ನು ಎತ್ತಿ ತೋರಿಸುತ್ತಿತ್ತು.

ಇಂಡಿಯ ಫೆಸ್ಟಿವಲ್ ಅಂಗವಾಗಿ ರಾಜ್ ಕಪೂರ್ ಅಭಿನಯಿಸಿದ್ದ ಅನೇಕ ಚಲನಚಿತ್ರಗಳಲ್ಲದೆ ವಿವಿಧ ಭಾರತೀಯ ಭಾಷೆಗಳ ಅನೇಕ ಚಲನಚಿತ್ರಗಳು ಭಾಷಾಂತರಿತ ಉಪಶೀರ್ಷಿಕೆಯೊಂದಿಗೆ ಪ್ರದರ್ಶನಗೊಂಡವು. ಹಲವು ಬಾರಿ ಮಾಸ್ಕೋದ ದಾರಿಗಳಲ್ಲಿ ಆಟೋ ಬಸ್ ಅಥವ ಮೆಟ್ರೋ ನಿಲ್ದಾಣಗಳಲ್ಲಿ ಜನರು ನನ್ನನ್ನು 'ಒಬ್ಬ ಕಲಾವಿದ' ಎಂದುಕೊಂಡು ಮಾತನಾಡಿಸಿದ್ದು ಇದೆ!



‘ಶ್ರೀ 420’ ಚಲನಚಿತ್ರದ ರಷ್ಯನ್ ಭಾಷೆಯ ಭಿತ್ತಿಪತ್ರ. ಬಲಗಡೆ ಮೇಲುಭಾಗದಲ್ಲಿ “ಇದು ಎರಡು ಶೃಂಖಲೆಗಳಲ್ಲಿ ಇದೆ” ಎಂದೂ ಎಡಗಡೆ ಕೆಳಭಾಗದಲ್ಲಿ “ಭೂಮಿಕೆಯಲ್ಲಿ ರಾಜ್ ಕಪೂರ್”ಎಂದೂ ಮುದ್ರಿತವಾಗಿದೆ.

“ಲಾಲ್ ಟೋಪಿ ಹಾಡು ಸೋವಿಯೆತ್ ಒಕ್ಕೂಟದಲ್ಲಿ ಯಾಕೆ ಅಷ್ಟು ಜನಪ್ರಿಯವಾಗಿದೆ?” ಎಂದು ನನ್ನ ರಷ್ಯನ್ ದುಬಾಷಿಯಲ್ಲಿ ವಿಚಾರಿಸಿದೆ. ಆಕೆ ಹೇಳಿದ್ದು: “ಕೆಂಪು ನಮ್ಮ ದೇಶದಲ್ಲಿ ಸೈನಿಕರು ಮೊದಲು ಧರಿಸುತ್ತಿದ್ದ ಟೋಪಿ ಹಾಗೂ ಶಿರಸ್ತ್ರಾಣದ ಬಣ್ಣ. ನಮ್ಮ ದೇಶದಲ್ಲಿ ಕೆಂಪುಬಣ್ಣ ಎಂದರೆ ಗೌರವದ ಸಂಕೇತ ಹಾಗೂ ಸೌಂದರ್ಯದ ಪ್ರತೀಕ ಎಂದು ಭಾವಿಸುತ್ತೇವೆ. ರೆಡ್ ಸ್ಕ್ವೈರ್ ಎಂದರೆ ಮಾಸ್ಕೋದಲ್ಲಿ ಇರುವ ಅತಿ ಸುಂದರವಾದ ಸ್ಥಳ. ಹಾಗಾಗಿ “ಸರ್ ಪೆ ಲಾಲ್ ಟೋಪಿ ರೂಸಿ” ಎನ್ನುವ ಸಾಲುಗಳು ರಷ್ಯನ್ ಭಾಷೆಗೆ ತರ್ಜುಮೆಗೊಂಡು ಅವರ ಹಾಡಿನಲ್ಲಿ ಬಂದಾಗ ಸ್ವಾಭಾವಿಕವಾಗಿ ನಮ್ಮ ಜನರು ಬಹಳ ಇಷ್ಟಪಟ್ಟರು ಅಲ್ಲದೆ ನಮ್ಮ ಚಳಿಯ ದೇಶದಲ್ಲಿ ತಲೆಯನ್ನು ಬೆಚ್ಚಗೆ ಕಾಪಾಡುವುದು ಆ ಕೆಂಪು ಟೋಪಿ. ತಲೆ ಮನುಷ್ಯನ ಅತ್ಯಂತ ಮುಖ್ಯ ಭಾಗ. ಹಾಗಾಗಿ ‘ಸೋವಿಯೆತ್ ಒಕ್ಕೂಟದ ಕೆಂಪು ಟೋಪಿ ಆ ಚಿತ್ರದ ನಾಯಕನ ತಲೆಯನ್ನು ಕಾಪಾಡುತ್ತಿದೆ’ ಎಂಬ ಭಾವನೆ ನಮ್ಮ ಜನರಲ್ಲಿದೆ.”

ಒಟ್ಟಿನಲ್ಲಿ ಚಿತ್ರಗೀತೆಯ ಒಂದು ಕೆಂಪುಟೋಪಿಯ ಸೂಚನೆ, ಭಾರತ ಸೋವಿಯೆತ್ ಒಕ್ಕೂಟದ ಸ್ನೇಹಪೂರ್ವಕ ಬಾಂಧವ್ಯವನ್ನು ಸಾಮಾನ್ಯ ಜನರ ಮಟ್ಟದಲ್ಲೂ ಗಟ್ಟಿಮಾಡಿಬಿಟ್ಟಿತ್ತು.

ರಾಜಕೀಯವಾಗಿಯೂ ಎರಡು ರಾಷ್ಟ್ರಗಳು ಪರಸ್ಪರ ಬಾಂಧವ್ಯವನ್ನು ಗಟ್ಟಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಅನೇಕ ಬೆಳವಣಿಗೆಗಳಾದುವು. ಸಾಂಸ್ಕೃತಿಕವಾಗಿಯೂ ರಾಜಕೀಯವಾಗಿಯೂ ವಿಭಿನ್ನ ನೆಲೆಗಳಲ್ಲಿ ಪರಸ್ಪರ ನಂಬಿಕೆ ಹಾಗೂ ಸ್ನೇಹವೂ ಗಟ್ಟಿಗೊಳ್ಳುತ್ತಾ ಹೋಯಿತು. ಈ ಸ್ನೇಹದ ಪರಿಣಾಮವಾಗಿ ನಮಗೆ ಸೋವಿಯೆತ್ ಒಕ್ಕೂಟದಿಂದ ಅನೇಕ ಬೃಹತ್ ಕೈಗಾರಿಕಾ ಸ್ಥಾವರಗಳ ಸ್ಥಾಪನೆಗೆ ವಿನ್ಯಾಸ, ಸಿದ್ಧ ಉಪಕರಣಗಳ ಆದಿಯಾಗಿ ಎಲ್ಲವೂ ಸಿಕ್ಕಿದವು. ರಕ್ಷಣಾ ಕ್ಷೇತ್ರದಲ್ಲಿ ಬೇಕಾದ ಅನೇಕ ಉಪಕರಣಗಳ ಉತ್ಪಾದನೆಗೂ ವಿನ್ಯಾಸ ಮೊದಲುಗೊಂಡು ಎಲ್ಲವೂ ನಮಗೆ ಬಂದವು. ಈಗಂತೂ ರೂಪಾಯಿಯ ಲೆಕ್ಕದಲ್ಲಿ (ಡಾಲರ್ ಅಲ್ಲ) ತೈಲವನ್ನು ಈಗಿನ ರಷ್ಯ ದೇಶವು ನಮಗೆ ನೀಡುತ್ತಿರುವುದು ನಮ್ಮ ಆರ್ಥಿಕ ಪರಿಸ್ಥಿತಿಯ ಸಮತೋಲನಕ್ಕೆ ದೊಡ್ಡ ಕೊಡುಗೆಯಾಗಿದೆ.

ಮತ್ತೊಂದು ವಿಚಾರ. ನಾನು ಸೋವಿಯೆತ್ ಒಕ್ಕೂಟದಲ್ಲಿದ್ದಾಗ ಒಂದು ಚಲನಚಿತ್ರ ಮಂದಿರದ ಮುಂದೆ ಹಾಕಿದ್ದ ದೊಡ್ಡ ಭಿತ್ತಿಚಿತ್ರದಲ್ಲಿ ನಮ್ಮ ಮತ್ತೊಬ್ಬ ಖ್ಯಾತ ನಟ ಮಿಥುನ್ ಚಕ್ರವರ್ತಿಯ ಭಿತ್ತಿಚಿತ್ರ ಕಂಗೊಳಿಸುತ್ತಿತ್ತು! ಅದರ ಕೆಳಗಿನ ರಷ್ಯನ್ ಭಾಷೆಯ ಬರಹವನ್ನು ಓದಿ, ತಲೆ ಕೆರೆದುಕೊಂಡಾಗ ನನಗೆ ಗೊತ್ತಾಗಿದ್ದು ಅದು “**ಡಿಸ್ಕೋ ಡ್ಯಾನ್ಸರ್**” ಚಿತ್ರದ ಡಬ್ಬಿಂಗ್ ಎಂದು! ಸೋವಿಯೆತ್ ಒಕ್ಕೂಟದಲ್ಲಿ ಈ ಚಿತ್ರವನ್ನು ಸುಮಾರು ಹನ್ನೆರಡು ಕೋಟಿ ಜನರು ವೀಕ್ಷಿಸಿದ ಅಂದಾಜಿದೆ! ಒಟ್ಟಿನಲ್ಲಿ ಭಾರತದ ನಟರು ಹಾಗೂ ಚಲನಚಿತ್ರಗಳು ಸೋವಿಯತ್ ಜನತೆಯ ಅಚ್ಚುಮೆಚ್ಚಿನದಾಗಿದ್ದವು.



ರಷ್ಯದ ಥಿಯೇಟರ್ ಮುಂದೆ “ಆವಾರ” ಸಿನಿಮಾದ ಭಿತ್ತಿಚಿತ್ರ, ನಾಯಕ ರಾಜ್ ಕಪೂರ್ ಮತ್ತು ನಾಯಕಿ ನರ್ಗಿಸ್ ಅವರ ಚಿತ್ರಗಳು ಅದರಲ್ಲಿವೆ





ಇಂದಿಗೂ ಕೂಡ ಕಮ್ಯುನಿಸ್ಟ್ ದೇಶಗಳಲ್ಲಿ ಕೆಂಪು ನಕ್ಷತ್ರವು ಜನರ ಅತ್ಯಂತ ಪ್ರೀತಿಯ ಆಕರ್ಷಣೆಯಾಗಿದೆ. ಚಿಕ್ಕಮಕ್ಕಳ ಬಟ್ಟೆಗಳ ಮೇಲೆ ಅದು ರಾರಾಜಿಸುತ್ತಿರುವುದನ್ನು ಕಾಣಬಹುದು.

ಕೆಂಪು ಬಣ್ಣದ ನಕ್ಷತ್ರವನ್ನು ಕೂಡ ರಷ್ಯದಲ್ಲಿ ಕಮ್ಯೂನಿಸಂನ ಒಂದು ಸಂಕೇತವಾಗಿ ಪರಿಗಣಿಸ ಲಾಗುತ್ತದೆ. ಮಾಸ್ಕೊದ ಐತಿಹಾಸಿಕ ಸ್ಥಳ ರೆಡ್ ಸ್ಕ್ವೇರ್‌ನಲ್ಲಿರುವ ಐತಿಹಾಸಿಕ ಕ್ರೆಮ್ಲಿನ್ ಕಟ್ಟಡದ ಮೇಲೆ ಐದು ಕೆಂಪುಬಣ್ಣದ ನಕ್ಷತ್ರಗಳನ್ನು ಅಳವಡಿಸಿದ್ದಾರೆ. ಈಗ ಅಲ್ಲಿ ರಾಜಕೀಯವಾಗಿ ಅನೇಕ ಬದಲಾವಣೆಗಳಾದರೂ ಹಿಂದಿನ ಕಮ್ಯುನಿಸ್ಟ್ ದಿನಗಳ ನೆನಪಿನ ಪ್ರತೀಕವಾಗಿ ಅವು ಇನ್ನೂ ಉಳಿದುಕೊಂಡಿದೆ.

ಸೋವಿಯತ್ ಜನತೆಗೆ 'ಸರ್ ಪೆ ಲಾಲ್ ಟೋಪಿ ರೂಸಿ' ಹಾಡಿನ ಭಾವನಾತ್ಮಕ ಸಂಬಂಧ

ಇದೊಂದು ವಿಶ್ವಪ್ರಸಿದ್ಧ ಐತಿಹಾಸಿಕ ಕರಪತ್ರ. ಇದು 1918ರಿಂದ 1922ರವರೆಗೆ ರಷ್ಯದಲ್ಲಿ ನಡೆದ ಅಂತರ್ಯುದ್ಧದ ಸಮಯದಲ್ಲಿ ಬಿಡುಗಡೆಯಾದದ್ದು. ಇದು ಆ ದೇಶದ ಯುವಜನತೆಗೆ" **ನೀವು ಸ್ವಯಂಸೇವಕನಾಗಿದ್ದೀರಾ?**" ಎಂದು "ರೆಡ್ ಆರ್ಮಿ"ಗೆ ಸೇರಲು ನೀಡಿದ ಆಹ್ವಾನವಾಗಿತ್ತು. ಆ ಕರಪತ್ರದಲ್ಲಿರುವ ಕೆಂಪು ಸಮವಸ್ತ್ರ ಧರಿಸಿದ್ದ ಸೈನಿಕನ ತಲೆಯ ಮೇಲಿನ ಕೆಂಪು ಟೋಪಿಯನ್ನು ಗಮನಿಸಿ. ಅದನ್ನು **ಬುದೆನೊವ್ಕ** (budenovka) ಎಂದು ಕರೆಯುತ್ತಿದ್ದರು. ಈ ಕೆಂಪು ಬಣ್ಣದ ಟೋಪಿ ಹಾಗೂ ಅದನ್ನು ಧರಿಸಿದ್ದ ರೆಡ್ ಆರ್ಮಿ ಸೈನಿಕರ ನೆನಪು ರಷ್ಯದ ಜನರ ಮನಸ್ಸಿನಲ್ಲಿ ಇಂದಿಗೂ ಹಚ್ಚಹಸಿರಾಗಿದೆ. ಅನಂತರದ ದಿನಗಳಲ್ಲಿ ಟೋಪಿಯ ಬಣ್ಣ ಬದಲಾದರೂ ಅದರ ಮೇಲೆ ಐದು ಮೂಲೆಯ ಕೆಂಪು ಬಣ್ಣದ ನಕ್ಷತ್ರವಿತ್ತು. ಇದನ್ನು ಶಿರಸ್ತ್ರಾಣಗಳಲ್ಲಿ ಕೂಡ ಅಳವಡಿಸಲಾಗಿತ್ತು. ಕೆಂಪು ಟೋಪಿ ಮತ್ತು ಕೆಂಪು ಬಣ್ಣವು ರಷ್ಯಾ ದೇಶದ ಜನರಿಗೆ ಕ್ರಾಂತಿಯ ಸಂಕೇತವಾಗಿವೆ. ಅದು ಕ್ರಾಂತಿಗಾಗಿ ಬಲಿದಾನ ಮಾಡಿದವರ ರಕ್ತದ ನೆನಪನ್ನು ಅವರಿಗೆ ತರುತ್ತದೆ.



ಇವುಗಳ ಹಿನ್ನೆಲೆಯಲ್ಲಿ ಸೋವಿಯತ್ ಯೂನಿಯನ್ನಿನ ಜನತೆಗೆ ರಾಜ್ ಕಪೂರ್ ಹಾಡಿದ 'ಸರ್ ಪೆ ಲಾಲ್ ಟೋಪಿ ರೂಸಿ' ಹಾಡಿನ ಭಾವನಾತ್ಮಕ ಸಂಬಂಧವನ್ನು ನಾವು ಅರ್ಥಮಾಡಿಕೊಳ್ಳಬಹುದು.

ನಮ್ಮ ದೇಶ ಕಂಡ ಮಹಾನ್ ನಟ ರಾಜ್ ಕಪೂರ್‌ನ ಜನ್ಮ ಶತಾಬ್ದಿಯ ಈ ಸಂದರ್ಭದಲ್ಲಿ ಇವೆಲ್ಲವೂ ನೆನಪಾದವು. ಈ ಲೇಖನ ಬರೆಯುತ್ತಿರುವಾಗ ಆತನ ಹಳೆಯ ಹಿಂದಿ ಚಿತ್ರಗೀತೆಗಳು ನನ್ನ ಮೊಬೈಲ್‌ನಲ್ಲಿ ತೇಲಿ ಬರುತ್ತಿವೆ; ಮನ ಮುದಗೊಳ್ಳುತ್ತಿದೆ, ಬೇಕಿದ್ದರೆ ಈ ಲೇಖನವನ್ನು ಓದುತ್ತಾ ನೀವು ಆ ಚಿತ್ರಗೀತೆಗಳನ್ನು ಕೇಳಿ ನೋಡಿ.

***

ಸಾಹಿತ್ಯ ದಾಸೋಹ – 232

ಅಧ್ಯಕ್ಷೀಯ ಅನಿಸಿಕೆಗಳು



– ಕೆ.ಆರ್.ಎಸ್. ಮೂರ್ತಿ

ಎಲ್ಲರಿಗೂ ನಮಸ್ಕಾರ.

ಇವತ್ತಿನ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ನಿರ್ವಹಿಸುವಂತೆ ಸಂಚಾಲಕ ವರ್ಗದ ಶ್ರೀ ಮಹಾಬಲ ಅವರು ಕೇಳಿದಾಗ, ಧನ್ಯ ಮನೋಭಾವದಿಂದ ಒಪ್ಪಿಕೊಂಡೆ. ಏಕೆಂದರೆ ವೇದಿಕೆಯ ಪ್ರತಿಭಾನ್ವಿತ ಸದಸ್ಯರುಗಳ ಕೆಲ ಸಮಯದ ಸಾಹಿತ್ಯಾವಲೋಕನಕ್ಕೆ ಇದೊಂದು ಸದವಕಾಶ. ಈ ಅವಕಾಶ ಕೊಟ್ಟಿದ್ದಕ್ಕಾಗಿ ವೇದಿಕೆಯ ಸಂಚಾಲಕವರ್ಗದ ಸಕಲರಿಗೆ ನನ್ನ ಆತ್ಮೀಯ ವಂದನೆಗಳು. ಹಾಗೇಯೇ, ನನ್ನ ಪರಿಚಯವನ್ನು ಮಾಡಿಕೊಟ್ಟ ಶ್ರೀ ಹುವಾಶ್ರೀ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಈ ವೇದಿಕೆಯಲ್ಲಿ ಎಲ್ಲರೂ ಸಾಧಕರೇ. ನುರಿತ ಬರಹಗಾರರೇ. ಪಾಂಡಿತ್ಯಕ್ಕಂತೂ ಇಲ್ಲಿ ಕೊರತೆಯೇ ಇಲ್ಲ. ಇಲ್ಲಿನ ಎಲ್ಲರ ಅನುಭವ ಸಾಗರದಲ್ಲಿ ತೇಲುವುದೇ ಒಂದು ಮಧುರಾನುಭವ. ಹಾಗಾಗಿ ಇವತ್ತಿನ ಪ್ರಸ್ತುತಿಗಳ ಬಗ್ಗೆ ನನ್ನ ಅರಿವು ಮತ್ತು ಯೋಗ್ಯತೆಯ ಮಟ್ಟಕ್ಕೆ ಸೀಮಿತಗೊಂಡಂತೆ ಆಲೋಚನೆ ಮತ್ತು ಅನಿಸಿಕೆಗಳನ್ನು ಹಂಚಿಕೊಳ್ಳುವ ಪ್ರಯತ್ನ ಮಾಡುತ್ತೇನೆ. ತಮ್ಮ ತಮ್ಮ ಮನದ ಚಿಂತನೆಗಳನ್ನು ಇಂದು ಹರಿಯಬಿಟ್ಟ ಎಲ್ಲಾ ವಿದ್ವನ್ಮಣಿಗಳಿಗೂ ಹಾರ್ದಿಕ ಅಭಿನಂದನೆಗಳು.

ಅಭಿಪ್ರಾಯ ಹಂಚಿಕೆಗೆ ಮುನ್ನ ಒಂದೆರಡು ಮಾತು. ಅದು ಕನ್ನಡದ ನುಡಿ ಬಗ್ಗೆ ಅಷ್ಟೇ! ಎಲ್ಲೋ ಒಂದು ಕಡೆ ನಾನು ಓದಿದ ಪದ್ಯವೊಂದರ ನೆನಪು ಬರುತ್ತೆ. ಅದು ಹೀಗಿದೆ.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯನು
ತಿಳಿದು ತನ್ನೊಳು ತನ್ನ ಮುಕ್ತಿಯ
ಗಳಿಸಿಕೊಂಡರೆ ಸಾಲದೇ?

ಎಷ್ಟು ಮಧುರವಾದ ಮಾತು! ಕನ್ನಡದ ನುಡಿಗಳಲ್ಲಿ, ಸಾಹಿತ್ಯ ಪ್ರಕಾರದಲ್ಲಿ ಮಾನಸಿಕ ವಿಕಾಸಕ್ಕೆ, ಪ್ರಗತಿಪರ ಚಿಂತನೆಗೆ ಇಲ್ಲದಿರುವ ವಿಷಯವೇ ಇಲ್ಲ. ಅದು ಸುಲಭ ಕನ್ನಡದಲ್ಲಿಯೇ ಹೆಚ್ಚಾಗಿದೆ ಅಂತ.

– ಇದನ್ನು ಅನುಭವಾಮೃತ ಅಂತಲೇ ಅಂದುಕೊಳ್ಳಬಹುದು.

ಮನಸ್ಸನ್ನು ನಲಿಸಿ, ಹೃದಯವನ್ನು ಹಿಗ್ಗಿಸಿ ಬುದ್ಧಿಯನ್ನು ತಿದ್ದಿ, ಬಾಳನ್ನು ಬೆಳಗಿಸೋದಕ್ಕೆ ಸಾಹಿತ್ಯ ಒಂದು ಉತ್ತಮ ಸಾಧನ. ಸಾಹಿತ್ಯದ ಪರಿಚಯ, ಅಧ್ಯಯನಗಳಿಂದ ಸಿಗುವ ಸಂಸ್ಕಾರಕ್ಕೆ ಒಂದು ಅನನ್ಯ ಶಕ್ತಿಯಿದೆ. ಸಮಯದಲ್ಲಿ ಬರತಕ್ಕಂತಹ ಬದಲಾವಣೆಗಳಿಂದ ಸಾಹಿತ್ಯಕ್ಕೆ ಕೊರತೆಯೂ ಇಲ್ಲ. ಏಕೆಂದರೆ ಅದು ಸಲಿಲ, ನೀರಿನ ಹಾಗೆ. ಸಮಾಜದ ಸ್ಥಿತಿ–ಗತಿಗಳನ್ನು ಪಾತ್ರೆಗಳು ಎಂದುಕೊಂಡರೆ, ಸಾಹಿತ್ಯ ಅದರ ಆಕಾರವನ್ನು ಪಡೀತಾ ಹೋಗ್ತಾ ಇರುತ್ತೆ. ಅದನ್ನು ಸೃಷ್ಟಿಸ್ತಾ ಆಸ್ವಾದಿಸ್ತಾ ಸಾಗೋದಷ್ಟೇ ನಮ್ಮ ಗುರಿ ಹಾಗೂ ಕರ್ತವ್ಯ ಆದರೆ ಸಾಕೇ ಸಾಕು!

ಒಂದು ನಾಡಿನ ಸಾಧನೆಗಳಲ್ಲಿ ಸಾಹಿತ್ಯದ ಪಾತ್ರ ಬಹಳ ದೊಡ್ಡದು. ಅದಕ್ಕೇ ಅಗ್ರಸ್ಥಾನ ಇರತ್ತೆ, ಇರಬೇಕು ಅಂದರೆ ತಪ್ಪೂ ಅಲ್ಲ. ಇವತ್ತಿಗೆ ಹೊಸಕಾಲದ ಸಾಹಿತ್ಯ ಹಲವು ಬಗೆಗಳಲ್ಲಿ ಹೊರಹೊಮ್ಮಿ ಹರಿಯುತ್ತಿದೆ. ಜನ ಇದನ್ನು ಸುಲಭವಾಗಿ ಅರಿತುಕೊಳ್ತಿದ್ದಾರೆ. ಆದರೆ ಹಳೆಯ ಸಾಹಿತ್ಯ ಬಹಳ ಜನರಿಗೆ ನಿಲುಕಲ್ಲ. ಈಗಿನ ಎಷ್ಟೋ ಮಂದಿಗೆ ಅದರಲ್ಲಿ ಏನಿದೆ ಅನ್ನೋದು ಕೂಡ ಗೊತ್ತಿಲ್ಲ.

ಹಳೆಯ ಸಾಹಿತ್ಯ ಮರೆಯಾಗಿರುವ ಮರದ ಬೇರಿನ ಹಾಗೆ. ಇವತ್ತಿನ ಚಿಗುರು, ಹೂವು, ಹಣ್ಣು ನಾವು ಸವಿದರೂ, ಬೇರನ್ನು ಮರೆಯಬಾರದು. ಆ ಸಾಹಿತ್ಯದ ಪರಿಚಯ, ಅಭ್ಯಾಸಗಳಲ್ಲೂ ಜನರ ಆಸಕ್ತಿ ಇರಬೇಕು. ಅದಕ್ಕೆ ತಕ್ಕ ಸಹಾಯವನ್ನ, ಅನೇಕರ ಪಾಂಡಿತ್ಯವನ್ನ ನಮ್ಮ ಸಸಕಸ ವೇದಿಕೆ ಒದಗಿಸಿಕೊಡುತ್ತಾ ಬಹಳ ಯಶಸ್ವೀ ವೇದಿಕೆಯೇ ಆಗಿದೆ. ಹೊಸತು, ಹಳತು ಎರಡೂ ವಿಧಗಳ ವೈವಿಧ್ಯಮಯ ಚಿಂತನೆಗಳ ಆಗರವಾದ ಈ ವೇದಿಕೆಯಲ್ಲಿ ಭಾಗವಹಿಸಲು ನಮಗೆಲ್ಲರಿಗೂ ಸಿಕ್ಕಿರುವ ಅವಕಾಶ ಒಂದು ಮಹಾಭಾಗ್ಯ!

ಇನ್ನು ಇವತ್ತಿನ ಪ್ರಸ್ತುತಿಗಳ ಕಡೆ ಗಮನಹರಿಸೋಣ. ಇವತ್ತಿನ ೧೮ ಪ್ರಸ್ತುತಿಗಳ ಅವಲೋಕನಕ್ಕೆ ೩೦ ನಿಮಿಷ ಬೇಕಾಗುತ್ತೆ. ಎಲ್ಲರ ಪರಿಶ್ರಮಕ್ಕೆ ನ್ಯಾಯ ಒದಗಿಸಿಕೊಡಬೇಕು. ಹಾಗಾಗಿ. ಇವತ್ತಿನ ೧೮ ಪ್ರಸ್ತುತಿಗಳಲ್ಲಿ ೭ ಕವನಗಳು, ೧ ಕೀರ್ತನೆ, ೨ ಲಘು ಬರಹಗಳು, ೩ ಹಾಸ್ಯ ಬರಹಗಳು, ೩ ಕತೆಗಳು, ೧ ಪ್ರವಾಸ ಕಥನ ಮತ್ತು ಒಂದು ಛಂದಸ್ಸಿನ ಅವಲೋಕನ ಇತ್ತು.

ಶ್ರೀ ಕೆ.ಆರ್.ಎಸ್.ಮೂರ್ತಿ

- ಭಾರತೀಯ ವಿಜ್ಞಾನ ಮಂದಿರದಲ್ಲಿ ಮಾಸ್ಟರ್ ಆಫ್ ಇಂಜಿನಿಯರಿಂಗ್ ಪದವಿ ಗಳಿಸಿರುವ ಇವರು ಕವಿ, ಕಥೆಗಾರ, ಕಾದಂಬರಿಕಾರ ಹಾಗೂ ಚಿತ್ರಕಲಾವಿದರಾಗಿದ್ದು, ನಮ್ಮ ವೇದಿಕೆಯ ಸಕ್ರಿಯ ಸದಸ್ಯರು.
- ಹುಟ್ಟೂರು ಹಾಸನ ಜಿಲ್ಲೆಯ ಅರಸೀಕೆರೆ. ಬಾಲ್ಯ ಕಳೆದದ್ದು ಗೊರೂರು ಮತ್ತು ಹಾಸನದಲ್ಲಿ.
- ಇವರು ಸಂಪ್ರದಾಯ ಹಾಡುಗಳ ಗಣಿ ಎಂದೇ ಪ್ರಸಿದ್ಧರಾಗಿದ್ದ ಶ್ರೀಮತಿ ವಾಗೀಶ್ವರೀ ಶಾಸ್ತ್ರಿ ಅವರ ಪುತ್ರ.
- ಬೆಂಗಳೂರಿನ ಐ.ಟಿ.ಐ ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಉಪ ಮುಖ್ಯ ಇಂಜಿನಿಯರ್ ಆಗಿ ಸೇವೆ.
- ಜಪಾನ್ ಸರಕಾರದ ಪ್ರತಿಷ್ಠಿತ ಸ್ಕಾಲರ್‌ಶಿಪ್ ಗಳಿಸಿ ಜಪಾನಿನಲ್ಲಿ ಉನ್ನತ ಸಂಶೋಧನೆ.ಜಪಾನಿನ ಉದ್ದಗಲ ಸಂಚರಿಸಿ ಅವರ ಸಂಸ್ಕೃತಿಯ ಅವಲೋಕನ. ಹಿಂತಿರುಗಿದ ನಂತರ ಮಾಹಿತಿಯುಕ್ತ ಛಾಯಾಚಿತ್ರ (ಸ್ಲೈಡ್ಸ್) ಪ್ರದರ್ಶನ.
- ಹನ್ನೊಂದು ವರುಷ ಅನಿವಾಸಿ ಭಾರತೀಯರಾಗಿ ಸಿಂಗಪೂರಿನ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪೂರ್ ಮತ್ತು ನಾನ್ಯಂಗ್ ಟೆಕ್ನಾಲಾಜಿಕಲ್ ಯೂನಿವರ್ಸಿಟಿಗಳಲ್ಲಿ ಮುಖ್ಯ ಪ್ರಾಚಾರ್ಯರಾಗಿ ಸೇವೆ. ಸಿಂಗಪೂರ ಕನ್ನಡ ಸಂಘದ ಸ್ಥಾಪನೆ ಮತ್ತದರ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರ.
- ಬೆಂಗಳೂರಿಗೆ ಹಿಂತಿರುಗಿದ ನಂತರ ಅನೇಕ ಐಟಿ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ಸೇವೆ.
- ಈವರೆಗೆ ಮೂರು ಕವನ ಸಂಕಲನಗಳು-ಖೇಚರವಿಹಾರ, ನೀಲಗಗನ ಮತ್ತು ಮಿನುಗುತಿದೆ ನಕ್ಷತ್ರ- ಲೋಕಾರ್ಪಣೆ.
- 2018'ರಲ್ಲಿ ತರಂಗ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಇವರ ಕಾದಂಬರಿ- 'ಹವಳದ್ವೀಪದ ಹೊನ್ನು' ಹಾಗೂ ಆಗಿಂದಾಗ್ಗೆ ಹಲವು ಕಥೆಗಳ ಪ್ರಕಟಿತ. ಮತ್ತೊಂದು ವಿಶಿಷ್ಟ ವೈಜ್ಞಾನಿಕ ಕಾದಂಬರಿ 'ವ್ಯೋಮವಿಸ್ಮಯ ಮಂಡಲ' ಸದ್ಯದಲ್ಲಿಯೇ ತರಂಗದಲ್ಲಿ ಪ್ರಕಟಣೆಯ ನಿರೀಕ್ಷೆ.
- ಕಸ್ತೂರಿ ಮಾಸಪತ್ರಿಕೆ ಹಾಗೂ ಹಲವು ಅಂತರ್ಜಾಲದ ಸಾಹಿತ್ಯ ವೇದಿಕೆಗಳಲ್ಲಿ (ನಸುಕು, ಸುರಹೊನ್ನೆ, ಪ್ರತಿಲಿಪಿ ಇತ್ಯಾದಿ) ಕವನಗಳು ಮತ್ತಿತರ ಹಲವು ಸಾಹಿತ್ಯ ಕೃತಿಗಳು ಪ್ರಕಟವಾಗಿವೆ.
- ಚಿತ್ರಕಲೆಯಲ್ಲೂ ಪರಿಣಿತರಾಗಿರುವ ಇವರು ಪೈಂಟಿಂಗ್ಗಳು ಮತ್ತು ಕಲಾತ್ಮಕ ಪೇಪರ್ ಕಟಿಂಗ್‌ಗಳನ್ನು ಪ್ರದರ್ಶಿಸಿರುವರಲ್ಲದೆ, ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳಿಗೆ ಮುಖಪುಟ ವಿನ್ಯಾಸ ಮಾಡಿದ್ದಾರೆ. ಕವನ ಸಂಕಲನಗಳ ಒಳಪುಟದ ಚಿತ್ರಗಳು ಇವರ ಕುಂಚದಿಂದಲೇ ಮೂಡಿವೆ.
- ಸಮನ್ವಯ ಸಮಿತಿ – ಕನ್ನಡವೇ ಸತ್ಯ ವೇದಿಕೆಗಳ ಕಾರ್ಯಕ್ರಮಗಳಲ್ಲಿ ಸದಾ ಸಕ್ರಿಯರಾಗಿರುವ ಇವರು, 'ಸಾಹಿತ್ಯ ಸಿರಿ' ಸಂಚಿಕೆ, ಖೋ ಕಾದಂಬರಿ (ಪಲ್ಲಟ) ಅಭಿಯಾನ, ಶ್ರಾವಣ ಕಥಾ ಅಭಿಯಾನ (೨೦೨೩) ಮತ್ತು ಸಣ್ಣಕತೆಗಳ ಅಭಿಯಾನಗಳಲ್ಲಿ (೨೦೨೪ – "ತುಂತುರು" ಪ್ರಕಟಣೆ) ತಮ್ಮ ಬರಹಗಳನ್ನು ಪ್ರಕಟಿಸಿದ್ದಾರೆ.
- ನಮ್ಮ ವೇದಿಕೆಯ "ತಿಂಗಳ ಬೆಳಕು" ಕಾರ್ಯಕ್ರಮದಲ್ಲಿ "ಸಂಪ್ರದಾಯದ ಹಾಡುಗಳು ಮತ್ತು ಸುಗಮ ಸಂಗೀತ" ಎನ್ನುವ ವೈಶಿಷ್ಟ್ಯಪೂರ್ಣ , ಸಂಶೋಧನಾತ್ಮಕ ಪ್ರವಚನ ನಡೆಸಿಕೊಟ್ಟಿದ್ದಾರೆ.

೧. ಗಣಪತಿ ಹೆಗಡೆ – 'ಉದ್ದಂಡ ಷಟ್ಪದಿ'

ಮೊದಲ ಪ್ರಸ್ತುತಿಯಾಗಿ ಶ್ರೀಯುತ ಗಣಪತಿ ಹೆಗಡೆ ಅವರು ಉದ್ದಂಡ ಷಟ್ಪದಿಯ ಚೌಕಟ್ಟಿನ ಬಗ್ಗೆ ಮಾತನಾಡಿದರು. ಕಾವ್ಯ, ಪುರಾಣಗಳ ಬಗ್ಗೆ ಪಾಂಡಿತ್ಯ ಹೊಂದಿರುವಂತ ಶ್ರೀ ಗಣಪತಿ ಹೆಗಡೆಯವರ ಈ ಲೇಖನ ವಿದ್ವತ್ಪೂರ್ಣವಾಗಿತ್ತು.

ಆರು ಸಾಲುಗಳ, ಒಟ್ಟು ೧೪೪ ಮಾತ್ರೆಗಳ ಉದ್ದಂಡ ಷಟ್ಪದಿಯನ್ನು ಅಷ್ಟೇ ಒಟ್ಟು ಮಾತ್ರೆಗಳ ವಾರ್ಧಕ ಷಟ್ಪದಿಯೊಂದಿಗೆ ತುಲನೆ ಮಾಡಿ ತೋರಿಸಿದರು.

ವಾರ್ಧಕದಲ್ಲಿ:
೫ ಮಾತ್ರೆಗಳ × ೪ ಗಣಗಳ ಮೊದಲ ಎರಡು ಸಾಲು ಆಮೇಲೆ
೫ ಮಾತ್ರೆಗಳ × ೬ ಗಣಗಳು ಮತ್ತು ಗುರು
ಇರುವ ಮೂರನೇ ಸಾಲು.
ಇದೇ ರೀತಿಯಲ್ಲಿ ೪, ೫ ಮತ್ತು ಆರನೇ ಸಾಲುಗಳು ಇರುತ್ತೆ.

ಉದ್ದಂಡದಲ್ಲಿ:
೪ ಮಾತ್ರೆಗಳ × ೫ ಗಣ = ೨೦ ಎರಡು ಸಾಲು
೪×೫ = ೨೦
೪ ಮಾತ್ರೆಗಳ × ೮ ಗಣ + ಗುರು = ೩೨
ಇದೇ ರೀತಿ ಮತ್ತೆ ಮೂರು ಸಾಲು

ಈ ಉದ್ದಂಡ ಷಟ್ಪದಿಯನ್ನು ಕುರಿತು ಒಂದು ಕುತೂಹಲಕರ ಕತೆಯನ್ನು ಕೂಡಾ ಶ್ರೀ ಹೆಗಡೆಯವರು ಮಂಡಿಸಿದರು. ಏಕದಂಡಿ, ದ್ವಿದಂಡಿ, ಹಾಗೂ ತ್ರಿದಂಡಿಯೆಂಬ ಮೂವರು ಚಾಲಾಕಿ ಕವಿಗಳು ರಾಜಾಸ್ಥಾನದಲ್ಲಿ ಬೇರೆ ವಿದ್ವಾಂಸರುಗಳ ಕಾವ್ಯವನ್ನು ಮೂರು ಸಲ ಕೇಳಿದ ಕೂಡಲೇ ಬಾಯಿಪಾಠಮಾಡಿಕೊಂಡು ತಕ್ಷಣ ಹೇಳಿ, 'ಇದನ್ನು ನಾವು ರಚಿಸಿದ್ದು. ನೀವೆಲ್ಲಿ ಕಲಿತಿರಿ... ಎಂದು ಕವಿಗಳಿಗೇ ಸವಾಲು ಹಾಕುತ್ತಿದ್ದರಂತೆ ಎನ್ನುವುದು.

ಈ ವಿಷಯ ರಾಘವಾಂಕನಿಗೆ ತಿಳಿದಾಗ, ಅವನು ಹೊಸ ಬಗೆಯ ಉದ್ದಂಡ ಷಟ್ಪದಿಯಲ್ಲಿ ವೀರೇಶ ಚರಿತ್ರೆ ಮಂಡಿಸಿದಾಗ 'ಏಕದ್ವಿತ್ರಿದಂಡಿ' ಗಳಿಗೆ ಸಾಧ್ಯವಾಗದೇ ಸೋಲೊಪ್ಪಿಕೊಂಡರಂತೆ.
ವೀರೇಶಚರಿತೆಯ ವಸ್ತು – ಉಗ್ರ, ಪ್ರಚಂಡ, ಅಥವಾ ಭಯೋತ್ಪಾದಕ ಎನ್ನುವಂತಹುದಾದ್ದರಿಂದ ಷಟ್ಪದಿಗೆ ಉದ್ದಂಡ ಷಟ್ಪದಿ ಎಂಬ ಹೆಸರು ಬಂದಿರಬಹುದು, ಛಂದಸ್ಸಿನ ಎಂದು ಹೆಸರಿನ ಔಚಿತ್ಯಕ್ಕೆ ಬೆಳಕು ಚೆಲ್ಲಿದ್ದಾರೆ.

ಪಾಂಡಿತ್ಯಪೂರ್ಣ ಲೇಖನವೊಂದರ ಪ್ರಸ್ತುತಿಗಾಗಿ. ಶ್ರೀ ಗಣಪತಿ ಹೆಗಡೆ ಅವರಿಗೆ ಹಾರ್ದಿಕ ಅಭಿನಂದನೆಗಳು.

೨. ಹುವಾಶ್ರೀ – 'ಮೇಕಪ್ ಬಾಕ್ಸ್'

ಶ್ರೀಯುತ ಹುವಾಶ್ರೀ ಅವರು 'ಮೇಕಪ್ ಬಾಕ್ಸ್' ಎನ್ನುವ ಒಂದು ವಿಷಾದಕರ ಕತೆಯನ್ನು ಮಂಡಿಸಿದರು. ಆತ್ಮೀಯವಾದ ಒಡನಾಟವಿದ್ದು ನಾಟಕದ ಖಯಾಲಿ ಇದ್ದ ಮಿತ್ರ ವೆಂಕಟರಮಣ ಎಂಬುವವರಿಗೆ ಮೇಕಪ್ ಬಾಕ್ಸ್ ಇಟ್ಟುಕೊಳ್ಳುವ ಆಸೆ. ಅವರು ಲಿವರ್ ತೊಂದರೆಯಿಂದ ಹಾಸ್ಪಿಟಲ್ ಸೇರಿದಾಗ ಅವರಾಸೆಯನ್ನು ತೀರಿಸೋಣವೆಂದುಕೊಂಡು ಅವರ ಮಿತ್ರ ರಮೇಶ್ ರಾಜಾಮಾರ್ಕೆಟ್ಟಿನಲ್ಲಿ ಒಂದು ಬಿಡಿಬಿಡಿ ಐಟಮ್ಮುಗಳ ಮೇಕಪ್ ಸೆಟ್ ತಯಾರಿಮಾಡಿಸಿ ಕೊಂಡರೆ, ಅದು ಅವರಿಗೆ ಕೊಡುವ ಮುನ್ನವೇ ಅವರು ನಿಧನರಾದದ್ದು ರಮೇಶನಿಗೆ ಬೇಸರದ ಸಂಗತಿ. ಕೊನೆಗೆ ಯಾರಾದರೂ ರಂಗಕರ್ಮಿಗಳಿಗೆ ಅವರ ಹೆಸರಿನಲ್ಲಿ ಇದನ್ನು ಕೊಟ್ಟುಬಿಡಿ ಎಂದು ಅವರ ಹೆಂಡತಿಗೆ ಹೇಳುತ್ತಾನೆ.

ಬದುಕಿನಲ್ಲಿ ಒಮ್ಮೊಮ್ಮೆ ಸಣ್ಣಪುಟ್ಟ ಆಸೆಗಳು ಕೂಡ ನೆರವೇರದೆ ನಾವು ತೆರಳಬಹುದು ಎನ್ನುವ ಕಟು ಸತ್ಯವನ್ನು ತೆರೆದಿಡುವಂತಹ ಪುಟ್ಟ ಮಾರ್ಮಿಕ ಕತೆ. ಪ್ರಸ್ತುತಿಪಡಿಸಿದ ಶ್ರೀಯುತ ಹುವಾಶ್ರೀ ಅವರಿಗೆ ಆತ್ಮೀಯ ಅಭಿನಂದನೆಗಳು.

೩. ಸ್ನೇಹ ಶಶಿಧರ್ – 'ಇಡ್ಲಿ ವಡೆ Vs ಪಿಜ್ಜಾ'

ಶ್ರೀಮತಿ ಸ್ನೇಹ ಶಶಿಧರ್ ಅವರು ಇಡ್ಲಿ-ವಡೆ VS Pizza ಎಂಬ ಹಾಸ್ಯ ಲೇಖನವನ್ನ ಮಂಡಿಸಿದರು. ಇದರಲ್ಲಿ ಅವರು – ಅಪ್ಪನಿಗೆ ಇಷ್ಟವಾಗದ ಪಿಜ್ಜಾ ತಿನ್ನಿಸಿ, ಅವರ ಕೈಲಿ ಅದನ್ನು ಬೈಸೆಕ್ಟ್, ಡೈಸೆಕ್ಟ್ ಮಾಡಿಸಿ, ಅಲ್ಲಿಂದ ಮುಂದಕ್ಕೆ ಇಡ್ಲಿ ಪುರಾಣಕ್ಕೆ ಲಗ್ಗೆಹಾಕಿ ಅದು ಹೇಗಿದ್ದರೆ ಚಂದ, ಹೇಗೆ ತಿಂದರೆ ಚಂದ ಅಂತೆಲ್ಲ ಹೇಳ್ತಾ ವೈವಿಧ್ಯಪೂರ್ಣ ಇಡ್ಲಿಗಳು ಮತ್ತದರ ಆಧುನಿಕ ಅವತಾರಗಳ ಅನಾವರಣ ಮಾಡುತ್ತಾ. ಈ ನವೀಕೃತ ಖಾದ್ಯಗಳು ಕೆಲವರಿಗೆ ಇಷ್ಟ, ಹಳಬರಿಗೆ ಮಾತ್ರ ಕಷ್ಟ ಎಂದೆನ್ನುತ್ತಾ, ಕೊನೆಗೆ ಯಾರಿಗೇ ಆದರೂ ಅವರವರ ಪ್ರಾಂತ್ಯದ ಆಹಾರವೇ ಹೆಚ್ಚು ಸೂಕ್ತ ಎಂದು ಖಾದ್ಯ ಸಂಸ್ಕೃತಿಯನ್ನೂ ಬೋಧಿಸಿ, ಇಡ್ಲಿ ಪುರಾಣವನ್ನು ಸಂಪನ್ನಗೊಳಿಸಿದರು. ನಾವೆಲ್ಲರೂ ಎಂದೆಂದಿಗೂ ಇಡ್ಲಿ-ಚಟ್ನಿ-ಸಾಂಬಾರಿಗೆ ಶರಣಾಗಿರುವವರೇ. ಲಘು ಹಾಸ್ಯ ಪ್ರಬಂಧದ ಮಾದರಿಯ ಲೇಖನ ಪ್ರಸ್ತುತಿಪಡಿಸಿದ ಶ್ರೀಮತಿ ಸ್ನೇಹ ಶಶಿಧರ್ ಅವರಿಗೆ ಹಾರ್ದಿಕ ಅಭಿನಂದನೆಗಳು.

೪. ಪೂರ್ಣಿಮಾ ಭಗವಾನ್ – 'ನಟ ರತ್ನಾಕರ ಮಾ. ಹಿರಣ್ಣಯ್ಯ'

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ನಮಗೆಲ್ಲರಿಗೂ ಚಿರಪರಿಚಿತರಾಗಿರುವಂತಹ ನಟ ರತ್ನಾಕರ ಮಾಸ್ಟರ್ ಹಿರಣ್ಣಯ್ಯ ಅವರ ನಟನಾ ಕೌಶಲ್ಯ, ಭ್ರಷ್ಟಾಚಾರಿಗಳನ್ನು ಧೈರ್ಯದಿಂದ ಎದುರಿಸುವ ಕೆಚ್ಚೆದೆ, ಮತ್ತವರು ತಂದೆಯವರ ಜೊತೆ ರಂಗಪ್ರವೇಶ ಮಾಡಿ ಬೆಳೆದು ನಿಂತ ಪರಿಯನ್ನು ಸೊಗಸಾಗಿ ವರ್ಣಿಸುವ ಲೇಖನ ಓದಿದರು.

ಮಾ. ಹಿರಣ್ಣಯ್ಯನವರ ಜನಪ್ರಿಯ ನಾಟಕಗಳಾವುವು, ಅವರು ಪಡೆದ ಪ್ರಶಸ್ತಿಗಳು ಯಾವ್ಯಾವುವು ಎಂದೂ ತಿಳಿಸಿದರು. ಬಹು ಮುಖ್ಯವಾಗಿ ಅವರ ವ್ಯಕ್ತಿತ್ವ, ಸಾಮಾಜಿಕ ಮತ್ತು ರಾಜಕೀಯ ಕಳಕಳಿ ಈ ಚೌಕಟ್ಟುಗಳಲ್ಲಿನ ಅವ್ಯವಸ್ಥೆ, ಅವ್ಯವಹಾರ, ಲಂಚಕೋರತನ, ಸಲ್ಲದ ಆಟಾಟೋಪ ಇವುಗಳ ಬಗ್ಗೆ ನಿರ್ಭಯವಾಗಿ ನಿಸ್ಸಂಕೋಚವಾಗಿ ಆಕ್ಷೇಪಿಸಿ ತಿದ್ದುಕೊಳ್ಳಿ ಎಂದು ಅವರು ಆಗ್ರಹಿಸುತ್ತಿದ್ದ ಪ್ರವೃತ್ತಿ ಬಗ್ಗೆ ತಿಳಿಸಿಕೊಟ್ಟರು.

ಅವರ ಹಲವಾರು ನಾಟಕಗಳನ್ನು ನಾನೂ ಸಹ ನೋಡಿ ಅವರ ಮಾತಿನ ಮೋಡಿಗೆ ಮಾರುಹೋಗುತ್ತಿದ್ದೆ. ಪ್ರೇಕ್ಷಕರೊಡನೆ ಅವರ ಲೀಲಾಜಾಲ ಸಂವಾದ ಇರುತ್ತಿತ್ತು. ಕನ್ನಡ ನಾಟಕರಂಗದ ಇತಿಹಾಸದಲ್ಲೇ ಮಹತ್ವದ ತಿರುವುಗಳನ್ನು ಕೊಟ್ಟ ಏಕೈಕ ರಂಗಕರ್ಮಿ ಎನ್ನಬಹುದು.

ಇವತ್ತು ಪೂರ್ಣಿಮಾ ಭಗವಾನ್ ಅವರ ಪ್ರಸ್ತುತಿಯಿಂದ ಮತ್ತೊಮ್ಮೆ ಅಭಿಮಾನಪೂರ್ವಕವಾಗಿ, ಗೌರವಪೂರ್ವಕವಾಗಿ ನಾವೆಲ್ಲರೂ ಮಾ. ಹಿರಣ್ಣಯ್ಯನವರನ್ನು ನೆನಪಿಸಿಕೊಳ್ಳುವಂತಾಯಿತು. ಅವರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

೫. ಸಿಂಧು ಹರಿಥಸ್ – 'ಲಕುಮಿಯ ಕರೆ'

ಶ್ರೀಮತಿ ಸಿಂಧು ಹರಿಥಸ್ ಅವರು 'ಲಕುಮಿಯ ಕರೆ' ಅಂತನ್ನೋ ಪುಟ್ಟಕತೆಯೊಂದನ್ನ ಓದಿದರು. ಅದರಲ್ಲಿ ದೀಪಾವಳಿ ಹಬ್ಬದ ಸಂದರ್ಭ. ದೀಪಾವಳಿ ಎಂದರೆ ಮಕ್ಕಳಿಗಾಗಲೀ ಹಿರಿಯರಿಗಾಗಲೀ ಸಂತೋಷ ಸಡಗರಗಳಿಗೆ ಮಿತಿಯಿಲ್ಲ. ತೈಲ-ಅಭ್ಯಂಜನ, ಬಗೆಬಗೆಯ ಖಾದ್ಯ, ದೀಪಾಲಂಕಾರ ಹೀಗೆ...

ಇದರಲ್ಲಿ ಹಬ್ಬದ ಮಾರನೇ ದಿನ ಕಥಾನಾಯಕಿ ದಿವ್ಯಳಿಗೆ ಬರುವ ಒಂದು ದೂರವಾಣಿ ಕರೆಯದೇ ವೈಶಿಷ್ಟ್ಯ! ದಿವಂಗತೆ ಅತ್ತೆ ಲಕ್ಷ್ಮಿ ಎಂಬುವರನ್ನು ಹಬ್ಬದಲ್ಲಿ ಮಿಸ್ ಮಾಡಿಕೊಂಡದ್ದಕ್ಕೆ ಮೂಡಿದ ಲಹರಿ ಎಂದುಕೊಳ್ಳಬಹುದು. ದಿವ್ಯ ಮಲಗಿರುವಾಗ

ವಿಷ್ಣುವಿನ ಪತ್ನಿ ಲಕ್ಷ್ಮಿಯ ಕರೆ ಬರುತ್ತೆ. ಆದರೆ ದಿವ್ಯಳಿಗೆ ಅದು ಅತ್ತೆ ಲಕ್ಷ್ಮಿಯೇ! ತಮಾಷೆಯಂತಹ ಸ್ವಾರಸ್ಯಕರ ಸಂಭಾಷಣೆ ನಡೆಯುತ್ತಿರುವಾಗ ಜೋರಾದ ಪಟಾಕಿ ಸದ್ದಿಗೆ ನಿದ್ದೆ ಮಾಡುತ್ತ ಕನಸು ಕಾಣುತ್ತಿದ್ದ ದಿವ್ಯಳಿಗೆ ಎಚ್ಚರವಾಗಿ ಬಿಡುತ್ತೆ. ನಂತರ ಬೋನಸ್ ಬಂತೆಂಬ ಕರೆ ಜಂಗಮವಾಣಿಯಲ್ಲಿ ಬರುತ್ತೆ! ಅದೇ ಲಕ್ಷ್ಮೀ ಕಟಾಕ್ಷ!

ಎಷ್ಟೋ ವೇಳೆ ನಮ್ಮ ನಿಜ ಜೀವನದ ಘಟನೆಗಳಿಗೆ ಸೂಚನೆಗಳು ಮುಂಚಿತವಾಗಿಯೇ ಯಾವುದಾದರೊಂದು ರೀತಿಯಲ್ಲಿ ಕಾಣಬಂದಿರುತ್ತದೆ. ಅದು ವಿಚಿತ್ರ ಎನಿಸುತ್ತೆ. ಹಾಗೆಯೇ ಈ ಕತೆಯಲ್ಲಿ ಕೂಡ ಕನಸಿನಲ್ಲಿ ಬಂದ ಲಕ್ಷ್ಮಿ ನನಸಾಗಿಯೂ ಬಂದದ್ದು ಎಂದುಕೊಳ್ಳಬಹುದು.

ವಿವರಗಳಲ್ಲಿ ಸಹಜತೆ ಇದ್ದು, ನವಿರಾಗಿ ಮೂಡಿ, ಕತೆಯ ಕೊನೆಯ ಸಾಲುಗಳಲ್ಲಿ ಮೂಡಿದ ಗೋಡೆಯ ಮೇಲಿನ ಕ್ಯಾಲೆಂಡರ್ ಲಕ್ಷ್ಮಿಯ ಹಿತ-ಚೇಷ್ಟೆಯ ನಗುವಿನಂತೆಯೇ ನಮ್ಮಲ್ಲಿಯೂ ಮಂದಹಾಸ ಮೂಡಿಸುವ ಕತೆ. ಸಿಂಧು ಹರಿತಸ್ ಅವರಿಗೆ ಹಾರ್ದಿಕ ಅಭಿನಂದನೆಗಳು.

೬. ಗೌರಿ ಭಟ್ಟ – 'ಸಂಕಷ್ಟದ ವ್ರತ'

ಶ್ರೀಮತಿ ಗೌರಿ ಭಟ್ಟ ಅವರ ಇಂದಿನ ಪ್ರಸ್ತುತಿ "ಸಂಕಷ್ಟದ ವ್ರತ" ಒಂದು ವೈಶಿಷ್ಟ್ಯಪೂರ್ಣ ಲೇಖನ. ವಿಷಯ ಇಂದಿಗೂ ಪ್ರಸ್ತುತವೇ. ಏಕೆಂದರೆ ಉಪವಾಸ – ಎನ್ನುವುದು ವ್ರತದ ಕಾರಣಕ್ಕಾಗೋ ಇಲ್ಲವೇ ಆರೋಗ್ಯಕರ ಎಂಬ ಅಂಗವಾಗಿಯೋ ಪಾಲನೆ ಮಾಡುವವರಿದ್ದಾರೆ. ಬರಹದಲ್ಲಿ ವ್ರತ ಪಾಲನೆಗಳಿಗೆ, ಉಪವಾಸ ಮಾಡೋದಿಕ್ಕೆ ಒಂದು ಶಿಸ್ತು, ನಂಬಿಕೆ ಮತ್ತು ಮನಃಶಕ್ತಿಗಳ ಪಾತ್ರದ ಮುಖ್ಯ ಅನ್ನುವ ಪ್ರತಿಪಾದನೆ ಇದ್ದೇ ಇತ್ತು. ಕಥಾನಾಯಕಿಗೆ ಮಾತ್ರ ಇದರ ಕೊರತೆ!

ಅಲ್ಲಲ್ಲಿ ಬಳಸಿದ ಕೆಲವೊಂದು ಮಾತುಗಳು ಆಕರ್ಷಕವಾಗಿತ್ತು. ಉದಾಹರಣೆಗೆ: ಪ್ರತಿಯೊಬ್ಬರ ದೇಹದಲ್ಲಿ ಪರಮಾತ್ಮ ಇರುತ್ತಾನೆ ದೇಹದಂಡನೆ ಮಾಡಿದರೆ ಅವನಿಗೆ ಅಪಚಾರ ಮಾಡಿದಂತಾಗುತ್ತದಲ್ಲವೇ? ಅನ್ನುವುದು; ಎಲ್ಲರೂ ಪುಣ್ಯ ಸಂಪಾದನೆಗೆ ಮಂತ್ರಾಲಯ, ತಿರುಪತಿಗೆ ಹೋದರೆ ಅಮ್ಮನಿಗೆ ಮನೆಯೇ ಮಂತ್ರಾಲಯ, ಮನಸೇ ದೇವಾಲಯ ಆಗಿತ್ತು ಅನ್ನುವುದು; ವ್ರತಾಚರಣೆಗೆ ಕೆಲವು ಹೊಂದಾಣಿಕೆಗಳನ್ನು ಮಾಡಿಕೊಂಡು ಬಿಟ್ಟಿರುತ್ತಾರೆ. ಅನುಕೂಲ ಸಿಂಧು ಎನ್ನುವಂತೆ ಎಂಬ ಮಾತುಗಳು; ಅಕ್ಕಿ ಹುರಿದು ಮಾಡಿದ ದೋಸೆ, ಇಡ್ಲಿ ಮುಸುರೆ, ಮೈಲಿಗೆ ಅಲ್ಲ. ಅಕ್ಕಿಯನ್ನು ನೀರು ಸೇರಿಸದೇ ತೆಂಗಿನಕಾಯಿ ಹಾಲು ಅಥವಾ ಕಬ್ಬಿನ ಹಾಲಿನಲ್ಲಿ ನೆನೆಹಾಕಿ, ಬೀಸಿ ದೋಸೆ ಮಾಡಿತಿಂದರೆ ದೋಷ ಇಲ್ಲ... ಅಂತನ್ನೋದು.

ಒಟ್ಟಿನಲ್ಲಿ ಮನಶ್ಶುದ್ಧಿ, ದೇಹ ಶುದ್ಧಿಯ ಉಪವಾಸ ವ್ರತಾಚರಣೆ ನನಗೆ ಬಲುಕಷ್ಟ ಅಂತ ತಮ್ಮ ಅನುಭವ ಹಂಚಿ ಕೊಂಡಿದ್ದಾರೆ. ಶ್ರೀಮತಿ ಗೌರಿ ಭಟ್ ಅವರಿಗೆ ಹಾರ್ದಿಕ ಅಭಿನಂದನೆಗಳು.

೭. ವಿಠ್ಠಲ ಇಜೇರಿ – 'ಕಾನ್‌ಸ್ಟಾಂಟಿನೋಪಲ್ ಚರ್ಚ್ ಕತೆ'

ಶ್ರೀ ವಿಠಲ್ ಇಜೇರಿ ಅವರು "ಹಗಿಯಾ ಸೋಫಿಯಾ" – ಅಂತ ಕರೆಯಲ್ಪಡುವ ಕಾನ್‌ಸ್ಟಾಂಟಿನೋಪಲ್ ಬಗೆಗಿನ ಒಂದು ರೋಚಕ ಕತೆಯನ್ನು, ಅಂದರೆ ಅದರ ಇತಿಹಾಸವನ್ನು ಪ್ರಸ್ತುತಿಪಡಿಸಿದರು. ಅನೇಕ ರೀತಿಯ ಲೇಖನಗಳನ್ನು ತಮ್ಮದೇ ಆದ ಶೈಲಿಯಲ್ಲಿ ಬರೆಯುವ ಇವರು ವೇದಿಕೆಯಲ್ಲಿ ಸದಾಕಾಲ ಕ್ರಿಯಾಶೀಲರು. ಇವತ್ತಿನ ಪ್ರಸ್ತುತಿ ಚಿಕ್ಕದಾಗಿ, ಚೊಕ್ಕವಾಗಿ ಮೂಡಿಬಂತು. ಗೊತ್ತಿಲ್ಲದೇ ಇದ್ದ ಮಾಹಿತಿಗಳು ಹೊರಬಂತು.

ಇಲ್ಲಿ ಪ್ರಮುಖವಾದ ಅಂಶ ಗಮನಿಸಿದ್ದು, ನಾವು ಒಳಿತಾಗಲಿ ಎಂದು ಮಾಡೋ ಒಂದೊಂದು ಅಳಿಲು ಸೇವೆಗೂ ಮನ್ನಣೆ, ಆದರಗಳು ಸಿಗುತ್ತೆ. ಅದರಿಂದ ತೃಪ್ತಿ ಅನ್ನೋದು ಸಿದ್ಧವಾಗುತ್ತದೆ ಅಂತ. ಅಂದರೆ ರಾಜ ಚರ್ಚ್ ಕಟ್ಟಿಸಿದ್ದಕ್ಕೆ ತನ್ನ ಹೆಸರು

ಪ್ರಮುಖವಾಗಬೇಕು ಎಂದುಕೊಂಡರೆ ಅದು ಕಣ್ಣು ಕಾಣದ "ಯುಪ್ರೇಸಿಯ" ಎನ್ನುವ ವೃದ್ಧ ವಿಧವೆಯೊಬ್ಬಳ ಹೆಸರಿಗೆ ಬದಲಾಗಿ ಭಗವಂತನಿಗೆ ಅವಳಿಂದ ಈ ಚರ್ಚ್ ಸಮರ್ಪಣೆಯಾಯ್ತು ಎಂದು. ಯಾವ ಕಾರಣಕ್ಕಾಗಿ ಎಂದರೆ ಅವಳು ಕಟ್ಟಡದ ಶಿಲೆಗಳನ್ನು ಹೊರುತ್ತಿದ್ದ ಬಳಲಿದ ಎತ್ತುಗಳಿಗೆ ಹುಲ್ಲು ಹಾಕಿದ ಕಾರಣಕ್ಕಾಗಿ ಅಂತ. "ತಾನೊಂದು ಬಗೆದರೆ ದೈವವಿನ್ನೊಂದು ಬಗೆಯಿತು" ಅಂತಾರಲ್ಲ ಹಾಗೆ.

ಹಗಿಯಾ ಸೋಫಿಯಾ, ಇಸ್ತಾನ್ ಬುಲ್ ನಲ್ಲಿರುವ ವಿಶ್ವದ ಶ್ರೇಷ್ಠ ಸ್ಮಾರಕಗಳಲ್ಲಿ ಒಂದಾಗಿದೆ. ಈ ಬೃಹತ್ ಸ್ಮಾರಕ ಎದ್ದುನಿಲ್ಲುವ ಮೊದಲೇ ಅಂದರೆ ಸುಮಾರು ೨೦೦ ವರುಷಗಳ ಮುಂಚೆಯೇ ಇಲ್ಲಿ ಕಾನ್‌ಸ್ಟಾಂಟೈನ್ ಚಕ್ರವರ್ತಿ ಕಟ್ಟಿಸಿದ ಪ್ರಾಚೀನವಾದ ಒಂದು ಚರ್ಚ್ ಇತ್ತೆಂದು ಇತಿಹಾಸಕಾರರು ಹೇಳುತ್ತಾರೆ. ಅದು ದಾಳಿಗಳಿಂದ ಹಾಳಾಗಿತ್ತಂತೆ. ಅದರ ಪುನರ್ನಿರ್ಮಾಣವನ್ನು ಜಸ್ಟೀಸಿಯನ್ ಕೈಗೆತ್ತಿಕೊಂಡ ಎನ್ನುವುದು ಇತಿಹಾಸ. ಭವ್ಯ ಸುಂದರ – ಹಗಿಯಾ ಸೋಫಿಯಾದ ಗುಮ್ಮಟ, 102 ಅಡಿ ವ್ಯಾಸ ಮತ್ತು 182 ಅಡಿ ಎತ್ತರ ಇದೆ. ಈಗ ಇದು ಯುನೆಸ್ಕೋ ಹೆರಿಟೇಜ್ ಸೈಟ್ ಆಗಿದೆ.

ಉತ್ತಮ ಲೇಖನವನ್ನು ಪ್ರಸ್ತುತಿಮಾಡಿದ ಶ್ರೀ ವಿಠಲ್ ಇಜೇರಿ ಅವರಿಗೆ ಆತ್ಮೀಯ ಅಭಿನಂದನೆಗಳು.

೮. ಗಿರಿಜಾ ರಾಜ್ – 'ಎಲ್ಲರ ಮನೆಯ ದೋಸೆನೂ...'

ಶ್ರೀಮತಿ ಗಿರಿಜಾರಾಜ್ ಅವರು 'ಎಲ್ಲರ ಮನೆ ದೋಸೇನೂ...' ಅನ್ನುವ ಕತೆಯೂ ಆಗಬಹುದು, ಪ್ರಹಸನವೂ ಆಗಬಹುದು... ಆ ತರಹದ ಬರಹವನ್ನು ಪ್ರಸ್ತುತಿಪಡಿಸಿದರು. ಇಲ್ಲಿ ದೋಸೆ ಹೊಯ್ಯುತ್ತಿದ್ದ ಸೊಸೆಗೂ, ಕುಳಿತುಕೊಂಡಿದ್ದ ಅತ್ತೆಗೂ ವಾಗ್ಯುದ್ಧವಾಗುತ್ತಿರುವಾಗ. ಅದು ಮೇಲ್ಪದರದ ಕದನ... ಸೀರಿಯಸ್ ಅಲ್ಲ... ಅನ್ನೋದು ನಂತರದ ಘಟನೆಯಿಂದ ತಿಳಿದು ಬರುತ್ತದೆ. ಮಗುವಿಗೆ ಜ್ವರ ಹೆಚ್ಚಾಗಿ ಮನಸ್ಸುಗಳು ವ್ಯಾಕುಲಗೊಂಡಾಗ, ಹುಸಿ ವೈಮನಸ್ಯ ಎಲ್ಲಾ ಉದುರಿಹೋಗಿ ಎಲ್ಲರ ನಡುವಣ ಆಪ್ತತೆಯ ಒಳಪದರ ತೆರೆದುಕೊಳ್ಳುತ್ತದೆ. ಇದು ಕತೆಯಲ್ಲಿ ಗಮನಿಸಬೇಕಾದ ಅಂಶ. ಇಲ್ಲಿ ಸೊಸೆಗೆ ಅತ್ತೆಯನ್ನು ಹೀಯಾಳಿಸಿದ ಕಾರಣಕ್ಕಾಗಿ ತನ್ನ ಮಗುವಿಗೆ ಜ್ವರ ಹೆಚ್ಚಾಯಿತೆಂಬ ಅಪರಾಧ ಮನೋಭಾವ ಉಂಟಾಗಿ – ಅಂದರೆ ಗಿಲ್ಟ್ ಕಾನ್ಷಿಯಸ್ನೆಸ್ ಬಂದು – ತನ್ನ ತಪ್ಪು ನಡೆ ಮತ್ತು ಮಾತುಗಳ ಅರಿವಾಗುತ್ತದೆ.

ಇಲ್ಲಿ ನುರಿತ ಲೇಖಕಿಯರು ಸಂಸಾರಗಳಲ್ಲಿ ಕಾಣಬರುವ ಸಾಮಾನ್ಯ ಸಂಗತಿಗಳನ್ನು ಒಳಹೊಕ್ಕು ಹೇಗೆ ನೋಡುತ್ತಾರೆ, ಸತ್ಯಾಸತ್ಯತೆಗಳು ಏನಿರುತ್ತವೆ, ಮನಸುಗಳ ಬಲ ಎಷ್ಟೆಷ್ಟು, ಅವು ಎಷ್ಟು ಕ್ಷೀಣ.. ಇದು ಅರ್ಥವಾಗುತ್ತೆ. ಕತೆ ಓದುವಾಗ ಒಂದು ಡೀಪ್ ಡೈವ್ ತೆಗೆದುಕೊಂಡು, ಕತೆಯಲ್ಲಿನ ಮಾತು-ಘಟನೆ-ಸ್ಪಂದನೆಗಳನ್ನು ಗಮನಿಸುತ್ತಾ ಹೋದರೆ ಪಾತ್ರಗಳ ಆಳ, ಅಂತರಾಳ ತೆರೆದುಕೊಳ್ಳುತ್ತದೆ. ಸತ್ಯಸ್ಥಿತಿಗಳ ಅನಾವರಣವಾಗುತ್ತದೆ. ಒಂದು ಒಳ್ಳೆಯ ಕತೆಯನ್ನು ಮಂಡಿಸಿದ ಶ್ರೀಮತಿ ಗಿರಿಜಾರಾಜ್ ಅವರಿಗೆ ಹಾರ್ದಿಕ ಅಭಿನಂದನೆಗಳು.

೯. ಮಾಧುರಿ ಕೃಷ್ಣ – 'ಡ್ರಾಮಾ ಅಥವಾ ಕರ್ಮ'

ಶ್ರೀಮತಿ ಮಾಧುರಿ ಕೃಷ್ಣ ಅವರ 'ಡ್ರಾಮಾ ಅಥವಾ ಕರ್ಮ' ಒಂದು ಚುರುಕಾಗಿ ಸಾಗಿದ ಲವ್ ಸ್ಟೋರಿ! ಸೋದರಳಿಯನಿಗೆ ಅರೇಂಜ್ಡ್ ಮ್ಯಾರೇಜ್ ಮಾಡುವ ಪ್ರಯತ್ನ ವಿಫಲವಾದಾಗ, ಉದಾಸಿಯಾಗಿ ಕುಳಿತಿದ್ದ ಸೋದರತ್ತೆಗೆ ಖುಷಿಯಾಗುವಂತಹ ಸುದ್ದಿ ಸೋದರಳಿಯನಿಂದ. ತನ್ನ ಹೊಸ ಕಂಪನಿಯ ಬಾಸ್ – ಸಮವಯಸ್ಕ ಹೆಣ್ಣು ಎಂದುಕೊಳ್ಳಬಹುದು- ಇವನಿಗೆ ಮಾರುಹೋಗಿ, ಇಬ್ಬರೂ ಪ್ರೇಮ ಸಂಗಾತಿಗಳಾಗಿ, ನಂತರ ಜೀವನ ಸಂಗಾತಿಗಳಾಗಲು ತೆಗೆದುಕೊಂಡ ನಿರ್ಧಾರ ವೇಗವಾಗಿ ಅನಾವರಣವಾಗುತ್ತದೆ. ಚುರುಕಿನ ಸಂಭಾಷಣೆ, ಮೌನದಲ್ಲಿನ ಮಾತುಗಳೇ ಕತೆಯ ಆಕರ್ಷಣೆ. ಇಲ್ಲಿ ಸೋದರತ್ತೆ, ಸೋದರ ಮಾವ ಹೆಣ್ಣು ಹುಡುಕುತ್ತಿದ್ದರೆ, ನೋಡುವ ಶಾಸ್ತ್ರ ಮಾಡುತ್ತಿದ್ದವನ ಇನ್ಸೈಡ್ ಸ್ಟೋರಿಯೇ ಬೇರೆಯಾಗಿಬಿಡುತ್ತೆ. ಇವತ್ತಿನ

ಸಮಾಜದಲ್ಲಿ ಇದು ಸರ್ವೇಸಾಮಾನ್ಯ. ಅವನು ತನ್ನ ಪ್ರೇಮ ಕತೆ ಹೇಳುವಾಗ ಕಣ್ಣುಗಳು ಮಿನುಗುತ್ತಿದ್ದದ್ದೇ ವಿಶೇಷ! ಉತ್ತಮ ಕತೆಯೊಂದನ್ನು ಪ್ರಸ್ತುತಿಪಡಿಸಿದ ಶ್ರೀಮತಿ ಮಾಧುರಿ ಕೃಷ್ಣ ಅವರಿಗೆ ಹಾರ್ದಿಕ ಅಭಿನಂದನೆಗಳು.

೧೦. ಟಿ.ಆರ್. ಉಷಾರಾಣಿ – 'ಪಮ್ಮು ಆದಳೇ ಸ್ಲಿಮ್ಮು'

ಶ್ರೀಮತಿ ಉಷಾರಾಣಿ ಅವರು 'ಪಮ್ಮು ಆದಳೇ ಸ್ಲಿಮ್ಮು....?' ಎನ್ನುವ ಒಂದು ಹಾಸ್ಯಲೇಖನ ಓದಿದರು. ಈ ಸ್ಲಿಮ್ ಆಗಬೇಕು ಅನ್ನೋ ಚಿಂತೆ ಎಲ್ಲರನ್ನೂ ಕಾಡುತ್ತೆ, ಅದರಲ್ಲೂ ಹೆಚ್ಚಾಗಿ ಹೆಂಗಸರನ್ನ. ಆರೋಗ್ಯದ ದೃಷ್ಟಿಯಿಂದ ಅದು ಒಳ್ಳೆಯದೇ!

ಇಲ್ಲಿ ಪಮ್ಮು ಎಂಬ ಗೃಹಿಣಿಯು ಸ್ಲಿಮ್ ಆಗಲು ಪಡುವ ಹರಸಾಹಸಕ್ಕೆ ಅವಳ ಗಂಡ ಪಾಂಡುರಂಗನ ಫಜೀತಿ ಹೇಳತೀರದು (ಪಾಂಡುರಂಗ ಹೆಸರು ಇಷ್ಟವಾಯಿತು. ಯಾಕೆಂದರೆ ಫಜೀತಿಗಳಿಗೆ ಸಿಲುಕುವವರೆಲ್ಲರೂ ಪಾಂಡುರಂಗರೇ). ಖರ್ಚಿನ ಬಾಬ್ತಷ್ಟೇ ಅಲ್ಲದೆ ಅವಳಿಗೆ ಅವನು ಜೊತೆ ಕೊಡಲೇಬೇಕು ಎನ್ನುವ ಹಠ. ಮೊದಲೇ ಸಣಕಲ. ಅವಳ ಪ್ರಾಜೆಕ್ಟ್ನಲ್ಲಿ ನರಪೇತಲನಾದ. ಜೇನುತುಪ್ಪ ನಿಂಬೆರಸದಿಂದ, ಜಾಗಿಂಗ್, ಯೋಗ, ಟ್ರೆಡ್‌ಮಿಲ್, ಸ್ಲಿಮಿಂಗ್ ಟ್ಯಾಬ್ಲೆಟ್ಸ್, ನೇಚರ್ ಕ್ಯೂರ್ ಹೀಗೆ... ಮುಗಿಯದ ಕತೆ. ಇಲ್ಲಿ ಉತ್ಪ್ರೇಕ್ಷೆಯಲ್ಲೇ ಸಹಜತೆ ಇದೆ. ಪ್ರಸಂಗದ ಕೊನೆಯಲ್ಲಿನ ತಿರುವು ಸೊಗಸಾಗಿದೆ. ಮಾಡಿದ್ದೆಲ್ಲಾ ವ್ಯರ್ಥ ಎನ್ನುವಂತಾದರೂ, ಪರಿಣಾಮ ಅರ್ಥಪೂರ್ಣ ಎನಿಸುತ್ತೆ!

ಕೆಲ ಒಳ್ಳೆಯ ಸಾಲುಗಳು:

~ ಮದ್ವೆಗೆ ಮುಂಚೆ ಒಳ್ಳೇ ಐಶ್ವರ್ಯ ರೈ ಥರ ಇದ್ದೋಳು ಈಗ ಪ್ರೀತಿ ಗಂಗೂಲಿ ಆಗಿದ್ದಾಳೆ.
~ ನಾಲ್ಕು ಹೆಜ್ಜೆ ಇಟ್ಟು ಉಸ್ಸಪ್ಪ ಎನ್ನುತ್ತಾಳೆ. ಹಳ್ಳಿಗಾಡಿನ ಬಸ್ಸಿನಂತೆ ನಾನಾ ಸ್ಟಾಪು ಅವಳದು.. ನಾನ್ ಸ್ಟಾಪ್ ಅಲ್ಲ.
~ ಅಲ್ಲಾ ಸಾರ್, ನೀವು ನೋಡಿದರೆ ಮಡಿಕೋಲು ಇದ್ದಹಾಗೆ. ನಿಮ್ಮ ವೈಫ್ ನೋಡಿದರೆ ರಮಡೋಲು.

ಒಂದು ಒಳ್ಳೆಯ ಹಾಸ್ಯ ಲೇಖನ ಪ್ರಸ್ತುತ ಮಾಡಿದ ಶ್ರೀಮತಿ ಉಷಾರಾಣಿ ಅವರಿಗೆ ಹಾರ್ದಿಕ ಅಭಿನಂದನೆಗಳು.

೧೧. ರತ್ನಾ ಮೂರ್ತಿ (ನಾಗರತ್ನ ಸಾಲಗಾಮೆ) – 'ಪನ್ನಾ ದಾಸಿ'

ರತ್ನಾ ಮೂರ್ತಿ ಅವರು ಮೇವಾಡದ ರಜಪೂತ ಮನೆತನದಲ್ಲಿ ನಡೆದ ಘೋರ ಕತೆಯೊಂದನ್ನು ಕಾವ್ಯರೂಪದಲ್ಲಿ ಬಹಳ ಪರಿಣಾಮಕಾರಿಯಾಗಿ ಪ್ರಸ್ತುತಿಪಡಿಸಿದರು. ಈ ರಚನೆ ನನ್ನ ಅವಗಾಹನೆಗೆ ಬಂದಾಗ ಜನಪದ ಲಾವಣಿಯಂತೆ ಓದಿಕೊಂಡೆ. ಬಹಳ ಲಯಬದ್ಧವಾಗಿ, ಹರಿತವಾದ ಪದಗಳ ಸಹಿತ, ಮಾರ್ಮಿಕವಾಗಿ ಮಾಡಿಬಂದ ಕಥನ ಗೀತೆಯಂತೆ ಇತ್ತು. ಇದನ್ನು ಗಮನಿಸಿ ಕೇಳಿಸಿಕೊಂಡರೆ ಯಾರಿಗೇ ಆದರೂ ಕಣ್ಣು ಸಹಜವಾಗಿ ತುಂಬಿಕೊಂಡು ಕಂಠ ಗದ್ಗದಿತವಾಗುತ್ತದೆ... ಅಷ್ಟು ಭಾವನಾತ್ಮಕ ಎನಿಸಿತು.

ರಾಜರ ಆಳ್ವಿಕೆಯ ಕಾಲದಲ್ಲಿ ದ್ವೇಷ, ಅಸೂಯೆ, ಆಸೆಗಳಿಂದುಂಟಾಗುವ ಕಲಹ, ಸಂಚುಗಳು, ಬೆನ್ನಿಗೆ ಚೂರಿ ಹಾಕುವುದು ಸರ್ವೇಸಾಮಾನ್ಯ. ಹಾಗೆಯೇ ಒಂದಲ್ಲ ಒಂದು ಕಾರಣಕ್ಕೆ ತ್ಯಾಗ ಮಾಡಿ ಇತಿಹಾಸ ಸೃಷ್ಟಿ ಮಾಡಿದವರೂ ಇದ್ದಾರೆ. ಪ್ರಸ್ತುತ ಪನ್ನಾದಾಸಿ ಕಥನದಲ್ಲಿ ರಾಜ ರಾಣಾ ಸಿಂಗನ ಹೆಂಡತಿ ರಾಣಿ ಕರ್ಣಾವತಿ ಜೌಹರ್ ಮಾಡಿದ ನಂತರ ಅವಳ ಕೊನೆಯ ಮಗ, ಹಸುಗೂಸಾದ ಉದಯ್ ಸಿಂಗ್, ಪನ್ನಾ ಎಂಬ ಹೆಸರಿನ ದಾಸಿಯ ಆರೈಕೆಯಲ್ಲಿ ಬೆಳೆಯುತ್ತಿರುತ್ತಾನೆ. ಮಗು ಉದಯನ ಚಿಕ್ಕಪ್ಪ ಬನ್ವೀರನಿಗೆ ರಾಜನ ಪಟ್ಟ ಕಸಿದುಕೊಳ್ಳುವ ಆಸೆ. ಉದಯ್ ಬದುಕಿದ್ದರೆ ತನಗೆ ತೊಂದರೆ ಅಂತ ಆತನನ್ನು ಸಾಯಿಸಲು ಪನ್ನಾ ದಾಯಿಯ ಮನೆಗೆ ಬಂದು ಆಕ್ರಮಣ ಮಾಡುತ್ತಾನೆ. ಪನ್ನಾ ದಾಯಿ ಆಗ ಉದಯನನ್ನು ಉಳಿಸಲು ತನ್ನ ಸ್ವಂತ ಮಗ ಚಂದನ್‌ನನ್ನು ಮಂಚದ ಮೇಲೆ ಮಲಗಿಸಿದ್ದ ಕಾರಣ ಆ ಮಗುವಿನ ಬರ್ಬರ ಕೊಲೆಯಾಗುತ್ತದೆ. ಪನ್ನಾ ದಾಯಿಯು ಕೀರತ್ ಎನ್ನುವವನ ಸಹಾಯದಿಂದ ಉದಯ್ನನ್ನು ಬುಟ್ಟಿಯಲ್ಲಿ ಬಚ್ಚಿಟ್ಟು

ರಕ್ಷಿಸಿರುತ್ತಾಳೆ. ಮುಂದೆ ಪಕ್ಕದ ಪ್ರಾಂತ್ಯದಲ್ಲಿ ಬೆಳೆದ ಉದಯ್ ಸೈನ್ಯ ಕಟ್ಟಿ ಬನ್ವೀರನನ್ನು ಸೋಲಿಸುತ್ತಾನೆ. ಉದಯ್ ಸಿಂಹನ ಮಗನೇ ನಮಗೆಲ್ಲ ಪರಿಚಿತನಾದ ರಾಣಾ ಪ್ರತಾಪಸಿಂಹ. ಈ ಕತೆ ರಚನೆಯಲ್ಲಿ ಪ್ರಬುದ್ಧವಾಗಿ ಮೂಡಿದೆ.

ರತ್ನಾ ಮೂರ್ತಿ ಅವರ ಪ್ರತಿಭೆ, ವಿಷಯಾಸಕ್ತಿಗಳ ಬಗ್ಗೆ ವೇದಿಕೆಯವರಿಗೆ ಹೆಚ್ಚಿಗೆ ಹೇಳುವ ಅವಶ್ಯಕತೆಯೇ ಇಲ್ಲ. ಇದೀಗ ತಾನೇ ಅವರ ಸುದೀರ್ಘ ಪರಿಚಯವನ್ನು ಶ್ರೀ ವಿಠಲ್ ಇಜೇರಿಯವರು ಮಾಡಿಕೊಟ್ಟಿದ್ದಾರೆ. ರತ್ನಾ ಅವರ ರಚನಾ ಕೌಶಲ್ಯ, ಪದಗಳ ಆಯ್ಕೆ ಮಣ್ಣಿಗೆ ಹತ್ತಿರವಾಗಿ, ಅಭಿವ್ಯಕ್ತಿ ಎನ್ನುವುದು ಶೋಭಿಸಿ, ಕಥನಕ್ಕೆ, ಭಾವನೆಗಳಿಗೆ ನ್ಯಾಯ ಒದಗಿಸಿಕೊಡುತ್ತದೆ. ಛಂದಸ್ಸಿನ ವಿಚಾರದಲ್ಲಿ ಹೇಳ ಬಹುದಾದರೆ (೪+೪+೪+೪) ಮಾತ್ರಾಗಣಗಳ ಎರಡು ಸಾಲುಗಳು ಮತ್ತು (೨+೪+೨+೪) ಮಾತ್ರಾಗಣಗಳ ಎರಡು ಸಾಲುಗಳು ಇವೆ. ಪ್ರಾಸ, ಅನುಪ್ರಾಸ ಈ ರಚನೆಯಲ್ಲಿ ನಿಚ್ಚಳವಾಗಿ ಕಂಡುಬರುತ್ತೆ.

೧೨. ಶೀಲಾ ಅರಕಲಗೂಡು – ನಾಲ್ಕು ಕವನಗಳು

ಶ್ರೀಮತಿ ಶೀಲಾ ಅರಕಲಗೂಡು ಅವರು ನಾಲ್ಕು ಚಿಕ್ಕ ಕವನಗಳನ್ನು ಮಂಡಿಸಿದರು. ಮೊದಲನೆಯದು, 'ಬಾರೆ ನನ್ನ ಕನ್ನಡ', ಉತ್ಸಾಹ ಲಯದಲ್ಲಿತ್ತು. ಕಾವ್ಯಗುಣಕ್ಕೆ ತಕ್ಕಂತೆ ಅದು ಉತ್ಸಾಹ ತುಂಬಿಕೊಂಡ ರಚನೆಯೇ!

ಕವನ ಬರೆಯಲೆಂದು ಕುಳಿತೆ
ಸವಿದು ಹಳೆಯ ನೆನೆಪನು
ವಿವರವಾಗಿ ಮೂಡಿ ಬಂತು
ನವಿರು ಬರೆಹ ಬರೆದೆನು   ಅಂತಾ ಹೇಳ್ತಾ....

ಅಂದು ನಾನು ಕಲಿಯಲಿಲ್ಲ
ಚೆಂದದಿಂದ ಕನ್ನಡ
ಸಂದು ಹೋಗುತಿಹುದು ಕಾಲ
ಬಂದು ನಿಲ್ಲು ಸಂಗಡ

ಅಂತ ಬರೆದಿದ್ದಾರೆ. ಈ ಸಾಲು ನೈಜತೆಯನ್ನು ತುಂಬಿಕೊಂಡು ನನಗೆ ಬಹಳ ಆಪ್ತವಾಯಿತು. ಹಾಗೆಯೇ ಮುಂದಿನ ಸಾಲಿನ ಕಳಕಳಿಯೂ ಸಹ.

ಬೇಡುತಿಹೆನು ನಾನು ನಿತ್ಯ
ಹಾಡಿ ಕಾಡಿ ದೇವನ
ನೀಡಿ ಹರಸು ವಿದ್ಯೆ ಬುದ್ಧಿ
ತೀಡಿ ತಿದ್ದಿ ಕಂದನ   – ಇದೊಂದು ಉತ್ತಮ ಕವಿತೆ.

ಎರಡನೇ ಕವಿತೆ: 'ಭಾಗ್ಯ' – ತರಳ ವೃತ್ತದಲ್ಲಿದೆ. ನಮ್ಮ ಮೌಲ್ಯಗಳನ್ನು ತೊಲಗಿಸುವ ಚಿಂತನ-ಮಂಥನಗಳ ತೇಜ ಅಥವಾ ಹೊಳಹು ಸಿಗುವುದು ನಮ್ಮ ಭಾಗ್ಯ ಎನ್ನುವಂತಹ ಸಂದೇಶವುಳ್ಳ ಈ ರಚನೆಯ

"ವಿಹಗ ದೃಷ್ಟಿಯೊಳಿಂದ ಮಂಥನ ಮಾಡುತಿದ್ದರೆ ಚಿತ್ತದೊಳ್
ಗಹನ ವಸ್ತುವು ವೇಗದಲ್ಲಿಯೆ ಜೀರ್ಣವಾಗುತ ಮಂಡೆಯೊಳ್
ದಹಿಸಿ ಮೌಢ್ಯವ ನೀಡೆ ತೇಜವ ... ನಮ್ಮ ಭಾಗ್ಯವ
ಕಾಣಿರೈ   – ಎನ್ನುವ ಸಾಲು ಬಹಳ ಚಂದವಾಗಿದೆ.

ಮೂರನೆಯ ಕವನ – 'ಅಪ್ಪ ಅಮ್ಮ', ಮೋದಕ ವೃತ್ತದಲ್ಲಿದೆ. ಇದರಲ್ಲಿ ಅಮ್ಮ-ಅಪ್ಪನ ಮಾತಿಗೆ ಬೆಲೆ, ಗೌರವ ಕೊಡುತ್ತಾ, ಅವರ ಕೆಲಸ-ಕಾರ್ಯಗಳಲ್ಲಿ ಸಹಕರಿಸುತ್ತಾ ಎಲ್ಲರೂ ಮೆಚ್ಚುವಂತಿರಬೇಕು ಎನ್ನುವ ಸಂದೇಶವಿದೆ, ಎಳೆಯರಿಗೆ.

ಕೊನೆಯ 'ನಮ್ಮ ಭೂಮಿ' ಕವನ – ಕುಸುಮ ಮಂಜರಿ ವೃತ್ತದಲ್ಲಿದೆ. ನಮ್ಮನ್ನೊಳಗೊಂಡಂತೆ ಜೀವರಾಶಿಯ ಬದುಕಿಗೆ ಭೂಮಿತಾಯಿಯ ಪಾತ್ರ ಅತ್ಯಂತ ಮಹತ್ವದ್ದು ಎಂದು ಬಿಂಬಿಸುವ ಕವನ. ಭೂತಾಯಿಯ ಅಭಯಕ್ಕೆ ನಾವು ಧನ್ಯ ಮನೋಭಾವ ಹೊಂದಿ ಆ ತಾಯಿಯ ರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತಿರಬೇಕು ಎಂಬ ಆದೇಶವನ್ನು ನೀಡುವ ರಚನೆ.

ನಾಲ್ಕು ಸುಂದರ, ಮಧುರ ಕವನಗಳನ್ನು ಉಣಬಡಿಸಿದ ಶೀಲಾ ಅರಕಲಗೂಡು ಅವರಿಗೆ ಹಾರ್ದಿಕ ಅಭಿನಂದನೆಗಳು.

೧೩. ವೆಂಕಟೇಶ ಕಾಮತ್ – 'ನನ್ನಪ್ಪನ ಸೆಂಟಿನರಿ'

ಶ್ರೀ ವೆಂಕಟೇಶ ಕಾಮತ್ ಅವರ 'ನನ್ನಪ್ಪನ ಸೆಂಟಿನರಿ' ಎಂಬ ಲೇಖನ ಪ್ರಸ್ತುತಿಪಡಿಸಿದರು. ಅಪ್ಪ ಅಮ್ಮ ಎಂದರೆ ಎಲ್ಲರಿಗೂ ಪ್ರೀತಿಪಾತ್ರವಾದಂತಹ ವ್ಯಕ್ತಿಗಳಾಗಿರುತ್ತಾರೆ. ಒಂದು ರೀತಿಯ Role Model ಗಳಂತೆ ಎನ್ನಬಹುದು. ಇದು ನಿಜಕ್ಕೂ ನಮ್ಮ ಸಂಸ್ಕೃತಿಯ ಬಳುವಳಿ. ನಮ್ಮ ಹಿರಿಯರು ಕಷ್ಟಜೀವಿಗಳಾದರೂ, ಸುಖ, ಸಂತೃಪ್ತಿ ನಿಚ್ಚಳವಾಗಿ ಇರುತ್ತಿತ್ತು. Some kind of Saara ಇರುವುದೇ ಸಂಸಾರ ಎಂದು ಎಲ್ಲವನ್ನೂ ನಿಭಾಯಿಸಿ, ಮಕ್ಕಳಿಗೆ ಮಾರ್ಗದರ್ಶಕರಾಗುತ್ತಿದ್ದರು. ಪ್ರೀತಿಪಾತ್ರರಾಗುತ್ತಿದ್ದರು. ಇದೇ ಸಾರಾಂಶವನ್ನು ವೆಂಕಟೇಶ ಕಾಮತರು ಅವರ ಅಪ್ಪನ ಬಗ್ಗೆ ಬರೆಯುತ್ತಾ ದಿನ ನಿತ್ಯದ ಸರಳತೆಗಳನ್ನು ತೆರೆದಿಡುತ್ತಾ ಅಪ್ಪನೊಡನೆ ಬರಹದ ಮೂಲಕ ಮತ್ತೆ ಬದುಕುತ್ತಾರೆ. ಹಾಲು ಉಕ್ಕದಂತೆ ಹಾಲು ಕಾಸುವುದು, ಬಟ್ಟೆ, ಪಾತ್ರೆ ಜೋಡಿಸುವುದು, ಕತೆ ಹೇಳವುದು, ಸ್ನಾನಕ್ಕೆ ನೀರು ಸ್ಟೌನಲ್ಲಿ ಕಾಸುವುದು, ಟಿವಿಯಲ್ಲಿ ಅದಾಲತ್ ನೋಡಿ ವಿಶ್ಲೇಷಿಸಿ ಆನಂದಿಸುವುದು... ಇತ್ಯಾದಿ ಸಿಂಪಲ್ ನೆನಪುಗಳಿಂದಲೇ ಅಪ್ಪನನ್ನು ಆರಾಧಿಸುತ್ತ ಗೌರವಪೂರ್ಣ ಬರಹ ಮಂಡಿಸಿದ್ದಾರೆ. ಬರಹದಲ್ಲಿ ಆಪ್ತತೆ ಬಹಳವಾಗಿ ತೋರ್ಪಡುತ್ತದೆ. ಉತ್ತಮ ಬರಹವೊಂದರ ಪ್ರಸ್ತುತಿಗಾಗಿ ಶ್ರೀ ವೆಂಕಟೇಶ ಕಾಮತರಿಗೆ ಆತ್ಮೀಯ ಅಭಿನಂದನೆಗಳು.

೧೪. ರಾಧಿಕಾ ಗುಜ್ಜರ್ – 'ಸ್ವಾತಂತ್ರ್ಯ'

ಶ್ರೀಮತಿ ರಾಧಿಕಾ ಗುಜ್ಜರ್ ಅವರು "ಸ್ವಾತಂತ್ರ್ಯ" ಎಂಬ ಶೀರ್ಷಿಕೆಯ ಕತೆಯನ್ನು ಬಹಳ ಪಕ್ವವಾದ ರೀತಿಯಲ್ಲಿ, ಗಂಭೀರವಾಗಿ ಹೇಳುತ್ತಾ ಸಾಗಿ, "ಅಪ್ಪ" ಎನ್ನಿಸಿಕೊಂಡವನ ಬದುಕು ಹೇಗೆ ಸಾಗಿತು, ಹೆಂಡತಿ ದೂರವಾದ ಮೇಲೆ ಆತನ ಮನಸ್ಸು ಹೇಗೆ ಬದಲಾಯಿತು, ಮಗಳ ಬಗ್ಗೆ ಅವನ ಕಾಳಜಿ ಹೇಗಿತ್ತು, ಮಗಳಿಗೆ ಅವನು ಕೊಟ್ಟ ಉಪದೇಶವೇನು – ಇವೆಲ್ಲವನ್ನೂ ಕುತೂಹಲ ಹುಟ್ಟಿಸುವ ರೀತಿಯಲ್ಲಿ ಹೇಳುತ್ತಾ ಸಾಗಿ, ಕೊನೆಯಲ್ಲಿ ಕೊಡುವ ತಿರುವು ಅತ್ಯಂತ ಪರಿಣಾಮಕಾರಿ ಎನಿಸಿತು. ಅವರು ಸ್ವಾತಂತ್ರ್ಯ – ಇಲ್ಲಿ ಯಾರಿಗೆ, ಎಷ್ಟು, ಯಾವ ವಿಧದಲ್ಲಿ, ಹೇಗೆ? ಎಂಬೆಲ್ಲ ಪ್ರಶ್ನೆಗಳೆನ್ನೆತ್ತಿ, ಕಾಣೆಯಾಗಿದ್ದ ಕಬ್ಬಿಣದ ಪೆಟ್ಟಿಗೆಯಲ್ಲಿ ತನ್ನ ಅಮ್ಮನ ಅವಶೇಷ ಕಾಣುವ ಮೂಲಕ ತನ್ನ ಅಪ್ಪ ಕೊಲೆಗಾರನಾಗಿದ್ದನೇ? ಎಂಬ ಪ್ರಶ್ನೆಯಲ್ಲೇ ಉತ್ತರವನ್ನಡಗಿಸಿ, ಚಮತ್ಕಾರಭರಿತ ಕತೆಯನ್ನು ನಮಗೆ ಉಣಬಡಿಸಿದರು. ಇಲ್ಲಿ ಓದುಗ/ಕೇಳುಗ ಆಳವಾದ ಗಂಭೀರ ಚಿಂತನೆಗೆ ಒಳಗಾಗುವಂತೆ ಮಾಡಿದ್ದಾರೆ. ಸಣ್ಣ ಕತೆಯ ಪರಿಧಿಯಲ್ಲಿ "ಸ್ವಾತಂತ್ರ್ಯ" ಎಂಬ ಪದದ, ಅದರ ಸ್ಥಿತಿಯ ಸಂಕೀರ್ಣತೆಯ ಬಗ್ಗೆ ಚಿಂತಿಸುವಂತೆ ಮಾಡಿದ್ದಾರೆ. ಕತೆ ಮಾರ್ಮಿಕವಾಗಿಯೂ ಯಶಸ್ಸು ಕಾಣುತ್ತದೆ. ಓದುಗರ ಮನಸಿನಲ್ಲಿ ನಾಟಿ ನಿಲ್ಲುತ್ತದೆ. ಕತೆಗಳು ಈ ರೀತಿ ಇದ್ದರೆ ಚೆನ್ನ ಎನ್ನುವ ಭಾವನೆ ಕೊಡುತ್ತದೆ. ಶ್ರೀಮತಿ ರಾಧಿಕಾ ಗುಜ್ಜರ್ ಅವರಿಗೆ ಆತ್ಮೀಯ ಅಭಿನಂದನೆಗಳು.

೧೫. ಪ್ರಮೋದಾ ಮೂರ್ತಿ – 'ಫ್ರಾನ್ಸಿನ ಪುರಾತನ ಧಾಮ ಮಾಂಟ್ ಸೆಂಟ್ ಮಿಷಲ್'

ಶ್ರೀಮತಿ ಪ್ರಮೋದಾ ಮೂರ್ತಿ ಅವರು ತಮ್ಮ ಎಂದಿನ ಸರಾಗವಾದ ಶೈಲಿಯಲ್ಲಿ ಸ್ವಾನುಭವದ ಪ್ರವಾಸ ಕಥನವೊಂದನ್ನು ಪ್ರಸ್ತುತಿಪಡಿಸಿದರು. ಇದರಲ್ಲಿ ಒಂದು ಸಾವಿರ ವರುಷಗಳಿಗೂ ಹಳೆಯ ಸಮುದ್ರ ತಟದ ಅಬೆ ಅಥವಾ ಕ್ರಿಶ್ಚಿಯನ್ ಮೊನಾಸ್ಟರಿ – ಅಂದರೆ ಮಾಂಕ್ಸ್ ಮತ್ತು ನನ್ಸ್ ಗಳಿರುವ ಸ್ಥಳದ ಬಗ್ಗೆ – ಬಹಳ ಕುತೂಹಲಕರ ಮಾಹಿತಿಗಳನ್ನು ನಮ್ಮ ಮುಂದಿಟ್ಟರು. ಉತ್ತರ ಫ್ರಾನ್ಸಿನ ಈ ಪ್ರವಾಸದಲ್ಲಿ ನಾನೂ ಸಹ ಅವರೊಂದಿಗೆ ಭಾಗಿಯಾಗಿದ್ದೆ.

ಶತಶತಮಾನಗಳ ಹಿಂದೆ ತಂತ್ರಜ್ಞಾನ ಅನ್ನೋದು ಅಷ್ಟಕ್ಕಷ್ಟೇ. ಆದರೆ ಉತ್ಕೃಷ್ಟ ವಿನ್ಯಾಸ ಜ್ಞಾನವನ್ನು ಬಳಸಿಕೊಂಡು ಹುಚ್ಚೆದ್ದು ಏಳುವ ನೀರಿನ ಅಲೆಗಳ ಮಧ್ಯದಲ್ಲಿ ಎತ್ತರವಾಗಿ, ಸುಂದರವಾಗಿ, ಭವ್ಯವಾಗಿ, ಇಂದಿಗೂ ಸುಭದ್ರವಾಗಿರುವ ಕಟ್ಟಡವನ್ನು ಊರುಗಳಿಂದ ಎಲ್ಲೋ ದೂರದಲ್ಲಿ ಕಟ್ಟುವುದೆಂದರೆ ಅಚ್ಚರಿಯ ಸಂಗತಿಯೇ ಸರಿ.

ಈ ಅಬೆ ಅಥವಾ ಮೋನಾಸ್ಟರಿ, ಕಾಲಕಾಲದಲ್ಲಿ ಹಲವಾರು ರಾಜಪಂಗಡಗಳ, ರಾಜಕೀಯ ಗುಂಪುಗಳ ಆಕ್ರಮಣಕ್ಕೊಳಗಾಗಿ, ವಿವಿಧ ಉದ್ದೇಶಗಳಿಗೆ ಬಳಕೆಯಾಗಿದೆ. ಒಂದು ಕಾಲದಲ್ಲಿ ಜರ್ಮನರು ಅದನ್ನು ಜೈಲಿನಂತೆ ಬಳಸಿದ್ದರು ಎಂಬ ಮಾಹಿತಿಗಳೂ ಇವೆಯಂತೆ. ಒಟ್ಟಿನಲ್ಲಿ ಇದೊಂದು ವೈಶಿಷ್ಟ್ಯಗಳನ್ನೊಳಗೊಂಡ ಕ್ರಿಶ್ಚಿಯನ್ ಧಾರ್ಮಿಕ ಕ್ಷೇತ್ರ. ಆಕರ್ಷಕ ತಾಣ. ಸದಾಕಾಲ ಜಗತ್ತಿನ ಮೂಲೆ ಮೂಲೆಗಳಿಂದ ಬರುವ ಪ್ರವಾಸಿಗಳಿಂದ ತುಂಬಿರುತ್ತದೆ.

ಪ್ರಮೋದಾ ಮೂರ್ತಿ ಅವರ ಬರವಣಿಗೆಯಲ್ಲಿ ಆಡಂಬರಗಳಿಲ್ಲದ ಆಪ್ತತೆ ಮತ್ತು ಔಚಿತ್ಯ ಕಂಡುಬಂದು ಓದುಗರ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತದೆ. ಮಾಹಿತಿ ಪೂರ್ಣವಾದ ಚಂದ ಎನಿಸುವ ಲೇಖನವೊಂದರ ಪ್ರಸ್ತುತಿಗೆ ಶ್ರೀಮತಿ ಪ್ರಮೋದಾ ಮೂರ್ತಿ ಅವರಿಗೆ ಹಾರ್ದಿಕ ಅಭಿನಂದನೆಗಳು.

೧೬. ಮಾಲತಿ ಶ್ರೀನಿವಾಸನ್ – ಎರಡು ಕವನಗಳು

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಎರಡು ಕವನಗಳನ್ನು ವಾಚನ ಮಾಡಿದರು. ಮೊದಲ ಕವನ – 'ಸ್ವಲ್ಪ ನಿಧಾನಿಸು ಕಾಲ'. ಕಾಲ ಎನ್ನುವ ತಿರುಗಣೆಯ ಚಕ್ರ ಎಂದಿದ್ದರೂ ರಭಸವೇ. ಅದು ನಿಧಾನ ಎನಿಸುವುದು ಅಪರೂಪ. ಚಲನೆ, ಕರ್ಮ ಬಾಳಿನಲ್ಲಿ ಅನಿವಾರ್ಯ. ಅಲ್ಲದೆ ಜಡತೆಯಲ್ಲಿ ಸೊಗಸೇನಿದೆ. ನಮ್ಮ ಪಾಲಿಗೆ ಬಂದದ್ದನ್ನು ಅನುಭವಿಸುತ್ತಾ, ಸುಖ, ಸಂತಸವನ್ನು ನಮ್ಮ ಒಡನಾಟದೊಡನೆ ಅರಸುತ್ತಾ ಸಾಗುವುದು ಗುರಿ. ಆದರೆ ಆ ಆಸ್ವಾದನೆ ಕ್ಷಣಿಕವಾಗದೇ, ತೃಪ್ತಿ ಹೆಚ್ಚಾಗಿ ಲಭಿಸುವಂತೆ ಕಾಲ ಸಹಕರಿಸಬೇಕು. ಅದಕ್ಕಾಗಿ ತ್ವರೆ ಯಾಕೆ ಮಾಡುತ್ತೀ, ಸ್ವಲ್ಪ ನಿಧಾನಿಸು ಎನ್ನುವ ಸಂದೇಶ ಹೊತ್ತ ಕವನ.

ಎರಡನೆಯ ಕವನ– 'ಬೆಳ್ಳಿ ಹಬ್ಬ' ಅಂತ. ಅದು ಅವರ ಬಡಾವಣೆಗೆ ೨೫ ವರುಷ ತುಂಬಿದ ಸಂದರ್ಭ. ರಾಜ್ಯೋತ್ಸವವೂ ಜೊತೆಗೆ ಸೇರಿ ಹೆಚ್ಚಿನ ಸಂಭ್ರಮ. ಸುತ್ತಲೂ ಹಸಿರಿನ ಪರಿಸರ. ನೆರೆಹೊರೆಯವರೊಡನೆ ಚೇತೋಹಾರಿ ಒಡನಾಟ. ಮನಸ್ಸಿಗೆ ಹಿತ ಕೊಡುವಂತಹುದು. ಆಗ ತುಂಬಿಕೊಂಡ ಭಾವನೆಗೆ ಜೀವ ತುಂಬುವ ರಚನೆಯೇ ಅವರ ಬೆಳ್ಳಿ ಹಬ್ಬ ಕವನ.

ಎರಡೂ ರಚನೆಗಳ ಕಲ್ಪನೆ ಭಾವನೆಗಳಲ್ಲಿ ಸಹಜತೆ ಇದ್ದು, ಎರಡೂ ಚೆನ್ನಾಗಿತ್ತು. ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರಿಗೆ ಹಾರ್ದಿಕ ಅಭಿನಂದನೆಗಳು.

೧೭. ಜಿ.ವಿ. ಅರುಣ – ರಾಜ್ ಕಪೂರ್ – ರಷ್ಯ – ಕೆಂಪುಟೋಪಿ

ಶ್ರೀಯುತ ಜಿ ವಿ ಅರುಣ ಅವರು ರಾಜ್ ಕಪೂರನ ಕೆಂಪು ಟೋಪಿಯ ಬಗ್ಗೆ ಒಂದು ಉಲ್ಲಾಸ ತುಂಬಿಕೊಡುವಂತಹ, ಮಧುರ ಭಾವನೆಯನ್ನು ತರುವಂತಹ ಸ್ವಾರಸ್ಯಕರ ಲೇಖನವನ್ನು ಓದಿದರು. ಭಾರತ ರಷ್ಯಾ ದೇಶಗಳ ನಡುವಣ ಸ್ನೇಹ ಎಲ್ಲರಿಗೂ ತಿಳಿದದ್ದೇ. ಅದು ವ್ಯಾವಹಾರಿಕವಾಗಿ ಬಹಳ ಬಲಯುತವಾಗಿದೆ ಎನ್ನುವುದು. ಅಲ್ಲಿನ ಜನರು ನಮ್ಮ ಭಾರತೀಯರನ್ನು ಮತ್ತು ಭಾರತೀಯ ಸಂಸ್ಕೃತಿಯನ್ನು ಬಹಳ ಗೌರವಿಸುತ್ತಾರೆ. ಅದಕ್ಕೆ ರಾಜ್ ಕಪೂರ್ ಅವರ ಸಿನೆಮಾಗಳೂ ಸಹ ಒಂದು ಮುಖ್ಯ ಕಾರಣ. ಅವರ ಚಿತ್ರಗಳ ಹಾಡುಗಳನ್ನು "ಆವಾರಾ ಹೂ" ಇತ್ಯಾದಿ ಅಲ್ಲಿನ ಜನ ಇಂದಿಗೂ ಗುನಗುನಿಸುತ್ತಾರೆ. ನಮ್ಮಂತೆಯೇ

ಅವರ ಮೇರಾ ಜೂತಾ ಹೇ ಜಾಪಾನಿ, ಏ ಪತ್ಲುನ್ ಇಂಗ್ಲಿಷ್ಥಾನಿ, ಸರ್ ಪೆ ಲಾಲ್ ಟೋಪಿ, ಫಿರ್ ಭಿ ದಿಲ್ ಹೇ ಹಿಂದುಸ್ಥಾನಿ... ಹಾಡಿನ ಲಾಲ್ ಟೋಪಿಗೆ, ರಷ್ಯನ್ನರ ಭಾವನಾತ್ಮಕ ಸಂಬಂಧ ಹೇಗೆ ಕೂಡಿಕೊಂಡಿತು, ಎರಡೂ ದೇಶಗಳ ಬಾಂಧವ್ಯಕ್ಕೆ ಹೇಗೆ ಹೆಚ್ಚಿನ ಮಹತ್ವ ಸಿಕ್ಕಿತು ಅನ್ನೋದನ್ನ ಬಹಳ ವಿವರವಾಗಿ ಚೆನ್ನಾಗಿ ಮಂಡಿಸಿದರು. ಅಂದ್ರೆ ಇತರ ರೀತಿಯ ಅನೇಕ ಮಾಹಿತಿಗಳನ್ನು ಸಹ ತಿಳಿಸಿಕೊಟ್ಟರು.

ನಾವೂ ಸಹ ಚಿಕ್ಕ ವಯಸ್ಸಿನಲ್ಲಿ ರಾಜ್ ಕಪೂರ್ ಅವರ ಚಿತ್ರದ ಹಾಡಗಳನ್ನು ಗುನುಗುತ್ತಿದ್ದೆವು. ರಾಜಕಪೂರರ ಜನ್ಮ ಶತಾಬ್ದಿಯ ಸಮಯದಲ್ಲಿ ಸೂಕ್ತ ಗೌರವ ಸಲ್ಲಿಸುವಂತೆ, ಸವಿನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿದ ಒಂದು ಸುಂದರ ಲೇಖನ. ಪ್ರಸ್ತುತಿಗಾಗಿ ಶ್ರೀ ಜಿ.ವಿ.ಅರುಣ ಅವರಿಗೆ ಆತ್ಮೀಯ ಅಭಿನಂದನೆಗಳು.

೧೮. ಮಂಜುನಾಥ ಎಸ್ (ಹಿಮನಾಥ) – 'ಶ್ರೀ ಪ್ರಸನ್ನ ವೆಂಕಟದಾಸರ – ಎಂಥಾ ಶ್ರೀಮಂತನಂತಾನೋ'

ಶ್ರೀ ಮಂಜುನಾಥ ಅವರು ಪ್ರಸನ್ನ ವೆಂಕಟದಾಸರ 'ಎಂಥಾ ಶ್ರೀಮಂತನಂತಾನೋ' ಕೀರ್ತನೆಯ ಅವಲೋಕನವನ್ನು ಮಂಡಿಸಿದರು. ಮೊದಲಿಗೆ ಪ್ರಸನ್ನವೆಂಕಟದಾಸರ ಸಾಹಿತ್ಯ ಸಾಧನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಕೊಟ್ಟು ಅವರ "ಎಂಥಾ ಶ್ರೀಮಂತನಂತಾನೋ" ಕೃತಿ ಹೇಗೆ ಬಹಳ ಜನಪ್ರಿಯವಾಯ್ತು ಎಂದು ತಿಳಿಸಿಕೊಟ್ಟರು.

ಮೂಲ ಕೀರ್ತನೆ ಕ್ಲಿಷ್ಟಕರ ಒತ್ತಕ್ಷರಗಳನ್ನೊಳಗೊಂಡ ಒಂದು ಪ್ರಬುದ್ಧ ರಚನೆ. ಕೆಲ ಪದಗಳಿಗೆ ಅರ್ಥ ಸುಲಭಕ್ಕೆ ನಿಲುಕದು. ಅದಕ್ಕೆ ಶ್ರೀ ಅನಂತ ಕುಲಕರ್ಣಿ ಅವರ ಅರ್ಥೈಕೆ ನೀಡಿ, ತಾವೇ ಸುಲಭ ಕನ್ನಡದಲ್ಲಿ ರಚಿಸಿದ ಚರಣಗಳನ್ನು ಉಣಬಡಿಸಿದರು. ಇದು ಖಂಡಿತವಾಗಿ ಶ್ಲಾಘನೀಯ ಕೌಶಲ್ಯ. ಶ್ರೀ ಹಿಮನಾಥ ಅರ್ಥಾತ್ ಮಂಜುನಾಥರ ಕಾವ್ಯಸಾಧನೆ ನಮಗೆಲ್ಲರಿಗೂ ಪರಿಚಯವಿದ್ದೇ ಇದೆ. ಒಂದು ಸಾರ ಸಂಪೂರ್ಣತೆಯ ಪ್ರಸ್ತುತಿ ಮಾಡಿದ ಶ್ರೀ ಮಂಜುನಾಥ ಅವರಿಗೆ ಆತ್ಮೀಯ ಅಭಿನಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 232 ನಡೆದ ದಿನಾಂಕ: 14 ಡಿಸೆಂಬರ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 22 ಫೆಬ್ರವರಿ 2025 – ಶನಿವಾರ

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)

ಶ್ರೀ ಪ್ರಸನ್ನ ವೆಂಕಟದಾಸರ ರಚನೆ – "ಎಂತಾ ಶ್ರೀಮಂತನಂತಾನೋ" ಒಂದು ಅವಲೋಕನ

– ಎಸ್. ಮಂಜುನಾಥ (ಹಿಮನಾಥ)

ಶ್ರೀ ಪ್ರಸನ್ನ ವೆಂಕಟದಾಸರ ಕಾಲ ಕ್ರಿಶ ೧೬೮೦-೧೭೫೨, ಜನ್ಮ- ಬಾಗಲಕೋಟೆ
ರಚನೆಗಳು : ಸುಮಾರು ೪೦೦ ಕೀರ್ತನೆಗಳು , ೨೦ ಉಗಬೋಗಗಳು ೯ ಸುಲಾದಿಗಳು , ಮುಂಡಿಗೆಗಳು, ಭಗವದ್ಗೀತೆಯ ದಶಮಸ್ಕಂದವನ್ನು ಹಾಡಿನ ರೂಪದಲ್ಲಿ ಕನ್ನಡದ ರಚನೆ.

ಇತ್ತೀಚೆಗೆ ೨೦೨೩ರಲ್ಲಿ ಪ್ರಭಂಜನ ದೇಶಪಾಂಡೆಯವರ ಅದ್ಭುತ ನಟನೆ, ಅನಂತ ಕುಲಕರ್ಣಿಯವರ ಮಧುರ ಗಾಯನ, ಮಧುಸೂಧನ ಹವಾಲ್ದಾರ್ ಅವರಿಂದ ನಿರ್ದೇಶಿಸಲ್ಪಟ್ಟು ಚಲನಚಿತ್ರವಾಗಿ ತೆರೆಕಂಡಿತು. ಅ ಚಿತ್ರದ ಎಂಥಾ ಶ್ರೀಮಂತಾನೋ ಕೀರ್ತನೆ ಅತ್ಯಂತ ಜನಪ್ರಿಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಆ ಕೀರ್ತನೆಯ ಕ್ಲಿಷ್ಟ ಪದಗಳನ್ನು ಸುಲಲಿತವಾಗಿ ಸರಳ ಕನ್ನಡದಲ್ಲಿ ತಿಳಿಸುವ ಪ್ರಯತ್ನವಿದು.

ಎಂಥಾ ಶ್ರೀಮಂತಾನಂತನೋ ಶ್ರೀಕಾಂತೆಯ ಕಾಂತ ಎಂಥಾ ಶ್ರೀಮಂತಾನಂತನೋ	ಕನ್ನಡಕೋಶ ಜಾಲತಾಣ ಶ್ರೀ ಅಜಿತ್ ಕುಲಕರ್ಣಿಯವರ ಅರ್ಥ ವಿವರಣೆ	ಎಂಥಾ ಶ್ರೀಮಂತಾನಂತನೋ ಶ್ರೀಕಾಂತೆಯ ಕಾಂತ ಎಂಥಾ ಶ್ರೀಮಂತಾನಂತನೋ
ಬೊಮ್ಮನು ಹೆಮ್ಮಗ ಮೊಮ್ಮಮ್ಮಥರಿ ಮೊಮ್ಮಗಶಣ್ಮಶಿರಮ್ಮ ಪರಮ್ಮ ಅಮ್ಮರಸಮ್ಮೋಹ ನಿಮ್ಮಣುಗಮ್ಮರು ನಮ್ಮೊ ನಮ್ಮ ಪರಮ್ಮ ಮಹಿಮ್ಮ ‖	ಅರ್ಥ: ಬೊಮ್ಮನು ಹೆಮ್ಮಗ = ಚತುರ್ಮುಖ ಬ್ರಹ್ಮನು ಹಿರಿಯಮಗ, ಸೃಷ್ಟಿಯಾದಿಯಲ್ಲಿ ಪರಮಾತ್ಮನ ಕಮಲನಾಭದಿಂದ ಹೊರಹೊಮ್ಮಿದ ಚೊಚ್ಚಲ ಮಗ ಹಿರಿಯಚೇತನರಲ್ಲಿ ಹಿರಿಯನಾದ ಬ್ರಹ್ಮ, ಮೊಮ್ಮಮ್ಮೃಢ : ಚತುರ್ಮುಖನ ಮಗನಾಗಿ ರುದ್ರನ ಹುಟ್ಟು, ಅದಕ್ಕೆ ರುದ್ರನ ಅಜ್ಜ ಹರಿ, ರುದ್ರ ಹರಿಗೆ ಮೊಮ್ಮಗ, ಮರಿಮೊಮ್ಮಗಶಣ್ಮಶಿರ : ರುದ್ರನ ಮಗನಾದ ಷಣ್ಮುಖ (ಷಟ್+ಶಿರ) ಮೊಮ್ಮಗನ ಮಗ = ಮರಿಮೊಮ್ಮಗ, ಪರಮ್ಮ = ಪರಮ ಉತ್ಕೃಷ್ಟನಾದವ, ಅಮ್ಮರಸಮ್ಮೋಹ = ಅಮರ ಸಮೂಹ, ಶಬ್ಧ ಆಡುಭಾಷೆಗಳಿಗನುಗುಣವಾಗಿ ದಾಸರು ಅಮ್ಮರಸಮ್ಮೋಹ ಎಂಬ ತದ್ಭವರೂಪದ ಛಾಯೆಯಲ್ಲಿ ಹೇಳಿದ್ದಾರೆ, ನಿಮ್ಮಣುಗಮ್ಮರು = ಈ ಅಮರ ಸಮೂಹವು ನಿನ್ನ ಅಣುಗರು = ನಿನ್ನ ಸೇವಕರು, ಅಮ್ಮರು = ಎನ್ನುವರು, ಅಂಥವನಾದ ನಿನಗೆ... ನಮ್ಮೊ ಪರಮ್ಮೊ ಮಹಮ್ಮ = ನಮೋ ನಮ್ಮೆಲ್ಲರ ಪರಮ ಮಹಿಮನಾದವನೆ	ಬ್ರಹ್ಮನು ಹಿರಿಮಗ ಮಹಾದೇವ ಮೊಮ್ಮಗ ಮರಿಮಗ ಷಣ್ಮುಗ ಅಮರ ಸಮೂಹವು ನಿನ್ನಯ ಅಣುಗರು , ಅಂತವ ನೀನು ನಮ್ಮೆಲ್ಲರ ಪರಮ ಮಹಿಮನು ನೀನು

ಅಂಬರುಹಂಗಳ ಅಂಗನಂತಗತ ಮಂಗಳಪಾಂಗ ವಿಶ್ವಂಗಳ ಮಂಗಳ ಸಿಂಗರದಂಗುಟ ಸಂಗದ ಗಂಗಜ ಕಂಗಳಘಂಗಳ ಹಿಂಗಿಪಳಾಂಗಾ ॥	ಅರ್ಥ: ಅಂಬು+ರುಹ = ನೀರಿನಲ್ಲಿರುವ ಗಿಡ = ಕಮಲ ಅಂಗ = ಶರೀರ = ಕಮಲದಲ್ಲಿ ಬಂದಂಥಾ ಶರೀರ = ಬ್ರಹ್ಮ, ಅಂಗ = ದೇಹ, ಒಟ್ಟಾರೆ ಬ್ರಹ್ಮಾಂಡ, ಅನಂತಗತ = ಇಂತಹ ಬ್ರಹ್ಮಾಂಡಳು ಅನಂತಗತ, ಅಸಂಖ್ಯಾಕವಾಗಿರುವ ಬ್ರಹ್ಮಾಂಡಕ್ಕೆ ಮಂಗಳಾಂಗ = ಮಂಗಳ ಸ್ವರೂಪಿಯಾದ ಹರಿ, ವಿಶ್ವಂಗಳ ಮಂಗಳ = ಸೃಷ್ಟಿಸಿದ ವಿಶ್ವಕ್ಕೆ ಮಂಗಳವನ್ನೀಯಲೋಸುಗ, ಸಿಂಗರದುಂಗುಟ = ಶೃಂಗಾರವಾದ ಅಂಗುಟ = ಉಂಗುಟ, ಶ್ರೀಹರಿಯ ಪಾದದ ಅಂಗುಟಾಗ್ರವು ಶ್ರೀಹರಿಯ ಸ್ವರೂಪವೇ ಆಗಿದೆ. ಅದರ ಸಂಗದ = ಸ್ಪರ್ಶದಿಂದ, ಗಂಗಜ = ಗಂಗಾ ನದಿಯು ಹುಟ್ಟಿತು, ಕಂಗಳಘಂಗಳ = ಗಂಗೆಯ ದೃಷ್ಟಿಯು ಇಹದಲ್ಲಿ ಭಕ್ತರ ಅಘ ಹಿಂಗಿಸುವಳಾಗಿರುವಳು.	ಜಲದಲಿ ಜನಿಸಿದ ಕಮಲದಿ ಜನುಮ ಅನಂತ ವಿಶ್ವದ ಮಂಗಳ ಸ್ವರೂಪಿ ಸಿಂಗಾರದ ಅಂಗುಟ ಸ್ಪರ್ಶದಿ ಗಂಗಜ ಗಂಗೆಯ ಕಂಗಳಿಂ ಇಹದ ಅಘನಾಶಿನಿ
ಪನ್ನಗಪನ್ನಶಯನ್ನ ಮಹೋನ್ನತ ಪನ್ನಗವರವಾಹನ್ನ ರತುನ್ನ ಭವಾನ್ನಸುಖೋನ್ನತ ರನ್ನಗ ರನ್ನಿಜ ನಿನ್ನೆದುರಿನ್ನ್ಯಾರೆನ್ನೊಡೆಯನ್ನೆ ॥	ಅರ್ಥ: ಪನ್ನಗಪನ್ನಶಯನ್ನ = ಸರ್ಪವನ್ನು ಹಾಸಿಗೆ ಮಾಡಿಕೊಂಡವ, ಮಹೋನ್ನತ ಪನ್ನಗವರವಾಹನ್ನ = ಮಹತ್ತರವಾದ ಪನ್ನಗವರ = ಸರ್ಪಕ್ಕಿಂತ ಶ್ರೇಷ್ಟನಾದ ಗರುಡವಾಹನ್ನ, ರತುನ್ನ = ಗುಣಗಳ ರಾಶಿ, ರತ್ನ, ಭವಾರ್ಣಸುಖೋನ್ನತ = ಭವವೆಂಬ ಸಾಗರಕ್ಕೆ ಉನ್ನತವಾದ ಸುಖವೀವ, ರನ್ನಗ ರನ್ನಿಜ = ವಿಶೇಷ ರತ್ನ = ಕಾಂತಿಯನ್ನು ಕೊಡುವವ ರನ್ನಗ, ಅಂಧಕಾರ ಕಳೆಯುವ ಕಾಂತಿ ನೀಡುವವ ರನ್ನಿಜ = ಇಂಥಾ ನೀನಿರುವಾಗ ಇನ್ನ್ಯಾರು ಒಡೆಯನಾಗಲು ಸಾಧ್ಯ.	ಆದಿಶೇಷನನೇ ಶಯನವ ಮಾಡಿದೆ ನಾಗನ ಅಧಿಪ ಗರುಡನೆ ವಾಹನ ರತ್ನದ ರಾಶಿಯ ಭವಸಾಗರಕೆ ಕಾಂತಿಯ ಪಾಲಿಸುವ ವಿಶೇಷ ರತ್ನ ಇಂತವ ನೀನೀರಲು ಒಡೆಯನಿನ್ಯಾರಯ್ಯಾ
ಬಲ್ಲ ಕೈವಲ್ಯಜ್ಞರೊಲ್ಲಭ ಸುಲ್ಲಭ ಬಲ್ಲಿದ ಖುಲ್ಲರದಲ್ಲಣನಲ್ಲದೆ ಹುಲ್ಲುದುನನ್ನೊಳವಲ್ಲ ನಿನ್ನಲ್ಲದೆ ಸಲ್ಲದು ಸೊಲ್ಲ ನಿನ್ನಲ್ಲದಿನಿಲ್ಲ ॥	ಅರ್ಥ: ಬಲ್ಲ ಕೈವಲ್ಯಜ್ಞರ ವಲ್ಲಭ = ಜ್ಞಾನಿಗಳ, ಮೋಕ್ಷಕ್ಕೆ ಅರ್ಹರಾದವರ ವಲ್ಲಭ, ದೊರೆಯಾದ ಹರಿ, ಸುಲ್ಲಭ = ಹರಿಯ ಅರಿತವರಿಗೆ ಸುಲಭ, ಬಲ್ಲಿದ ಖುಲ್ಲರ ದಲ್ಲಣನಲ್ಲದೆ = ಬಲ್ಲಿದ = ವಲಿಷ್ಠ ಹರಿಯು, ಖುಲ್ಲರ = ದೈತ್ಯರ (ತನ್ಮೂಲಕ ಸಾಧನೆಗೆ ಶತ್ರುಗಳಾದ ಅರಿಷಡ್ವರ್ಗಗಳನ್ನೂ ಕೂಡ) ಎದೆಯನ್ನು ದಲ್ಲಣ = ನಡುಗಿಸುವ ಸಾಹಸಿ, ಒಬ್ಬನೆ ಧೈರ್ಯವಂತ ಜಗದಲಿ. ಹುಲ್ಲದು ನಿನ್ನೊಳವಲ್ಲ ನಿನ್ನಲ್ಲದೆ = ಆ ಧೈರ್ಯವು ಹರಿಗಲ್ಲದೆ, ಹುಲು ಜೀವರಿಗೆ ಆಗುತ್ತದೆಯೊ?	ಪ್ರಾಜ್ಞರ ಮೋಕ್ಷವ ಪಾಲಿಸುವ ಹರಿಯೇ ಅರಿತವರಿಗಿದು ಸರಳ ಬಲ್ಲಿದ ಹರಿಯೇ ದೈತ್ಯರನಡಗಿಸುವ ಸಾಹಸಿ ನೀನೊಬ್ಬನೆ ಆ ಸಾಹಸ ನಿನಗಲ್ಲದೆ ಇನ್ನಾರಿಗೆ ಹರಿಯೇ

ಅಂಬರದುಂಬಿಗೆ ತುಂಬೆವಿಶ್ವಂಬಸುರದಿಂಬಿಲಿ ನಿಂಬಿಟ್ಟುಕೊಂಬಕೃಪಾಂಬುಧಿ ಇಂಬಕದಂಬಕಬಿಂಬ ಪ್ರಸನ್ವೇಂಕ ಟನಂಬಿದ ಬಿಂಬನಿವನೆಂಬ ಕುಟುಂಬಿ ॥	ಅರ್ಥ: ಪ್ರಳಯಕಾಲದಲ್ಲಿನ ಹರಿ ಮಹಿಮೆಯನ್ನು ಇಲ್ಲಿ ಹೇಳಿದ್ದಾರೆ. ಅಂಬರದುಂಬಿಗೆತುಂಬೆ = ಇಡೀ ವಿಶ್ವವು (ಅಂಬರವನ್ನು ವಿಶ್ವಕ್ಕೆ ಹೋಲಿಸಿ) ತುಂಬಿತುಂಬೆ = ಪ್ರಳಯಜಲಧಿಯಲ್ಲಿ ತುಂಬಿ ತುಳುಕಾಡಿದಾಗ, ವಿಶ್ವಮ್ = ಈ ಬ್ರಹ್ಮಾಂಡವನ್ನು ಬಸುರದಿ = ಹರಿಯು ಗರ್ಭದಲ್ಲಿ, ಇಟ್ಟುಕೊಂಬ ಕೃಪಾನಿಧೇ = ಆಶ್ರಯ (ಇಂಬು), ಬ್ರಹ್ಮಾಂಡಕ್ಕೆ ಆಶ್ರಯವನ್ನು, ಗರ್ಭದಲ್ಲಿ ಹುದುಗಿಟ್ಟುಕಲ್ಪುವಬು, ಇಂತಹ ವ್ಯಾಪಾರವು ಅತ್ಯಂತ ದಯಾಳುವಾದವನಿಗೆ ಉಂಟು, ಕೃಪಾ ಸಾಗರನಾದ ಹರಿಯೇ ಆತನು, ಇಂಬಕದಂಬಕ = ಇಂಬ = ಆಶ್ರಯ, ಕದಂಬಕ = ಸಮೂಹ, ಸಕಲ ಜೀವ ಸಮೂಹಕ್ಕೆ ಆಶ್ರಯನಾಗಿ ಅಲ್ಲದೆ ಬಿಂಬನಾಗಿ ಇರುವವ, ಬಿಂಬ ಪ್ರಸನ್ವೇಂಕಟ = ಬಿಂಬ ಸ್ವರೂಪಿಯಾಗಿರುವ ದಾಸರ ಬಿಂಬರೂಪಿಯೂ ಆದ ಪ್ರಸನ್ವೇಂಕಟನು ನಂಬಿದ ಬಿಂಬನಿವನೆಂಬ = ಶ್ರದ್ಧೆಯಿಂದ ನಂಬಿದವರಿಗೆ ಬಿಂಬನಂತೆ = ಅತ್ಯಂತ ಸಮೀಪದಲ್ಲಿರುವ ಎಂಬ ವಿಚಾರವನ್ನು ಮನಗಾಣಿಸಿ ವಿಶ್ವ ಕುಟುಂಬಿಯೆಂಬ ಪಾತ್ರವನ್ನು ಆಪ್ತರಿಗೆ ಪರಿಚಯಿಸಿಕೊಡುವನು. ಅಪರೋಕ್ಷ ಜ್ಞಾನವನ್ನಿತ್ತು ರಕ್ಷಿಸುವನು	ಪ್ರಳಯಜಲಧಿಯೊಳು ಜಗವು ಮುಳುಗಲು ಬ್ರಹ್ಮಾಂಡವನೆ ಬಸುರಲಿ ಅಡಗಿಸಿ ಸಕಲ ಜೀವಸಮೂಹಕೆ ಆಸರೆಯಾಗಿ ಬಿಂಬದ ರೂಪದ ಪ್ರಸನ್ನವೆಂಕಟ ನಂಬಿದ ಸಕಲವಿಶ್ವರಕ್ಷಕ ಜಗದೋದ್ಧಾರಕ ನೀನು